ಸೋಮವಾರ, ಮೇ 2, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ವರ್ಷಧಾರೆ ಬೆಂಗಳೂರಿನ ಕೆ.ಆರ್.ಮಾರುಕಟ್ಟೆ ಬಳಿ ಭಾನುವಾರ ಸಂಜೆ ಮಳೆಯಲ್ಲಿಯೇ ನಾಗರಿಕರು ಕೊಡೆ ಹಿಡಿದು ಸಾಗಿದರು

ಈದ್ ಉಲ್ ಫಿತ್ರ್ ನಾಳೆ

ಬೆಂಗಳೂರು: ಭಾನುವಾರ ಚಂದ್ರದರ್ಶನ ಆಗದೇ ಇರುವ ಕಾರಣ ಮಂಗಳವಾರ ಈದ್ ಉಲ್ ಫಿತ್ರ್ ಆಚರಿಸಲು ಕೇಂದ್ರೀಯ ಚಂದ್ರದರ್ಶನ ಸಮಿತಿ ನಿರ್ಧರಿಸಿದೆ.

ಬೆಂಗಳೂರಿನಲ್ಲಿ ಭಾನುವಾರ ಸಂಜೆ ಭಾರಿ ಮಳೆಯಾಗಿದ್ದರಿಂದ ಚಂದ್ರ ಕಾಣಿಸಿಕೊಳ್ಳಲಿಲ್ಲ. ರಾಜ್ಯದ ಇತರ ಜಿಲ್ಲೆಗಳಲ್ಲಿ ಮತ್ತು ದೇಶದ ಯಾವುದೇ ಭಾಗದಲ್ಲೂ ಕಾಣಿಸಲಿಲ್ಲ ಎಂದು ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ರಂಜಾನ್ ತಿಂಗಳ ಉಪವಾಸ ಸೋಮವಾರಕ್ಕೆ ಕೊನೆಗೊಳ್ಳಲಿದೆ. ಚಂದ್ರ ಕಾಣಿಸಿಕೊಂಡಿದ್ದರೆ ಸೋಮವಾರವೇ ಈದ್ ಉಲ್ ಫಿತ್ರ್ ಆಚರಿಸಬೇಕಿತ್ತು. ರಾಜ್ಯ ಸರ್ಕಾರವೂ ಈಗಾಗಲೇ ಸೋಮವಾರದಂದು ಸರ್ಕಾರಿ ರಜೆಯನ್ನು ಘೋಷಿಸಿದೆ. ಆದರೆ, ಚಂದ್ರ ದರ್ಶನ ಆಗದ ಕಾರಣ 30ನೇ ದಿನದ ಉಪವಾಸ ಪೂರೈಸಿ, ಮರುದಿನ ಹಬ್ಬ ಆಚರಿಸಲಾಗುತ್ತಿದೆ.

ಏಪ್ರಿಲ್‌ನಲ್ಲಿ ₹1.68 ಲಕ್ಷ ಕೋಟಿ ಜಿಎಸ್‌ಟಿ ವರಮಾನ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಡಿ ಏಪ್ರಿಲ್‌ನಲ್ಲಿ ₹1.68 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಜಿಎಸ್‌ಟಿ ವ್ಯವಸ್ಥೆಯಡಿಯಲ್ಲಿ ಸಂಗ್ರಹವಾದ ಈವರೆಗಿನ ಗರಿಷ್ಠ ಮೊತ್ತ ಇದಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಭಾನುವಾರ ತಿಳಿಸಿದೆ.

ಮಾರ್ಚ್‌ನಲ್ಲಿ ₹1.42 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ ಏಪ್ರಿಲ್‌ನಲ್ಲಿ ₹25 ಸಾವಿರ ಕೋಟಿಗಳಷ್ಟು ಹೆಚ್ಚು ಸಂಗ್ರಹ ಆದಂತಾಗಿದೆ. ಹಿಂದಿನ ವರ್ಷದ ಏಪ್ರಿಲ್‌ನಲ್ಲಿ ₹1.40 ಲಕ್ಷ ಕೋಟಿ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಶೇ 20ರಷ್ಟು ಹೆಚ್ಚು ಸಂಗ್ರಹ ಆಗಿದೆ.



ಏಪ್ರಿಲ್‌ನಲ್ಲಿ ಸಂಗ್ರಹ ಆಗಿರುವ ಒಟ್ಟಾರೆ ತೆರಿಗೆಯಲ್ಲಿ ಸಿಜಿಎಸ್‌ಟಿ ₹33,159 ಕೋಟಿ, ಎಸ್‌ಜಿಎಸ್‌ಟಿ ₹41,793 ಕೋಟಿ, ಐಜಿಎಸ್‌ಟಿ ₹81,939 ಕೋಟಿ ಹಾಗೂ ಸೆಸ್ ₹10,649 ಕೋಟಿ ಒಳಗೊಂಡಿದೆ.

ಏಪ್ರಿಲ್‌ನಲ್ಲಿ ಜಿಎಸ್‌ಟಿಆರ್‌-3ಬಿ ಮೂಲಕ 1.06 ಕೋಟಿ ಜಿಎಸ್‌ಟಿ ರಿಟರ್ನ್ಸ್ ಸಲ್ಲಿಕೆ ಆಗಿದ್ದು, ಇದರಲ್ಲಿ 97 ಲಕ್ಷ ರಿಟರ್ನ್ಸ್ ಮಾರ್ಚ್‌ಗೆ ಸಂಬಂಧಿಸಿದ್ದಾಗಿದೆ ಎಂದು ಸಚಿವಾಲಯ ಹೇಳಿದೆ.

ತೆರಿಗೆದಾರರು ಸಕಾಲಕ್ಕೆ ರಿಟರ್ನ್ಸ್ ಸಲ್ಲಿಸಲು ಆಗುವಂತೆ ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ರಿಟರ್ನ್ಸ್ ಸಲ್ಲಿಕೆ ಪ್ರಕ್ರಿಯೆ ಸರಳಗೊಳಿಸಲಾಗಿದ್ದು, ತೆರಿಗೆ ವಂಚಿಸುವವರ ವಿರುದ್ಧ ಕಠಿಣ ಕ್ರಮಗಳನ್ನೂ ತೆಗೆದುಕೊಳ್ಳಲಾಗುತ್ತಿದೆ. ಈ ಎಲ್ಲಾ ಕಾರಣಗಳಿಂದಾಗಿ ರಿಟರ್ನ್ಸ್ ಸಲ್ಲಿಕೆಯಲ್ಲಿ ಸುಧಾರಣೆ ಕಂಡುಬಂದಿದೆ ಎಂದು ಅದು ತಿಳಿಸಿದೆ.

ಸಕಾಲಕ್ಕೆ ರಿಟರ್ನ್ಸ್ ಸಲ್ಲಿಸುವವರಿಗೆ ಮಾತ್ರವೇ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆಯಲು ಅವಕಾಶ ನೀಡಿರುವುದರಿಂದ ತೆರಿಗೆ ಸಂಗ್ರಹದಲ್ಲಿ ಹೆಚ್ಚಳ ಆಗುತ್ತಿದೆ. ತೆರಿಗೆ ವಂಚನೆ ಪತ್ತೆಗೆ ದತ್ತಾಂಶ ವಿಶ್ಲೇಷಣೆ ಮತ್ತು ಕೃತಕ ಬುದ್ಧಿಮತ್ತೆ ಬಳಕೆ ಮಾಡುತ್ತಿರುವುದು ಸಹ ದಾಖಲೆ ಮಟ್ಟದ ತೆರಿಗೆ ಸಂಗ್ರಹಕ್ಕೆ ಕೊಡುಗೆ ನೀಡಿವೆ ಎಂದು ಡೆಲಾಯ್ಟ್ ಇಂಡಿಯಾದ ಪಾಲುದಾರ ಎಂ.ಎಸ್. ಮಣಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಆಮ್ಲಜನಕ ದುರಂತಕ್ಕೆ ವರ್ಷ: ಸಂತ್ರಸ್ತರಿಗೆ ಸಿಗದ ನ್ಯಾಯ

ಚಾಮರಾಜನಗರ: ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಸಕಾಲದಲ್ಲಿ ಆಮ್ಲಜನಕ ಪೂರೈಕೆಯಾಗದೆ ಹಲವು ರೋಗಿಗಳು ಮೃತಪಟ್ಟ ಪ್ರಕರಣಕ್ಕೆ ಸೋಮವಾರ (ಮೇ 2) ವರ್ಷ ತುಂಬುತ್ತದೆ.

ಮೃತರಲ್ಲಿ 24 ಮಂದಿಯ ಕುಟುಂಬಗಳಿಗೆ ಹೈಕೋರ್ಟ್ ಸೂಚನೆಯಂತೆ ಸ್ವಲ್ಪ ಪರಿಹಾರ ಸರ್ಕಾರ ನೀಡಿದ್ದು ಬಿಟ್ಟರೆ, ಸಂತ್ರಸ್ತರ ಕುಟುಂಬಗಳಿಗೆ ನ್ಯಾಯ ಸಿಗುವ ಬೆಳವಣಿಗೆಗಳು ನಡೆದಿಲ್ಲ.

‘ಜಿಲ್ಲಾಡಳಿತ, ಆಸ್ಪತ್ರೆಯ ಆಡಳಿತದ ನಿರ್ಲಕ್ಷ್ಯದಿಂದ ದುರಂತ ಸಂಭವಿಸಿದೆ’ ಎಂದು ಹೈಕೋರ್ಟ್ ನೇಮಿಸಿದ್ದ ತನಿಖಾ ಸಮಿತಿ ಹೇಳಿತ್ತು. ಹೈಕೋರ್ಟ್‌ನ ಸೂಚನೆಯಂತೆ, ಮೃತಪಟ್ಟ 24 ಮಂದಿಯ ಕುಟುಂಬಗಳಿಗೆ ಕಳೆದ ವರ್ಷದ ಜೂನ್ ತಿಂಗಳ ಆರಂಭದಲ್ಲಿ ತಲಾ ₹2 ಲಕ್ಷ ಹಾಗೂ ಆಗಸ್ಟ್‌ನಲ್ಲಿ 13 ಮಂದಿಯ ಕುಟುಂಬಗಳಿಗೆ ಹೆಚ್ಚುವರಿಯಾಗಿ ತಲಾ ₹3 ಲಕ್ಷ ತಾತ್ಕಾಲಿಕ ಪರಿಹಾರವನ್ನು ಜಿಲ್ಲಾಡಳಿತ ವಿತರಿಸಿದೆ.

ಸುದ್ದಿ 2 ನಿಮಿಷ

‘ಬೆಂಗಳೂರು ದರ್ಶನ’ ಸಂಪುಟ: ರಿಯಾಯಿತಿ ದರದಲ್ಲಿ ಮಾರಾಟ

ಬೆಂಗಳೂರು: ಉದಯಭಾನು ಕಲಾಸಂಘವು ತನ್ನ 58ನೇ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ, ನಗರದ ಸಮಗ್ರ ಪರಿಚಯ ನೀಡುವ ‘ಬೆಂಗಳೂರು ದರ್ಶನ’ ತ್ರಿವಳಿ ಸಂಪುಟವನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡಲು ನಿರ್ಧರಿಸಿದೆ.

‘ತಲಾ 1 ಸಾವಿರ ಪುಟಗಳು, 7 ಸಾವಿರಕ್ಕೂ ಹೆಚ್ಚು ಚಿತ್ರಗಳಿವೆ. ಇವುಗಳ ಮುಖಬೆಲೆ ₹3,750. ಈಗ ₹2 ಸಾವಿರಕ್ಕೆ ಒದಗಿಸಲಾಗುತ್ತಿದೆ. ಗ್ರಂಥ ಖರೀದಿಸುವವರಿಗೆ 3 ಸಂಪುಟಗಳ ಡಿವಿಡಿಗಳನ್ನು ₹300ಕ್ಕೆ ನೀಡಲಾಗುತ್ತದೆ’ ಎಂದು ಪ್ರಕಟಣೆ ತಿಳಿಸಿದೆ.

‘ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ 22 ಅಧ್ಯಾಯಗಳಿವೆ. 300ಕ್ಕೂ ಹೆಚ್ಚು ತಜ್ಞರು ಹಾಗೂ ವಿದ್ವಾಂಸರ ಲೇಖನಗಳನ್ನು ಇದು ಒಳಗೊಂಡಿದೆ. ಬೆಂಗಳೂರಿನ ಸಮಗ್ರ ನೋಟವನ್ನು ಈ ಪುಸ್ತಕ ತೆರೆದಿಡಲಿದೆ’ ಎಂದು ಹೇಳಿದೆ.

ಆಸಕ್ತರು, ‘ಉದಯಭಾನು ಕಲಾಸಂಘ, ಗವಿಪುರ ಸಾಲು ಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡ ನಗರ, ಬೆಂಗಳೂರು–560019’ ವಿಳಾಸದಲ್ಲಿ ಪ್ರತಿಗಳನ್ನು ಖರೀದಿಸಬಹುದು.

ಮಾಹಿತಿಗೆ: 080–26609343 ಅಥವಾ 26601831.

‘ಸರ್ವಧರ್ಮದವರು ಕನ್ನಡ ಗೌರವಿಸಿ’



ಬೆಂಗಳೂರು: ‘ರಾಜ್ಯದಲ್ಲಿರುವ ಕ್ರೈಸ್ತರು ಕನ್ನಡ ನಾಡು ಮತ್ತು ಸಂಸ್ಕೃತಿಯ ಉಳಿವಿಗಾಗಿ ಹೋರಾಟ ಮಾಡುತ್ತಿರುವುದು ಶ್ಲಾಘನೀಯ. ರಾಜ್ಯದಲ್ಲಿ ವಾಸಿಸುವ ಎಲ್ಲ ಧರ್ಮದವರೂ ಕನ್ನಡವನ್ನು ಗೌರವಿಸಬೇಕು’ ಎಂದು ಕಂದಾಯ ಸಚಿವ ಆರ್.ಅಶೋಕ ಭಾನುವಾರ ಹೇಳಿದರು.

ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ ಹಾಗೂ ಕರ್ನಾಟಕ ಕ್ರೈಸ್ತರ ಕನ್ನಡಾಭಿಮಾನಿಗಳ ಒಕ್ಕೂಟ ನಗರದಲ್ಲಿ ಏರ್ಪಡಿಸಿದ್ದ ಕ್ರೈಸ್ತರ ಅಭಿವೃದ್ಧಿ ಮಂಡಳಿಯ ನೂತನ ಅಧ್ಯಕ್ಷ ಜೆ.ಶಾಂತಕುಮಾರ್ ಕೆನಡಿ ಅವರ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್, ‘ಕ್ರೈಸ್ತರ ಅಭಿವೃದ್ಧಿ ಮಂಡಳಿಯನ್ನು ಅಲ್ಪಸಂಖ್ಯಾತರ ಅಭಿವೃದ್ಧಿ ಮಂಡಳಿ’ಯಿಂದ ಬೇರ್ಪಡಿಸಬೇಕು. ಸ್ವತಂತ್ರವಾದ ಮಂಡಳಿ ರಚಿಸಿ, ₹500 ಕೋಟಿ ಅನುದಾನ ನೀಡಬೇಕು’ ಎಂದು ಒತ್ತಾಯಿಸಿದರು.

ಬೆಂಗಳೂರು ಮಹಾಧರ್ಮ ಕ್ಷೇತ್ರದ ಧರ್ಮಗುರು ಫಾದರ್ ಸೈಮನ್ ಬರ್ತಲೋಮಿಯೊ ಮಾತನಾಡಿದರು. ಸಂತ ಜೋಸೆಫರ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಅಂತೋನಿ ಪ್ರಸಾದ್, ದಲಿತ ಕ್ಯಾಥೋಲಿಕ್ ಕ್ರೈಸ್ತರ ರಕ್ಷಣಾ ವೇದಿಕೆ ಪ್ರಧಾನ ಕಾರ್ಯದರ್ಶಿ ವೆಟ್ರಿ ಸೆಲ್ವನ್ ಇದ್ದರು.

ರಾಷ್ಟ್ರೀಯ ನ್ಯಾಯಾಂಗ ಪ್ರಾಧಿಕಾರ ರಚನೆಗೆ ವಿರೋಧ

ನವದೆಹಲಿ (ಪಿಟಿಐ): ಕೋರ್ಟ್‌ಗಳಿಗೆ ಮೂಲಸೌಕರ್ಯ ಒದಗಿಸುವುದಕ್ಕಾಗಿ ರಚನೆಯಾಗಲಿರುವ ರಾಷ್ಟ್ರೀಯ ನ್ಯಾಯಾಂಗ ಮೂಲ ಸೌಕರ್ಯ ಅಭಿವೃದ್ಧಿ ಪ್ರಾಧಿಕಾರಕ್ಕೆ ಕೆಲವು ರಾಜ್ಯಗಳು ವಿರೋಧ ವ್ಯಕ್ತಪಡಿಸಿವೆ. ದೆಹಲಿಯಲ್ಲಿ ನಡೆದ ಹೈಕೋರ್ಟ್‌ಗಳ ಮುಖ್ಯನ್ಯಾಯಮೂರ್ತಿಗಳು ಹಾಗೂ ಮುಖ್ಯಮಂತ್ರಿಗಳ ಸಮಾವೇಶದಲ್ಲಿ ಪ್ರಾಧಿಕಾರ ರಚನೆ ಸಂಬಂಧ ತೆಗೆದುಕೊಳ್ಳಲಾದ ನಿರ್ಣಯವನ್ನು ಕೆಲವು ಮುಖ್ಯಮಂತ್ರಿಗಳು ಶನಿವಾರ ವಿರೋಧಿಸಿದ್ದಾರೆ.

ಒಂದು ವೇಳೆ ಪ್ರಾಧಿಕಾರ ರಚಿಸುವಂತಿದ್ದರೆ ಅದು ರಾಷ್ಟ್ರಮಟ್ಟಕ್ಕೆ ಬದಲಾಗಿ ರಾಜ್ಯಮಟ್ಟದಲ್ಲಿ ರಚನೆಯಾಗಬೇಕು ಹಾಗೂ ಪ್ರಾಧಿಕಾರದಲ್ಲಿ ಮುಖ್ಯಮಂತ್ರಿ ಅಥವಾ ರಾಜ್ಯ ಸರ್ಕಾರದ ಪ್ರತಿನಿಧಿಯೊಬ್ಬರು ಇರಬೇಕು ಎಂಬ ಸಲಹೆಯನ್ನು ಮುಂದಿಡಲಾಗಿದೆ.

ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ಕೆಲವು ಮುಖ್ಯಮಂತ್ರಿಗಳು ಈ ಕುರಿತು ವಾಗ್ವಾದ ನಡೆಸಿದರು ಎಂದು ಮೂಲಗಳು ತಿಳಿಸಿವೆ. ನಂತರ, ರಾಜ್ಯ ಮಟ್ಟದಲ್ಲಿ ಪ್ರಾಧಿಕಾರ ರಚನೆ ಕುರಿತಂತೆ ರಿಜಿಜು ಹಾಗೂ ಮುಖ್ಯಮಂತ್ರಿಗಳ ನಡುವೆ ಬಹುತೇಕ ಒಮ್ಮತ ಮೂಡಿತು ಎನ್ನಲಾಗಿದೆ.

ವಿಶೇಷ ಸಭೆಯಲ್ಲಿ ಅಧ್ಯಕ್ಷ ಮಹೇಶ ಜೋಶಿ ವಿರುದ್ಧ ಧಿಕ್ಕಾರ ಕೂಗಿದ ಕೆಲ ಸದಸ್ಯರು

ಕಸಾಪ ಬೈಲಾ ತಿದ್ದುಪಡಿಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಹಾವೇರಿ: ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆಯಲ್ಲಿ ಭಾನುವಾರ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಸದಸ್ಯರ ವಿಶೇಷ ಸಭೆಯಲ್ಲಿ ಪರಿಷತ್ತಿನ ನಿಯಮ–ನಿಬಂಧನೆಗಳ (ಬೈಲಾ) ಉದ್ದೇಶಿತ ತಿದ್ದುಪಡಿಗೆ ಕೆಲವು ಸದಸ್ಯರ ವಿರೋಧದ ನಡುವೆಯೂ ಅನುಮೋದನೆ ದೊರೆಯಿತು.

ವಾರ್ಷಿಕ ಸಭೆಯಲ್ಲಿ ಮೊದಲು ಲೆಕ್ಕಪತ್ರಗಳ ಮಂಡನೆಯಾಯಿತು. ಮಧ್ಯಾಹ್ನದ ವಿಶೇಷ ಸಭೆಯಲ್ಲಿ ಕಸಾಪ ಅಧ್ಯಕ್ಷ ಮಹೇಶ ಜೋಶಿ ಭಾಷಣ ಮಾಡಲು ನಿಂತಾಗ ಕೆಲವು ಸದಸ್ಯರು ‘ಜೋಶಿಯವರ ಉದ್ದುದ್ದ ಭಾಷಣ ಕೇಳಲು ಬಂದಿಲ್ಲ, ಮೊದಲು ತಿದ್ದುಪಡಿ ಪ್ರಸ್ತಾವ ಮಂಡಿಸಿ’ ಆಕ್ಷೇಪ ವ್ಯಕ್ತಪಡಿಸಿದರು.

‘ಕೇಳಲು ಇಷ್ಟವಿಲ್ಲದಿದ್ದರೆ ಸಭೆಯಿಂದ ಹೊರಹೋಗಿ’ ಎಂದು ಜೋಶಿ ಖಾರವಾಗಿ ಹೇಳಿದರು. ಇದರಿಂದ ಕೆಂಡಾಮಂಡಲರಾದ ಸಾಹಿತ್ಯಾಸಕ್ತರ ಒಂದು ಗುಂಪು ವೇದಿಕೆಯ ಮುಂಭಾಗಕ್ಕೆ ಧಾವಿಸಿ ‘ಸರ್ವಾಧಿಕಾರತ್ವದ ಧೋರಣೆಗೆ ಧಿಕ್ಕಾರ’ ಎಂದು ಘೋಷಣೆ ಕೂಗಿತು. ಸಭೆಯಲ್ಲಿ ಕೆಲಕಾಲ ಗೊಂದಲ ಉಂಟಾಯಿತು. ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಜೋಶಿಯವರು ಭಾಷಣ ಮೊಟಕುಗೊಳಿಸಬೇಕಾಯಿತು.

ತಿದ್ದುಪಡಿ ಸಮಿತಿಯ ಅಧ್ಯಕ್ಷ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ ಅವರು ತಿದ್ದುಪಡಿ ವಿಚಾರ ಮಂಡಿಸಿ, ಸಭೆಯ ಒಪ್ಪಿಗೆ ಪಡೆದರು.

ಕನ್ನಡ ಸಾಹಿತ್ಯ ಪರಿಷತ್ ಸರ್ವ ಸದಸ್ಯರ ಸಭೆಗೆ 800 ಸದಸ್ಯರಿಗೆ ಮಾತ್ರ ಊಟದ ವ್ಯವಸ್ಥೆ ಮಾಡಲಾಗಿತ್ತು. ಆದರೆ ಮೂರು ಸಾವಿರಕ್ಕೂ ಹೆಚ್ಚು ಜನ ಸೇರಿದ್ದರಿಂದ, ಊಟದ ಕೊರತೆ ಉಂಟಾಯಿತು.

ಅವಸರದಲ್ಲಿ ತಿದ್ದುಪಡಿ ಮಾಡಿಲ್ಲ: ಹಾವೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಹೇಶ ಜೋಶಿ, ‘ಸಭೆಯಲ್ಲಿ ಚರ್ಚೆಗಳು ಸಹಜ. ಆದರೆ, ಕಸಾಪ ಘನತೆ, ಗೌರವಕ್ಕೆ ಧಕ್ಕೆಯಾಗದಂತೆ ಸದಸ್ಯರು ನಡೆದುಕೊಳ್ಳಬೇಕು. ನಾವು ದುರುದ್ದೇಶದಿಂದಾಗಲೀ, ಅವಸರದಿಂದಾಗಲೀ ತಿದ್ದುಪಡಿ ತಂದಿಲ್ಲ. ಸಮಿತಿ ರಚಿಸಿ ಆರು ಸಭೆಗಳಲ್ಲಿ ಚರ್ಚಿಸಲಾಗಿದೆ. ತಿದ್ದುಪಡಿ ಬಗ್ಗೆ ಚುನಾವಣೆ ಪ್ರಣಾಳಿಕೆಯಲ್ಲೇ ತಿಳಿಸಿದ್ದೆ’ ಎಂದು ಸಮರ್ಥಿಸಿಕೊಂಡರು.

‘ಸರ್ವಾಧಿಕಾರಿ ಧೋರಣೆ ಎಂಬುದು ನಿಮ್ಮ ಚಿಂತನೆಯನು ಅವಲಂಬಿಸಿದೆ. ಕಸಾಪ ಅಧ್ಯಕ್ಷನಾಗಿ ನಾನು ಮಾಡುವ ಕೆಲಸ ಕಾರ್ಯಗಳಿಗೆ ಅಡೆ–ತಡೆ ಮಾಡಬಾರದು. ತಿದ್ದುಪಡಿಯ ಅವಶ್ಯ ಬಗ್ಗೆ ಸಭೆಯಲ್ಲಿ ಮಾತನಾಡುವಾಗ ಪದೇ ಪದೇ ಕೆಲವರುತಡೆಯಲು ಯತ್ನಿಸಿದರು. ಅವರ ಉದ್ದೇಶ ಸರಿಯಿಲ್ಲ ಎದು ಸ್ಪಷ್ಟವಾಗುತ್ತದೆ’ ಎಂದು ತಿರುಗೇಟು ನೀಡಿದರು.

‘ಕೋರ್ಟ್ ಅಂಕುಶ ಹಾಕಿಲ್ಲ’

‘70 ವರ್ಷಗಳ ಇತಿಹಾಸವಿರುವ ಸಂವಿಧಾನಕ್ಕೆ ನೂರು ಬಾರಿ ತಿದ್ದುಪಡಿ ತರಲಾಗಿದೆ. ಆದರೆ 100 ವರ್ಷ ಇತಿಹಾಸ ಇರುವ ಕಸಾಪ ನಿಬಂಧನೆಗಳಿಗೆ 6 ಬಾರಿ ಮಾತ್ರ ತಿದ್ದುಪಡಿ ಮಾಡಲಾಗಿದೆ. ಕಸಾಪ ಚಾರಿತ್ರ್ಯಕ್ಕೆ ಚ್ಯುತಿ ಬಾರದ ರೀತಿಯಲ್ಲಿ ತಿದ್ದುಪಡಿ ಮಾಡಲಾಗಿದೆ’ ಎಂದು ತಿದ್ದುಪಡಿ ಸಮಿತಿಯ ಅಧ್ಯಕ್ಷರಾದ ಅರಳಿ ನಾಗರಾಜ ತಿಳಿಸಿದರು. ‘ಸಭೆ ಜರುಗಲಿ, ನಿರ್ಣಯಗಳನ್ನು ತೆಗೆದುಕೊಳ್ಳಲಿ. ಆದರೆ ನ್ಯಾಯಾಲಯದ ತೀರ್ಪಿಗೆ ಒಳಪಟ್ಟಿರಬೇಕು’ ಎಂದು ನ್ಯಾಯಾಲಯ ಹೇಳಿದೆ. ವಿಶೇಷ ಸಭೆ ನಡೆಸಬಾರದು ಎಂದು ಹೇಳಿಲ್ಲ. ಹೀಗಾಗಿ ಅಂಕುಶ, ಹಿನ್ನಡೆ, ಮುಖಭಂಗ ಎಂದು ಮಾಧ್ಯಮಗಳಲ್ಲಿ ತಪ್ಪಾಗಿ ಪದ ಬಳಕೆ ಮಾಡಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

‘ತೀರ್ಪಿಗೆ ಬದ್ಧ’

ಎನ್.ಹನುಮೇಗೌಡ ಅವರು ಕಸಾಪ ಸರ್ವ ಸದಸ್ಯರ ವಿಶೇಷ ಸಭೆಗೆ ತಡೆಯಾಜ್ಞೆ ತರಲು ಮೊದಲಿಗೆ ಕೋ– ಆಪರೇಟಿವ್ ರಿಜಿಸ್ಟ್ರಾರ್, ನಂತರ ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್‌ಗೆ ಹೋದರು. ಆದರೆ, ರಿಜಿಸ್ಟ್ರಾರ್ ಬಳಿ ಹೋದದ್ದನ್ನು ಕೋರ್ಟ್ ಗಮನಕ್ಕೆ ತರಲಿಲ್ಲ. ಆ ವಿಷಯವನ್ನು ನಮ್ಮ ವಕೀಲರು ಕೋರ್ಟ್‌ಗಮನಕ್ಕೆ ತಂದಿದ್ದಾರೆ. ನ್ಯಾಯಾಲಯ ನೀಡುವ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ ಎಂದು ಮಹೇಶ ಜೋಶಿ ಹೇಳಿದರು.

ಪ್ರವಾಸಕ್ಕೆ ಬಂದಿದ್ದ ಬೆಂಗಳೂರಿನ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಸುಂಟಿಕೊಪ್ಪ: ಕೊಡಗಿಗೆ ಪ್ರವಾಸಕ್ಕೆಂದು ಬಂದಿದ್ದ ಬೆಂಗಳೂರಿನ ಬಾಣಸವಾಡಿ ಎಚ್‌ಡಿಎಫ್‌ಸಿ ಬ್ಯಾಂಕ್‌ನ ವ್ಯವಸ್ಥಾಪಕ ಕಾರ್ತಿಕ್ (34) ಏಳನೇ ಹೊಸ ಕೋಟೆ ಬಳಿಯ ರೆಸಾರ್ಟ್‌ನಲ್ಲಿ ಭಾನುವಾರ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಪ್ರವಾಸಿ ತಾಣ ವೀಕ್ಷಿಸಲು ಸ್ನೇಹಿತನ ಕುಟುಂಬದೊಂದಿಗೆ ಬಂದಿದ್ದ ಅವರು ಹಾರಂಗಿ ಹಿನ್ನೀರಿನ ರೆಸಾರ್ಟ್‌ನಲ್ಲಿ ಉಳಿದುಕೊಂಡಿದ್ದರು. ಕುಸಿದು ಬಿದ್ದ ಅವರನ್ನು ಆಸ್ಪತ್ರೆಗೆ ರವಾನಿಸುವ ವೇಳೆ ಮೃತಪಟ್ಟರು.

ಜೆಎಸ್‌ಎಸ್ ಸೇತುಬಂಧ ಕೋರ್ಸಿಗೆ ಹೆಚ್ಚಿನ ಬೇಡಿಕೆ

ಮೈಸೂರು: ಉಕ್ರೇನ್, ರಷ್ಯಾ ಹಾಗೂ ಚೀನಾದಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದು, ವಾಪಸ್ ಬಂದಿರುವ ವಿದ್ಯಾರ್ಥಿಗಳಿಗಾಗಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಉನ್ನತ ಶಿಕ್ಷಣ ಅಕಾಡೆಮಿ ಆರಂಭಿಸಿರುವ ಸೇತುಬಂಧ ಕೋರ್ಸಿಗೆ ಹೆಚ್ಚಿನ ಬೇಡಿಕೆ ವ್ಯಕ್ತವಾಗಿದೆ. ಕೇವಲ 48 ಗಂಟೆಗಳಲ್ಲಿ 511 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದು, ಅವರಲ್ಲಿ 270ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಾಜ್ಯದವರೇ ಆಗಿದ್ದಾರೆ.

‘ಭಾರತೀಯ ವಿದ್ಯಾರ್ಥಿಗಳಿಗೆ ನೆರವಾಗಲು ಆರಂಭಿಸಿರುವ ಈ ಕೋರ್ಸ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪ್ರಾಯೋಗಿಕ ಹಾಗೂ ಭೌತಿಕ ತರಗತಿ ನಡೆಸಲಿದ್ದು, ಕ್ಲಿನಿಕಲ್ ಅಧ್ಯಯನಕ್ಕೂ ಅವಕಾಶ ನೀಡಲಾಗುವುದು. ಆದರೆ, ರೋಗಿಗೆ ಚಿಕಿತ್ಸೆ ನೀಡುವ, ಶಸ್ತ್ರಚಿಕಿತ್ಸೆ ಮಾಡುವ ಅವಕಾಶ ಇರುವುದಿಲ್ಲ.’ ಎಂದು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಇಲ್ಲಿ ಭಾನುವಾರ ತಿಳಿಸಿದರು.

‘ಕೋರ್ಸ್ ಸಂಪೂರ್ಣ ಉಚಿತ. ಊಟ ಮತ್ತು ವಸತಿ ಸೌಕರ್ಯವನ್ನು ವಿದ್ಯಾರ್ಥಿಗಳೇ ಮಾಡಿಕೊಳ್ಳಬೇಕು. ತರಬೇತಿ ಕುರಿತು ಪ್ರಮಾಣಪತ್ರ ನೀಡುವುದಿಲ್ಲ. ಬೇಕೇಬೇಕು ಎನ್ನುವವರಿಗೆ ಮಾತ್ರ ಪ್ರಮಾಣಪತ್ರ ನೀಡಲಾಗುವುದು. ಈ ಪತ್ರವನ್ನು ಪರಿಗಣಿಸುವುದು, ನಿರಾಕರಿಸುವುದು ಆಯಾ ವಿಶ್ವವಿದ್ಯಾಲಯಗಳಿಗೆ ಬಿಟ್ಟ ವಿಚಾರ’ ಎಂದರು. ‘ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪ್ರೊ ಚಾನ್ಸಲರ್ ಡಾ.ಬಿ.ಸುರೇಶ್ ಅವರೂ ಮಾತನಾಡಿದರು.

ಸೇತುಬಂಧ ಕೋರ್ಸ್‌ಗೆ ಸೇರುವ ಆಸಕ್ತರು 6366366663 ಸಂಪರ್ಕಿಸಬಹುದು ಎಂದರು.

ಸೋಮವಾರ, ಮೇ 2, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 121 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ನಂತರ ತಮ್ಮ ಆಸಕ್ತಿ ಹಾಗೂ ನಿರ್ವಹಣಾ ಸಾಮರ್ಥ್ಯಕ್ಕೆ ಅನುಗುಣವಾಗಿ ಕೋರ್ಸ್ ಆಯ್ಕೆ ಮಾಡಿಕೊಂಡರೆ ಯಶಸ್ಸು ಸಾಧ್ಯ





ವಾಣಿಜ್ಯ ಬಳಕೆ ಎಲ್‌ಪಿಜಿ ದರ ₹ 102 ಹೆಚ್ಚಳ

ಬೆಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ಭಾನುವಾರ ₹ 102ರಷ್ಟು ಹೆಚ್ಚಳ ಮಾಡಲಾಗಿದೆ. ಇದರಿಂದಾಗಿ ಬೆಂಗಳೂರಿನಲ್ಲಿ 19 ಕೆ.ಜಿ. ತೂಕದ ಪ್ರತಿ ಸಿಲಿಂಡರ್ ಬೆಲೆಯು ₹ 2,427ಕ್ಕೆ ಏರಿಕೆ ಆಗಿದೆ.

ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಸದ್ಯ 14.2 ಕೆ.ಜಿ. ತೂಕದ ಸಿಲಿಂಡರ್ ದರವು ಬೆಂಗಳೂರಿನಲ್ಲಿ ₹ 952 ಇದೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ



ಪಿಎಸ್‌ಐ ನೇಮಕಾತಿ ಅಕ್ರಮ: ಶರಣಾದ ಮಂಜುನಾಥ ಮೇಳಕುಂದಿ

ಡಿವೈಎಸ್ಪಿ, ಪಿಐಗಳ ಕೈವಾಡ?

ಪ್ರಜಾವಾಣಿ ವಾರ್ತೆ

ಬೆಂಗಳೂರು/ಕಲಬುರಗಿ: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ (ಪಿಎಸ್‌ಐ) ನೇಮಕಾತಿ ಪ್ರಕ್ರಿಯೆಯಲ್ಲಿನ ಅಕ್ರಮ ಕಲಬುರಗಿಯ ಜ್ಞಾನಜ್ಯೋತಿ ಪರೀಕ್ಷಾ ಕೇಂದ್ರದಿಂದ ರಾಜ್ಯ ರಾಜಧಾನಿಯವರೆಗೂ ವ್ಯಾಪಿಸಿರುವುದು ಖಚಿತವಾಗಿದೆ. ರಾಜ್ಯದ ವಿವಿಧ ಭಾಗಗಳ ಹಲವು ಪೊಲೀಸ್ ಅಧಿಕಾರಿಗಳು ಅಕ್ರಮದಲ್ಲಿ ಆರಂಭದಿಂದಲೇ ಭಾಗಿಯಾಗಿರುವ ಸುಳಿವು ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿಗೆ ಲಭಿಸಿದೆ.

ಜ್ಞಾನಜ್ಯೋತಿ ಪರೀಕ್ಷಾ ಕೇಂದ್ರ ಮಾತ್ರವಲ್ಲದೇ ಬೆಂಗಳೂರಿನ ಏಳು ಪರೀಕ್ಷಾ ಕೇಂದ್ರಗಳಲ್ಲಿ ಅಕ್ರಮ ನಡೆದಿರುವುದು ಸಿಐಡಿ ನಡೆಸಿರುವ ತನಿಖೆಯಲ್ಲಿ ಖಚಿತವಾಗಿದೆ. ಪಿಎಸ್‌ಐ ನೇಮಕಾತಿ ಪರೀಕ್ಷೆಗೆ ಪರೀಕ್ಷಾ ಕೇಂದ್ರಗಳನ್ನು ಗುರುತಿಸುವುದು, ಪರೀಕ್ಷಾ ಕೇಂದ್ರಗಳನ್ನು ತೆರೆಯಲು ನಿರಾಕ್ಷೇಪಣಾ ಪತ್ರ ನೀಡುವುದು, ಅಭ್ಯರ್ಥಿಗಳ ಹಂಚಿಕೆ ಸೇರಿದಂತೆ ಆರಂಭಿಕ ಹಂತದಿಂದಲೇ ಕೆಲವು ಪೊಲೀಸ್ ಅಧಿಕಾರಿಗಳು ಹಸ್ತಕ್ಷೇಪ ನಡೆಸಿ, ಅಕ್ರಮ ನೇಮಕಾತಿಯಲ್ಲಿ ಭಾಗಿಯಾಗಿರುವುದು ಕಂಡು ಬಂದಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯದ ವಿವಿಧೆಡೆ ಕಾರ್ಯನಿರ್ವಹಿಸುತ್ತಿರುವ ಮೂವರು ಡಿವೈಎಸ್‌ಪಿಗಳು, ಹತ್ತಕ್ಕೂ ಹೆಚ್ಚು ಪೊಲೀಸ್ ಇನ್‌ಸ್ಪೆಕ್ಟರ್‌ಗಳು, ಹಲವು ಕಾನ್‌ಸ್ಟೆಬಲ್‌ಗಳು ನೇಮಕಾತಿ ಅಕ್ರಮದಲ್ಲಿ ಶಾಮೀಲಾಗಿರುವ ಕುರಿತು ತನಿಖಾ ತಂಡಕ್ಕೆ ಪ್ರಬಲ ಮಾಹಿತಿ ಲಭ್ಯವಾಗಿದೆ. ಕಲಬುರಗಿ ಜಿಲ್ಲೆಯಲ್ಲೇ ಇಬ್ಬರು ಡಿವೈಎಸ್‌ಪಿಗಳು, ಒಬ್ಬ ಇನ್‌ಸ್ಪೆಕ್ಟರ್ ಮತ್ತು ಕೆಲವು ಕಾನ್‌ಸ್ಟೆಬಲ್‌ಗಳು ಅಕ್ರಮಕ್ಕೆ ಕೈಜೋಡಿಸಿರುವ ಶಂಕೆ ಇದೆ. ವಿಚಾರಣೆಗೆ ಹಾಜರಾಗುವಂತೆ ಈ ಎಲ್ಲರಿಗೂ ನೋಟಿಸ್ ನೀಡಲು ಸಿದ್ಧತೆ ನಡೆದಿದೆ ಎಂದು ಸಿಐಡಿ ಮೂಲಗಳು ಹೇಳಿವೆ.

ಪ್ರಕರಣದಲ್ಲಿ ಬಂಧಿತರಾಗಿರುವ ರುದ್ರಗೌಡ ಪಾಟೀಲ ಹಾಗೂ ಕೆಲವು ಅಭ್ಯರ್ಥಿಗಳು ತನಿಖಾ ತಂಡದ ಎದುರು ನೀಡಿರುವ ಹೇಳಿಕೆಗಳನ್ನು ತಾಳೆ ಮಾಡಿದಾಗ ಪೊಲೀಸ್ ಅಧಿಕಾರಿಗಳ ಪಾತ್ರದ ಬಗ್ಗೆ ಬಲವಾದ ಸುಳಿವು ದೊರಕಿವೆ. ಕೆಲವು ಅಭ್ಯರ್ಥಿಗಳಿಗೆ ಪರೀಕ್ಷೆಯಲ್ಲಿ ಸಹಾಯ ಮಾಡುವಂತೆ ಪೊಲೀಸ್ ಅಧಿಕಾರಿಗಳೇ ರುದ್ರಗೌಡ ಪಾಟೀಲಗೆ ಸೂಚನೆ ನೀಡಿದ್ದರು. ಪರೀಕ್ಷೆ ಮುಗಿದ ಬಳಿಕ ಕಾನ್‌ಸ್ಟೆಬಲ್‌ಗಳ ಮೂಲಕ ಅಭ್ಯರ್ಥಿಗಳು ಹಣ ರವಾನಿಸಿದ್ದರು. ಹಣ ಹಂಚಿಕೆ ಕುರಿತು ರುದ್ರಗೌಡ ತೀರ್ಮಾನಿಸಿರುವುದು ತನಿಖೆ ವೇಳೆ ಗೊತ್ತಾಗಿದೆ ಎಂದು ಮೂಲಗಳು ತಿಳಿಸಿವೆ.

ಕಲಬುರಗಿ ಜ್ಞಾನಜ್ಯೋತಿ ಪರೀಕ್ಷಾ ಕೇಂದ್ರದಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ ಬಂಧಿತರ ಸಂಖ್ಯೆ 25ಕ್ಕೇರಿದೆ. ಬೆಂಗಳೂರಿನ ಏಳು ಪರೀಕ್ಷಾ ಕೇಂದ್ರಗಳಲ್ಲಿ ನಡೆದಿರುವ ಅಕ್ರಮದ ಕುರಿತು ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರತ್ಯೇಕ ಪ್ರಕರಣದಲ್ಲಿ ಬಂಧಿತರಾಗಿರುವ 12 ಮಂದಿಯನ್ನು ಹೆಚ್ಚಿನ ವಿಚಾರಣೆಗಾಗಿ ಪೊಲೀಸ್ ವಶಕ್ಕೆ ನೀಡಲಾಗಿದೆ. ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಅವರನ್ನು ಸಿಐಡಿ ತನಿಖಾ ತಂಡದ ವಶಕ್ಕೆ ನೀಡಲಾಗುತ್ತದೆ.

ಶರಣಾದ ಎಂಜಿನಿಯರ್ ಮಂಜುನಾಥ: 20 ದಿನಗಳಿಂದ ತಲೆಮರೆಸಿಕೊಂಡಿದ್ದ ಪ್ರಕರಣದ ಪ್ರಮುಖ ಆರೋಪಿಗಳಲ್ಲಿ ಒಬ್ಬರಾದ ಜಲ ಸಂಪನ್ಮೂಲ ಇಲಾಖೆಯ ಸಹಾಯಕ ಎಂಜಿನಿಯರ್ ಮಂಜುನಾಥ ಮೇಳಕುಂದಿ ಭಾನುವಾರ ಸಿಐಡಿ ಅಧಿಕಾರಿಗಳ ಎದುರು ಶರಣಾದರು.



ಎಂಜಿನಿಯರ್ ಮಂಜುನಾಥ ಮೇಳಕುಂದಿ ಕಲಬುರಗಿಯ ಸಿಐಡಿ ಕ್ಯಾಂಪ್ ಕಚೇರಿಗೆ ಭಾನುವಾರ ಆಟೊದಲ್ಲಿ ಬಂದು ಶರಣಾದರು

ಕಲಬುರಗಿಯ ಐವಾನ್ ಇ ಶಾಹಿ ಅತಿಥಿಗೃಹದಲ್ಲಿನ ಸಿಐಡಿ ಕ್ಯಾಂಪ್ ಕಚೇರಿಗೆ ಆಟೊದಲ್ಲಿ ಬಂದ ಮಂಜುನಾಥ, ಜೊತೆಗೆ ತಂದಿದ್ದ ಬ್ಯಾಗನ್ನು ಹೆಗಲಿಗೇರಿಸಿಕೊಂಡು ಕಚೇರಿ ಒಳಗೆ ಹೋದರು. ಸ್ಥಳದಲ್ಲಿದ್ದ ಮಾಧ್ಯಮದವರನ್ನು ಕಂಡು 'ನನ್ನದೇನೂ ತಪ್ಪಿಲ್ಲ. ಸುಮ್ಮನೇ ಪ್ರಕರಣದಲ್ಲಿ ಸಿಕ್ಕಿಸುತ್ತಿದ್ದಾರೆ' ಎನ್ನುತ್ತಲೇ ಮುಂದೆ ಸಾಗಿದರು.

ಇಲ್ಲಿನ ಜ್ಞಾನಜ್ಯೋತಿ ಶಾಲೆಯ ಪರೀಕ್ಷಾ ಕೇಂದ್ರದಲ್ಲಿ ಒಎಂಆರ್ ಪ್ರತಿಯಲ್ಲಿ ಉತ್ತರಗಳನ್ನು ತಿದ್ದಿಸಿ ಅಕ್ರಮ ಎಸಗಿದ ಆರೋಪ ಇವರ ಮೇಲಿದೆ. ಮಂಜುನಾಥ ಸೇರಿದಂತೆ, ಅಭ್ಯರ್ಥಿಗಳಾದ ರವೀಂದ್ರ ಮೇಳಕುಂದಿ, ಶಾಂತಿಬಾಯಿ ಹಾಗೂ ಶಾಲೆಯ ಮುಖ್ಯ ಶಿಕ್ಷಕ ಕಾಶಿನಾಥ ಬಂಧನಕ್ಕೆ ನ್ಯಾಯಾಲಯ ವಾರೆಂಟ್ ಹೊರಡಿಸಿತ್ತು.

ಮತ್ತಷ್ಟು ಎಂಜಿನಿಯರ್‌ಗಳು ಭಾಗಿ?: ಮಂಜುನಾಥ ಮೇಳಕುಂದಿ ನಿಕಟವರ್ತಿಗಳಾಗಿರುವ ಜಲ ಸಂಪನ್ಮೂಲ ಇಲಾಖೆಯ ಮತ್ತಷ್ಟು ಎಂಜಿನಿಯರ್‌ಗಳು ನೇಮಕಾತಿ ಅಕ್ರಮದಲ್ಲಿ ಭಾಗಿಯಾಗಿರುವ ಶಂಕೆ ಮೇಲೆ ತನಿಖೆ ಮುಂದುವರಿದಿದೆ.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

'ಹಗರಣದಿಂದ ಹರಿದುಬಂತು ಅಪಾರ ಹಣ'

'ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ಎಸಗಿದ್ದು ನಿಜ. ಇದಕ್ಕೆ ದೊಡ್ಡ ಮೊತ್ತದ ಹಣ ಹರಿದು ಬಂದಿದ್ದೂ ನಿಜ' ಎಂದು ಸಿಐಡಿ ವಶದಲ್ಲಿರುವ ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಬಹಿರಂಗಪಡಿಸಿದ್ದಾಗಿ ಮೂಲಗಳು ತಿಳಿಸಿವೆ.

'ಪರೀಕ್ಷೆ ವೇಳೆ ಎರಡು ತಂಡಗಳು ವಾಮಮಾರ್ಗ ಅನುಸರಿಸಿವೆ. ರುದ್ರಗೌಡ ಡಿ. ಪಾಟೀಲ ಹಾಗೂ ಸಹಚರರು ಬ್ಲೂಟೂತ್ ಉಪಕರಣ ಬಳಸುವ ಉಪಾಯ ಮಾಡಿದರೆ, ಮಂಜುನಾಥ ಮೇಳಕುಂದಿ ತಂಡ ಒಎಂಆರ್ ಶೀಟನಲ್ಲಿ ಉತ್ತರ ತಿದ್ದುವ ದಾರಿ ಅನುಸರಿಸಿತ್ತು. ಈ ಇಬ್ಬರ ತಂಡಗಳಲ್ಲೂ ದೊಡ್ಡ ಮೊತ್ತದ ಹಣ ಹರಿದಾಡಿದೆ. ಆದರೆ, ಎಷ್ಟು ಎಂದು ಸ್ಪಷ್ಟವಾಗಿ ಗೊತ್ತಿಲ್ಲ' ಎಂದು ತಪ್ಪೊಪ್ಪಿಕೊಂಡಿರುವುದಾಗಿ ಗೊತ್ತಾಗಿದೆ.

'ಜ್ಞಾನಜ್ಯೋತಿ ಶಾಲೆಯ ಮುಖ್ಯ ಶಿಕ್ಷಕ ಕಾಶಿನಾಥ ಯೋಜನೆ ರೂಪಿಸಿದ್ದನ್ನು ಮೊದಲೇ ನನಗೆ ಹೇಳಿದ್ದರು. ರುದ್ರಗೌಡ, ಮಂಜುನಾಥ ಕೂಡ ಕಾಶಿನಾಥ ಸಂಪರ್ಕದಲ್ಲಿದ್ದರು' ಎಂದು ವಿಚಾರಣೆ ವೇಳೆ ದಿವ್ಯಾ ತಿಳಿಸಿದ್ದಾರೆ ಎಂಬ ಮಾಹಿತಿ ಲಭಿಸಿದೆ.

'ದೈಹಿಕ ಸಹಿಷ್ಣುತಾ ಪರೀಕ್ಷೆಯನ್ನೂ ನಡೆಸಿ'

'ಪಿಎಸ್‌ಐ ನೇಮಕಾತಿಗೆ ನಡೆದ ದೈಹಿಕ ಸಹಿಷ್ಣುತಾ ಪರೀಕ್ಷೆಯಲ್ಲೂ ಅಕ್ರಮ ನಡೆದಿದೆ. ಈ ಬಗ್ಗೆ ಬೆಳಗಾವಿಯಲ್ಲಿ ಎರಡು ಎಫ್‌ಐಆರ್‌ಗಳೂ ದಾಖಲಾಗಿವೆ. ಹಾಗಿದ್ದರೆ, ಇದರ ತನಿಖೆ ನಡೆಸುವವರು ಯಾರು' ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

'ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿದ್ದ ಅಭ್ಯರ್ಥಿಗಳಿಗೆ ಮಾತ್ರ ಮತ್ತೆ ದೈಹಿಕ ಸಹಿಷ್ಣುತೆ ಪರೀಕ್ಷೆ ನಡೆಸಬೇಕು. ಅಲ್ಲದೇ, ನ್ಯಾಯವಾಗಿ ನೇಮಕವಾಗಿದ್ದ ಹಲವರು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅವರಿಗೆ ಅನ್ಯಾಯ ಆಗದಂತೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂಬುದನ್ನೂ ಸ್ಪಷ್ಟಪಡಿಸಬೇಕು' ಎಂದೂ ಭಾನುವಾರ ಆಗ್ರಹಿಸಿದರು.

ಸೆಮಿಕಂಡಕ್ಟರ್: ರಾಜ್ಯದಲ್ಲಿ ₹ 22,900 ಕೋಟಿ ಹೂಡಿಕೆ

ರಾಜ್ಯ– ಐಎಸ್‌ಎಂಸಿ ಅನಲಾಗ್ ಫ್ಯಾಬ್ ಕಂಪನಿ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ₹ 22,900 ಕೋಟಿ ವೆಚ್ಚದಲ್ಲಿ ಸೆಮಿಕಂಡಕ್ಟರ್ ತಯಾರಿಕಾ ಉದ್ದಿಮೆ ಸ್ಥಾಪಿಸಲು ಐಎಸ್‌ಎಂಸಿ ಅನಲಾಗ್ ಫ್ಯಾಬ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ರಾಜ್ಯ ಸರ್ಕಾರದ ಜತೆ ಭಾನುವಾರ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಯೋಜನೆಯಿಂದ 11,500 ಉದ್ಯೋಗ ಸೃಷ್ಟಿಯಾಗಲಿದೆ.

ಅಬುಧಾಬಿಯ ನೆಕ್ಸ್ಟ್ ಆರ್ಬಿಟ್ ವೆಂಚರ್ಸ್ ಮತ್ತು ಇಸ್ರೇಲ್‌ನ ಟವರ್ ಸೆಮಿಕಂಡಕ್ಟರ್ ಸಹಭಾಗಿತ್ವದ ಐಎಸ್‌ಎಂಸಿ, ರಾಜ್ಯದಲ್ಲಿ ತನ್ನ ಉದ್ಯಮ ವಿಸ್ತರಿಸುವ ಪ್ರಯತ್ನಕ್ಕೆ ಚಾಲನೆ ನೀಡಿದೆ. ಐಎಸ್‌ಎಂಸಿ ನಿರ್ದೇಶಕ ಅಜಯ್ ಜಲನ್ ಹಾಗೂ ರಾಜ್ಯದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣ ರೆಡ್ಡಿ ಒಪ್ಪಂದಕ್ಕೆ ಸಹಿ ಹಾಕಿದರು.

ಕೇಂದ್ರ ಸರ್ಕಾರದ 'ಭಾರತೀಯ ಸೆಮಿಕಂಡಕ್ಟರ್ ಮಿಷನ್' ಯೋಜನೆಯಡಿ ಆರಂಭವಾಗುತ್ತಿರುವ ಅತಿದೊಡ್ಡ ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್ ಉದ್ದಿಮೆಗಳಲ್ಲಿ ಇದು ಒಂದು. 1,500 ನೇರ ಉದ್ಯೋಗ ಸೃಷ್ಟಿಯಾದರೆ, 10,000 ಪರೋಕ್ಷ ಉದ್ಯೋಗಗಳ ಸೃಜನೆಯಾಗಲಿದೆ ಎಂದು ಅಂದಾಜು ಮಾಡಲಾಗಿದೆ.

ಏಳು ವರ್ಷಗಳ ಅವಧಿಯಲ್ಲಿ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಗುರಿ ಹೊಂದಲಾಗಿದೆ. ಮೈಸೂರಿನ ಕೋಚನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 150 ಎಕರೆ ಜಮೀನು ಮಂಜೂರು ಮಾಡುವಂತೆ ಐಎಸ್‌ಎಂಸಿ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದೆ.

ಮಹತ್ವದ ಯೋಜನೆ: ಒಪ್ಪಂದಕ್ಕೆ ಸಹಿ ಹಾಕಿದ ಬಳಿಕ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಐಎಸ್‌ಎಂಸಿ ಅನಲಾಗ್ ಫ್ಯಾಬ್ ಕಂಪನಿ ತನ್ನ ಘಟಕವನ್ನು ರಾಜ್ಯದಲ್ಲಿ ಸ್ಥಾಪಿಸುತ್ತಿದೆ. ಈ ಒಪ್ಪಂದವು ವಿಶ್ವದ ಸೆಮಿಕಂಡಕ್ಟರ್ ನಕ್ಷೆಯಲ್ಲಿ ಕರ್ನಾಟಕವವನ್ನು ಗುರುತಿಸುವಂತೆ ಮಾಡುತ್ತದೆ' ಎಂದರು.

'ಸೆಮಿಕಂಡಕ್ಟರ್ ಕ್ಷೇತ್ರದ ಹೂಡಿಕೆ ಆಕರ್ಷಿಸಲು ದೇಶದ ಹಲವು ರಾಜ್ಯಗಳು ಸ್ಪರ್ಧೆಯಲ್ಲಿದ್ದವು. ಈ ಸಂದರ್ಭದಲ್ಲೇ ರಾಜ್ಯ ಸರ್ಕಾರದ ಪ್ರಮುಖವಾದ ಒಪ್ಪಂದಕ್ಕೆ ಸಹಿಹಾಕಿದೆ. ರಾಜ್ಯದಲ್ಲಿ ಹೂಡಿಕೆದಾರರಿಗೆ ಆರ್ಥಿಕ ಪ್ರೋತ್ಸಾಹಗಳನ್ನು ನೀಡುವುದರ ಜತೆಗೆ ಕಾರ್ಯನಿರ್ವಹಣೆಗೆ ಪೂರಕವಾದ ಉತ್ತಮ ವಾತಾವರಣ ಸೃಷ್ಟಿಸಲಾಗಿದೆ. ದೇಶದಲ್ಲೇ ಅತ್ಯುತ್ತಮವಾದ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲ ಹೊಂದಿರುವುದರಿಂದ ಹೆಚ್ಚಿನ ಹೂಡಿಕೆ ಹರಿದುಬರುತ್ತಿದೆ' ಎಂದು ಹೇಳಿದರು.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಭಾರತದಲ್ಲಿನ ಇಸ್ರೇಲ್ ರಾಯಭಾರಿ ನಾವರ್ ಗಿಲೋನ್, ಐಎಸ್‌ಎಂಸಿ ಮುಖ್ಯಸ್ಥ ಇರೇಜ್ ಇಂಬರಮನ್ ಮುಂತಾದವರು ಉಪಸ್ಥಿತರಿದ್ದರು.

'ಪದೇ ಪದೇ ನಾಯಕತ್ವ ಬದಲಾವಣೆಯೇ ಬಿಜೆಪಿ ಶಕ್ತಿ'

'ಶಾಕ್' ಕೊಟ್ಟ ಸಂತೋಷ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷದ ನಾಯಕತ್ವ ಮತ್ತು ಚುನಾವಣೆಗಳಲ್ಲಿ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಮೈಸೂರಿನಲ್ಲಿ ಶನಿವಾರ ಆಡಿರುವ ಮಾತುಗಳು ಪಕ್ಷದಲ್ಲಿ ಚರ್ಚೆಗೆ ಕಾರಣವಾಗಿದೆ. ಕುಟುಂಬ ರಾಜಕಾರಣ ಮುಂದುವರಿಸಬೇಕೆಂಬ ಧಾವಂತದಲ್ಲಿರುವ ಬಿಜೆಪಿಯ ಹಲವು ಹಿರಿಯರಲ್ಲಿ ಆತಂಕವೂ ಮೂಡಿಸಿದೆ.

ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಮೈಸೂರಿನಲ್ಲಿ ನಡೆದ ಪಕ್ಷದ ಪ್ರಮುಖ ನಾಯಕರ ಸಭೆಯಲ್ಲಿ ಕಟ್ಟುನಿಟ್ಟಿನ ಸಂದೇಶವನ್ನು ಅವರು ರವಾನಿಸಿದ್ದಾರೆ. ಪ್ರಮುಖವಾಗಿ, 'ಬದಲಾವಣೆಗೆ ತಕ್ಕಂತೆ ಬದಲಾವಣೆಯಾಗದಿದ್ದರೆ ನಾಶ ಖಚಿತ' ಮತ್ತು 'ಪದೇ ಪದೇ ನಾಯಕತ್ವ ಬದಲಾವಣೆಯೇ ಬಿಜೆಪಿಯ ಶಕ್ತಿ' ಎಂದು ಹೇಳಿದ್ದಾರೆ. ಈ ಮಾತುಗಳು ಮುಖ್ಯಮಂತ್ರಿ ಬದಲಾವಣೆ ಸಾಧ್ಯತೆಯೂ ಸೇರಿ ವಿವಿಧ ರೀತಿಯ ವ್ಯಾಖ್ಯಾನಗಳಿಗೆ ಕಾರಣವಾಗಿದೆ.

ಉತ್ತಮವಾಗಿ ಕಾರ್ಯನಿರ್ವಹಣೆ ಮಾಡದ ಮತ್ತು ಜನರ ಸಂಕಷ್ಟಗಳಿಗೆ ಸ್ಪಂದಿಸದ ಶಾಸಕರಿಗೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ತಪ್ಪುತ್ತದೆ ಎಂಬ ಮಾತು ಪಕ್ಷದ ವಲಯದಲ್ಲಿ ಕೇಳಿ ಬಂದಿತ್ತು. ಇದೀಗ ಸಂತೋಷ್ ಅವರು ಅದನ್ನು ಪರೋಕ್ಷ ಮಾತುಗಳಲ್ಲಿ ಹೇಳಿದ್ದಾರೆ.

4ನೇ ಪುಟ ನೋಡಿ

ವಾರ್ಷಿಕೋತ್ಸವ

ದೇವನಹಳ್ಳಿ: ಇಲ್ಲಿನ ಚೌಡೇಶ್ವರಿ ದೇಗುಲದ 9ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಮೇ 2 ಹಾಗೂ 3ರಂದು ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ. ರಾಜ್ಯ, ಹೊರ ರಾಜ್ಯಗಳಿಂದ ಭಕ್ತರು ಬರುತ್ತಾರೆ. ಪ್ರತಿ ಹುಣ್ಣಿಮೆಯಂದು ಅನ್ನದಾಸೋಹವಾಗುತ್ತದೆ.

ರಸ್ತೆ ವಿಸ್ತರಣೆಗೆ 180 ಮರಗಳ ತೆರವು?

ಬೆಂಗಳೂರು: ನೆಲಗದರನಹಳ್ಳಿ ತಿರುವಿನಿಂದ ಗಂಗಾ ಇಂಟರ್‌ನ್ಯಾಷನಲ್ ಸ್ಕೂಲ್‌ವರೆಗೆ ರಸ್ತೆ ವಿಸ್ತರಣೆ ಸಲುವಾಗಿ 180 ಮರಗಳನ್ನು ತೆರವು ಮಾಡಲು ಬಿಬಿಎಂಪಿ ಮುಂದಾಗಿದೆ.

ಇಲ್ಲಿನ ಕಿರಿದಾದ ರಸ್ತೆಯು ಈ ಶಾಲೆಯನ್ನು ತುಮಕೂರು ಮುಖ್ಯ ರಸ್ತೆಗೆ ಸಂಪರ್ಕಿಸುತ್ತದೆ. ನಾಗಸಂದ್ರ ತಿರುವಿನ ನಂತರ ಅಗಲ ಕಿರಿದಾಗಿರುವ ಕಡೆ ದಟ್ಟಣೆ ಉಂಟಾಗಿ ಸಂಚಾರಕ್ಕೆ ಸಮಸ್ಯೆ ಎದುರಾಗುತ್ತಿದೆ. ಹಾಗಾಗಿ ರಸ್ತೆ ವಿಸ್ತರಿಸಲು ನಿರ್ಧರಿಸಲಾಗಿದೆ.

ದಾಸರಹಳ್ಳಿ ವಿಭಾಗದ ಬಿಬಿಎಂಪಿ ಎಂಜಿನಿಯರ್‌ಗಳು ರಸ್ತೆ ವಿಸ್ತರಣೆಗೆ ಮರಗಳ ತೆರವಿಗೆ ಅನುಮತಿಗೆ ಅರಣ್ಯ ವಿಭಾಗವನ್ನು ಕೋರಿದ್ದರು. ಅರಣ್ಯ ಅಧಿಕಾರಿಗಳು ಈ ಕುರಿತು ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನಿಸಿದ್ದಾರೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಗಾಂಧಿ ಬಜಾರ್: ಪಾದಚಾರಿ ಮಾರ್ಗ ಅತಿಕ್ರಮಣ

ಗಾಂಧಿ ಬಜಾರ್‌ನ ವಿದ್ಯಾರ್ಥಿ ಭವನದ ಸಮೀಪದ ಪಾದಚಾರಿ ಮಾರ್ಗವನ್ನು ವ್ಯಾಪಾರಿಗಳು ಅತಿಕ್ರಮಿಸಿಕೊಂಡಿದ್ದಾರೆ. ಈಗ ಪಾದಚಾರಿ ಮಾರ್ಗ ಮಾತ್ರವಲ್ಲದೆ ರಸ್ತೆವರೆಗೂ ಈ ಅತಿಕ್ರಮಣ ವ್ಯಾಪಿಸಿದೆ. ಇದರಿಂದ ಪಾದಚಾರಿಗಳಿಗೆ ನಡೆಯಲು ಸೂಕ್ತ ಜಾಗ ಇಲ್ಲವಾಗಿದೆ.

ಸಾರ್ವಜನಿಕರ ವಾಹನ ನಿಲ್ಲಿಸಲು ನಿಗದಿಯಾಗಿರುವ ಜಾಗದಲ್ಲೂ ಅಂಗಡಿಗಳನ್ನು ತೆರೆಯಲಾಗಿದೆ. ಈ ಕಾರಣದಿಂದ ವಾಹನ ನಿಲ್ಲಿಸಲು ಬಹಳ ತೊಂದರೆಯಾಗಿದೆ. ಇರುವ ಜಾಗದಲ್ಲಿ ವಾಹನ ನಿಲ್ಲಿಸಲು ಯತ್ನಿಸಿದರೆ, ಅಲ್ಲಿರುವ ಕೆಲವರು ದರ್ಪ ತೋರುತ್ತಾರೆ. ಸಂಚಾರ ಪೊಲೀಸರು ಈ ಬಗ್ಗೆ ಗಮನಹರಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಿ. ಈ ರಸ್ತೆ ಹಾಗೂ ಪಾದಚಾರಿ ಮಾರ್ಗವನ್ನು ಅತಿಕ್ರಮಣದಿಂದ ಮುಕ್ತಗೊಳಿಸಿ.

ಬಿ.ಎಸ್.ಮನೋಹರ್, ಬಸವನಗುಡಿ



ಗಾಂಧಿಬಜಾರ್‌ನಲ್ಲಿ ರಸ್ತೆವರೆಗೆ ವ್ಯಾಪಿಸಿರುವ ಅಂಗಡಿಗಳು

ಕುಸಿದ ಕಲ್ಲಿನ ಚಪ್ಪಡಿ



ಮಲ್ಲತ್ತಹಳ್ಳಿಯ ಎಂ.ಪಿ.ಎಂ ಬಡಾವಣೆ ರಸ್ತೆಯಲ್ಲಿ ಮುರಿದು ಬಿದ್ದಿರುವ ಕಲ್ಲಿನ ಚಪ್ಪಡಿ

ಮಲ್ಲತ್ತಹಳ್ಳಿಯ ಎಂ.ಪಿ.ಎಂ. ಬಡಾವಣೆಯ 7ನೇ ಮುಖ್ಯರಸ್ತೆಯಲ್ಲಿ ಚರಂಡಿಯ ಮೇಲೆ ಮುಚ್ಚಲಾಗಿದ್ದ ಕಲ್ಲಿನ ಚಪ್ಪಡಿ ಮುರಿದು ಬಿದ್ದು ಹಲವು ದಿನಗಳಾಗಿವೆ. ರಸ್ತೆಯ ಮಧ್ಯಾಭಾಗದಲ್ಲೇ ಕಲ್ಲು ಕುಸಿದಿರುವುದರಿಂದ ಗುಂಡಿ ಬಿದ್ದು, ವಾಹನ ಸವಾರರಿಗೆ ಮೃತ್ಯುಕೂಪವಾಗಿ ಪರಿಣಮಿಸಿದೆ.

ರಾತ್ರಿ ವೇಳೆ ಗುಂಡಿಯ ಅರಿವಿಲ್ಲದೆ ವಾಹನ ಸವಾರರು ಅಪಾಯಕ್ಕೆ ಸಿಲುಕುವ ಸಾಧ್ಯತೆ ಇದೆ. ಈ ರಸ್ತೆಯಲ್ಲೇ ಅಕ್ಕಪಕ್ಕದ ಬಡಾವಣೆಯ ನೂರಾರು ಸಾರ್ವಜನಿಕರು ಸಂಚರಿತ್ತಾರೆ. ಮುರಿದಿರುವ ಕಲ್ಲಿನ ಚಪ್ಪಡಿಯನ್ನು ತುರ್ತಾಗಿ ತೆರವು ಮಾಡಿ, ಹೊಸ ಕಲ್ಲನ್ನು ಅಳವಡಿಸಬೇಕು. ರಸ್ತೆಯನ್ನು ಸಂಚಾರಕ್ಕೆ ಯೋಗ್ಯವಾಗಿ ಮಾಡಬೇಕು. ಇಲ್ಲದಿದ್ದರೆ, ಅಪಾಯ ಕಟ್ಟಿಟ್ಟ ಬುತ್ತಿ.

ತುಕಾರಾಂ, ಮಲ್ಲತ್ತಹಳ್ಳಿ



ಎಚ್‌ಬಿಆರ್ ಬಡಾವಣೆಯ 17 ಎ ಮುಖ್ಯರಸ್ತೆಯ ದುಸ್ಥಿತಿ

ಡಾಂಬರು ರಸ್ತೆ ನಿರ್ಮಿಸಿ

ಎಚ್‌ಬಿಆರ್ ಬಡಾವಣೆಯ 5ನೇ ಬ್ಲಾಕ್‌ನಲ್ಲಿರುವ 17ಎ ಮುಖ್ಯರಸ್ತೆಯಲ್ಲಿ ಡಾಂಬರು ಕಿತ್ತುಬಂದಿದೆ. ಜಲಮಂಡಳಿಯವರು ಈ ಹಿಂದೆ ಇದೇ ರಸ್ತೆಯಲ್ಲಿ ಕಾಮಗಾರಿ ನಡೆಸಿದ್ದರು. ಕಾಮಗಾರಿಗಾಗಿ ರಸ್ತೆಯನ್ನು ಅಗೆದು ಹಾಗೆಯೇ ಬಿಟ್ಟಿದ್ದರು.

ಮೂರು ವರ್ಷಗಳಿಂದ ರಸ್ತೆ ದುಸ್ಥಿತಿಯಲ್ಲೇ ಇದೆ. ಗುಂಡಿಗಳ ರಸ್ತೆಯಾಗಿ ಬದಲಾಗಿದೆ. ಮಳೆ ಬಂದರೆ ರಸ್ತೆಯ ತುಂಬ ನೀರು ನಿಂತಿರುತ್ತದೆ. ರಸ್ತೆಗೆ ಡಾಂಬರು ಹಾಕುವ ಮೂಲಕ ಹೊಸದಾಗಿ ಮತ್ತು ಗುಣಮಟ್ಟದಿಂದ ನಿರ್ಮಿಸಿದರೆ ಜನರಿಗೆ ಅನುಕೂಲವಾಗುತ್ತದೆ.

ಸಾದಿಕ್, ಸಾರ್ವಜನಿಕ

ಕಲುಷಿತಗೊಳ್ಳುತ್ತಿದೆ ಕೋಗಿಲು ಕೆರೆ

ಕಟ್ಟಿಗೇನಹಳ್ಳಿ ಕಡೆಯಿಂದ ಅಕ್ಕಪಕ್ಕದ ಬಡಾವಣೆಗಳ ಚರಂಡಿ ನೀರು ನೇರವಾಗಿ ಕೋಗಿಲು ಕೆರೆಯನ್ನು ಸೇರುತ್ತಿದೆ. ಇದರಿಂದ ಜಲಮೂಲ ಕಲುಷಿತಗೊಂಡು ದುರ್ನಾತ ಬೀರುತ್ತಿದೆ. ವಾಯುವಿಹಾರಕ್ಕೆ ಬರುವವರಿಗೆ ಇದರಿಂದ ಸಮಸ್ಯೆಯಾಗಿದ್ದು, ಮೂಗು ಮುಚ್ಚಿಕೊಂಡು ನಡೆಯುತ್ತಾರೆ. ಕರೆಯ ನೀರು ಕಲುಷಿತಗೊಂಡಿರುದ್ದು, ಮೀನುಗಳು ಸಾಯುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸ್ಥಳೀಯ ಜನಪ್ರತಿನಿಧಿಗಳು ಈ ಬಗ್ಗೆ ಗಮನಹರಿಸಬೇಕು. ಕೋಗಿಲು ಕೆರೆಯನ್ನು ರಕ್ಷಿಸಬೇಕು.

ರವಿಕುಮಾರ್, ಕೋಗಿಲು ನಿವಾಸಿ



ಕೋಗಿಲು ಕೆರೆ ಕಲುಷಿತಗೊಂಡಿರುವುದು

ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟದ ಕಾರ್ಯಕ್ರಮದಲ್ಲಿ ಸಿ.ಎಂ ಅಭಿಮತ

‘ಭಾಷಣದ ಸರಕಾದ ಸಾಮಾಜಿಕ ನ್ಯಾಯ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ಸಾಮಾಜಿಕ ನ್ಯಾಯ ಭಾಷಣದ ಸರಕಾಗಿ ಹೋಗಿದೆ. ಮೂಲಭೂತವಾಗಿ ದೊರಕಬೇಕಾದ ಸವಲತ್ತುಗಳನ್ನು ಒದಗಿಸಿದರೆ ಆಯಾ ಸಮಾಜಗಳೇ ಸಾಮಾಜಿಕ ನ್ಯಾಯ ಪಡೆದುಕೊಳ್ಳುವ ಶಕ್ತಿ ಪಡೆಯಲಿವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟದ ವತಿಯಿಂದ ಕೆಂಗೇರಿ ಬಳಿಯ ರಾಮಾನುಜ ಮಠದಲ್ಲಿ ಹಮ್ಮಿಕೊಂಡಿದ್ದ ಕೃತಜ್ಞತಾ ಸಮಾರಂಭದಲ್ಲಿ ಅವರು ಮಾತನಾಡಿದರು.

ರಸ್ತೆಗಳು, ಕಟ್ಟಡಗಳನ್ನು ನಿರ್ಮಾಣ ಮಾಡುವುದಷ್ಟೇ ಸರ್ಕಾರದ ಕೆಲಸವಲ್ಲ. ಯಾವುದೇ ಕುಟುಂಬ ಹಸಿವಿನಿಂದ ನರಳದಂತೆ ಹಾಗೂ ಸ್ವಾಭಿಮಾನದಿಂದ ಬದುಕುಕಟ್ಟಿ ಕೊಳ್ಳುವ ವಾತಾವರಣವನ್ನು ಸೃಷ್ಟಿಸಬೇಕು. ಅದೇ ಸುಭಿಕ್ಷ ಸರ್ಕಾರದ ಲಕ್ಷಣ ಎಂದರು.

ಕೆಲ ಮಂದಿ ಸಾಮರ್ಥ್ಯದ ಬಗ್ಗೆ ಪದೇ ಪದೇ ಮಾತನಾಡುತ್ತಾರೆ. ಜನರು ತಕ್ಕ ಉತ್ತರ ನೀಡಿದ ಬಳಿಕವೂ ಅವರು ನಾವೇ ಸಮರ್ಥರು ಎಂಬ ಭ್ರಮೆಯಲ್ಲಿದ್ದಾರೆ. ಸೂರಿಲ್ಲವರಿಗೆ ಸೂರು, ಶಿಕ್ಷಣ ವಂಚಿತರಿಗೆ ಶಿಕ್ಷಣ ನೀಡುವುದೇ ಸಾಮರ್ಥ್ಯ. ಭಾಷಣಗಳಿಂದ ಜನರ ಉದ್ಧಾರ ಆಗದು. ದೀನ ದಲಿತರ ಬದುಕು ಹಸನುಗೊಳಿಸುವ ಕಾರ್ಯದಲ್ಲಿ ತೊಡಗಿದ್ದೇನೆ. ನುಡಿದಂತೆ ನಡೆದು ಜನರ ಆಶೀರ್ವಾದ ಬೇಡುತ್ತೇನೆ’ ಎಂದರು.

ಒಕ್ಕೂಟದ ಅಧ್ಯಕ್ಷ ಹಾಗೂ ಕಾಗಿನೆಲೆ ಗುರುಪೀಠಾಧ್ಯಕ್ಷ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಅವರು, ‘ಎಲ್ಲ ಹಿಂದುಳಿದ ವರ್ಗದವರಿಗೆ ಸಾಮಾಜಿಕ ನ್ಯಾಯ ಒದಗಿಸುವ ಉದ್ದೇಶದಿಂದ ಒಕ್ಕೂಟ ಸ್ಥಾಪನೆಯಾಗಿದೆ. ಇದರಲ್ಲಿರುವ ಎಲ್ಲ 40 ಮಠಗಳಿಗೆ ಸೇರಿ ₹119 ಕೋಟಿ ಅನುದಾನ ಬಿಡುಗಡೆಯಾಗಿದೆ. ಈ ಹಣದಲ್ಲಿ ಶೈಕ್ಷಣಿಕ, ದಾಸೋಹದಂಥ ಸಮಾಜಮುಖಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು’ ಎಂದರು.

ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಶಾಂತವೀರ ಸ್ವಾಮೀಜಿ, ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಈಶ್ವರಾನಂದ ಪುರಿ ಸ್ವಾಮೀಜಿ, ಸೋಮೇಶ್ವರ ಸ್ವಾಮೀಜಿ, ಹಾಗೂ ಸತ್ಯಕ್ಕ ತಾಯಿ ಸೇರಿ 7 ಮಹಿಳಾ ಮಠಾಧೀಶರು, ಸಚಿವರಾದ ಮುನಿರತ್ನ, ಬೈರತಿ ಬಸವರಾಜು ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಕಟ್ಟಡ, ರಸ್ತೆ ನಿರ್ಮಿಸುವುದೇ ಸರ್ಕಾರದ ಕೆಲಸವಲ್ಲ
- ದೀನ, ದಲಿತರ ಬದುಕು ಹಸನುಗೊಳಿಸಲು ಆದ್ಯತೆ
- ನುಡಿದಂತೆ ನಡೆದು ಜನರ ಆಶೀರ್ವಾದ ಕೇಳುತ್ತೇನೆ



ಕಾರ್ಯಕ್ರಮದಲ್ಲಿ ಬಸವರಾಜ ಬೊಮ್ಮಾಯಿ ಅವರನ್ನು ಸನ್ಮಾನಿಸಲಾಯಿತು. ನಿರಂಜನಾನಂದ ಪುರಿ ಸ್ವಾಮೀಜಿ, ಸಚಿವರಾದ ಮುನಿರತ್ನ, ಬೈರತಿ ಬಸವರಾಜು ಮತ್ತಿತರರು ಇದ್ದಾರೆ

ಹೆಡ್‌ ಕಾನ್‌ಸ್ಟೆಬಲ್ ಸಾವು ಪ್ರಕರಣ: ಡೆತ್‌ನೋಟ್ ಪತ್ತೆ

ಉಡುಪಿ: ಸಶಸ್ತ್ರ ಮೀಸಲು ಪಡೆಯ ಹೆಡ್ ಕಾನ್‌ಸ್ಟೆಬಲ್ ರಾಜೇಶ್ ಕುಂದರ್ ಸಾವಿನ ಪ್ರಕರಣಕ್ಕೆ ತಿರುವು ಸಿಕ್ಕಿದ್ದು, ಅವರು ಬರೆದಿಟ್ಟಿದ್ದಾರೆ ಎನ್ನಲಾದ ಡೆತ್ ನೋಟ್ ಶನಿವಾರ ಪತ್ತೆಯಾಗಿದೆ.

‘ಆದಿ ಉಡುಪಿ ಶಾಲೆಯಲ್ಲಿ ಕರ್ತವ್ಯ ನಿರತರಾಗಿದ್ದಾಗ ಆಕಸ್ಮಿಕವಾಗಿ ಗುಂಡು ಸಿಡಿದು ರಾಜೇಶ್ ಮೃತಪಟ್ಟಿದ್ದಾರೆ’ ಎಂದು ಪ್ರಕರಣ ದಾಖಲಾಗಿತ್ತು.

‘ನನ್ನ ಸಾವಿಗೆ ಗಂಗೊಳ್ಳಿ ಠಾಣೆಯ ಪಿಎಸ್‌ಐ ನಂಜಪ್ಪ ಹಾಗೂ ಡಿಎಆರ್ ಎಪಿಸಿಗಳಾದ ಉಮೇಶ್ ಮತ್ತು ಅಶ್ಫಾಕ್ ಕಾರಣ’ ಎಂಬ ಉಲ್ಲೇಖ ಡೆತ್‌ನೋಟ್‌ನಲ್ಲಿದೆ. ಆರೋಪಿಗಳ ವಿರುದ್ಧ 306 ಆರ್‌ಡಬ್ಲ್ಯು, 34 ಐಪಿಸಿ ಅಡಿ ಪ್ರಕರಣ ದಾಖಲಾಗಿದೆ. ರಾಜೇಶ್ ಜತೆ ಆದಿ ಉಡುಪಿ ಶಾಲೆಯಲ್ಲಿ ಕರ್ತವ್ಯಕ್ಕೆ ನಿಯೋಜಿತಗೊಂಡಿದ್ದ ಉಡುಪಿ ಡಿಎಆರ್ ಘಟಕದ ಕಾನ್‌ಸ್ಟೆಬಲ್ ಗಣೇಶ್, ಡಿಎಆರ್ ಕಚೇರಿಯಲ್ಲಿ ಕಿಟ್ ಬ್ಯಾಗ್‌ನಿಂದ ಸಮವಸ್ತ್ರ, ಬೆಡ್‌ಶೀಟ್ ಹೊರ ತೆಗೆಯುವಾಗ ಡೆತ್‌ನೋಟ್ ಸಿಕ್ಕಿದೆ.

ನೃಪತುಂಗ ವಿ.ವಿ ಉದ್ಘಾಟನೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನ’ದಡಿಯಲ್ಲಿ ಅಸ್ತಿತ್ವಕ್ಕೆ ಬಂದಿರುವ ನೃಪತುಂಗ ವಿಶ್ವವಿದ್ಯಾಲಯದ ಉದ್ಘಾಟನಾ ಸಮಾರಂಭವನ್ನು ಇದೇ 3ರಂದು (ಮಂಗಳವಾರ) ಏರ್ಪಡಿಸಲಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ವಿಶ್ವವಿದ್ಯಾಲಯದ ಶೈಕ್ಷಣಿಕ ಸಮುಚ್ಚಯ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ’ ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

‘ಕಾರ್ಯಕ್ರಮದ ಸಿದ್ಧತೆಗಳನ್ನು ಭಾನುವಾರ ಪರಿಶೀಲಿಸಿದ ಅವರು, ಸರ್ಕಾರಿ ಕಲಾ ಕಾಲೇಜಿನ ಮೈದಾನದಲ್ಲಿ ಉದ್ಘಾಟನೆ ಕಾರ್ಯಕ್ರಮ ನಡೆಯಲಿದೆ. 5 ಸಾವಿರ ಜನ ಭಾಗವಹಿಸುವ ನಿರೀಕ್ಷೆಯಿದೆ. ಸಮಾರಂಭವನ್ನು ಚಾರಿತ್ರಿಕ, ಸ್ಮರಣೀಯವಾಗಿ ಏರ್ಪಡಿಸಲಾಗುತ್ತದೆ’ ಎಂದರು.

‘ಮೈಸೂರಿನ ಅರಸ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 100 ವರ್ಷಗಳ ಹಿಂದೆ (1921ರಲ್ಲಿ) ಸ್ಥಾಪಿಸಿದ್ದ ಈ ಶಿಕ್ಷಣ ಸಂಸ್ಥೆಯು ಹಂತಹಂತವಾಗಿ ಬೆಳೆದು ಬಂದಿದೆ. ಇದೀಗ ಸಂಸ್ಥೆ ಪೂರ್ಣಪ್ರಮಾಣದಲ್ಲಿ ವಿಶ್ವವಿದ್ಯಾಲಯದ ರೂಪ ಪಡೆಯುತ್ತಿದೆ. ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ ವಿಶ್ವವಿದ್ಯಾಲಯ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಲಿದೆ. ಪಠ್ಯದ ಜತೆಗೆ ಕೌಶಲ ಅಭಿವೃದ್ಧಿಗೂ ಆದ್ಯತೆ ಇರಲಿದೆ’ ಎಂದರು.

‘ನೃಪತುಂಗ ವಿಶ್ವವಿದ್ಯಾಲಯದಲ್ಲಿ ಬಿ.ಎಸ್ಸಿ ಮತ್ತು ಬಿಸಿಎ ಪದವಿಗಳಡಿ 24 ಕೋರ್ಸುಗಳು, 7 ಸ್ನಾತಕೋತ್ತರ ಬೋಧನಾಶಾಖೆಗಳು ಮತ್ತು 3 ಸಂಶೋಧನಾ ಕೇಂದ್ರಗಳು ಇರಲಿವೆ. ವಿಶ್ವವಿದ್ಯಾಲಯಕ್ಕೆ ಕೇಂದ್ರ ಸರ್ಕಾರವು ₹ 55 ಕೋಟಿ ಅನುದಾನ ಮಂಜೂರು ಮಾಡಿದೆ’ ಎಂದರು.

ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ.ಕುಮಾರ ನಾಯಕ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ್, ನೃಪತುಂಗ ವಿಶ್ವವಿದ್ಯಾಲಯದ ಕುಲಪತಿ ಶ್ರೀನಿವಾಸ ಬಳ್ಳಿ, ಕುಲಸಚಿವ ರಾಮಕೃಷ್ಣರೆಡ್ಡಿ ಇದ್ದರು.

ಆ್ಯಸಿಡ್ ದಾಳಿ: ₹1.50 ಲಕ್ಷ ಸಮೇತ ಆರೋಪಿ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಂಕದಕಟ್ಟೆ ಬಳಿಯ ಫೈನಾನ್ಸ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ 24 ವರ್ಷದ ಯುವತಿ ಮೇಲೆ ಆ್ಯಸಿಡ್ ದಾಳಿ ನಡೆಸಿದ್ದ ಆರೋಪಿ ನಾಗರಾಜ್, ₹ 1.50 ಲಕ್ಷ ಸಮೇತ ಪರಾರಿಯಾಗಿರುವ ಸಂಗತಿ ತನಿಖೆಯಿಂದ ಗೊತ್ತಾಗಿದೆ.

ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಏಪ್ರಿಲ್ 28ರಂದು ನಡೆದಿದ್ದ ಘಟನೆಯಲ್ಲಿ ಗಾಯಗೊಂಡಿರುವ ಯುವತಿ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡುಬರುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಪ್ರಕರಣದ ಆರೋಪಿ ನಾಗರಾಜ್, ಪೊಲೀಸರ ಕಣ್ತಪ್ಪಿಸಿ ಓಡಾಡುತ್ತಿದ್ದಾನೆ. ಆತನ ಬಂಧನಕ್ಕೆ ವಿಶೇಷ ತಂಡಗಳು ತನಿಖೆ ಮುಂದುವರಿಸಿವೆ. ಆರೋಪಿಯ ಪೋಷಕರು, ಸ್ನೇಹಿತರು, ವ್ಯಾಪಾರದ ಪಾಲುದಾರರು ಹಾಗೂ ಇತರಿಂದಲೂ ಪೊಲೀಸರು ಮಾಹಿತಿ ಪಡೆಯುತ್ತಿದ್ದಾರೆ.

‘ಆ್ಯಸಿಡ್ ದಾಳಿಗೂ ಮುನ್ನ ಆರೋಪಿ ವ್ಯವಸ್ಥಿತ ಸಂಚು ರೂಪಿಸಿದ್ದ. ದಾಳಿ ಬಳಿಕ ಪೊಲೀಸರು ತನ್ನನ್ನು ಬಂಧಿಸಬಹುದೆಂದು ತಿಳಿದು, ಪರಾರಿಯಾಗಲು ಮೊದಲೇ ಯೋಚಿಸಿದ್ದ. ಅದಕ್ಕಾಗಿ ₹ 1.50 ಲಕ್ಷ ಸಿದ್ಧಪಡಿಸಿಕೊಂಡಿದ್ದ. ಕೃತ್ಯದ ನಂತರ ಅದೇ ನಗದು ಸಮೇತ ಆರೋಪಿ ಪರಾರಿಯಾಗಿದ್ದಾನೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಮೊಬೈಲ್ ಬಳಸುತ್ತಿಲ್ಲ. ಹೀಗಾಗಿ, ಆತನ ವಿಳಾಸದ ಬಗ್ಗೆ ಸುಳಿವು ಸಿಗುತ್ತಿಲ್ಲ. ಆದರೆ, ಆತ ತಮಿಳುನಾಡು ಹಾಗೂ ಆಂಧ್ರಪ್ರದೇಶದಲ್ಲಿರುವ ಮಾಹಿತಿ ಇದೆ. ತಂಡಗಳನ್ನು ಕಳುಹಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಎಎಪಿ ಕಾರ್ಯಕರ್ತರ ಪ್ರತಿಭಟನೆ: ‘ಆ್ಯಸಿಡ್ ದಾಳಿ ಪ್ರಕರಣದ ಆರೋಪಿಯನ್ನು ತ್ವರಿತವಾಗಿ ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು’ ಎಂದು ಒತ್ತಾಯಿಸಿ ಎಎಪಿ ಮಹಿಳಾ ಘಟಕದ ಕಾರ್ಯಕರ್ತೆಯರು ಕಾಮಾಕ್ಷಿಪಾಳ್ಯ ಠಾಣೆ ಎದುರು ಭಾನುವಾರ ಪ್ರತಿಭಟನೆ ನಡೆಸಿದರು.

ಅಪರಾಧ ಸುದ್ದಿ

ಶ್ರೀಗಂಧ ಮರ ಕಳವು: ಐವರ ಸೆರೆ

ಬೆಂಗಳೂರು: ಸಾದಹಳ್ಳಿ ಬಳಿಯ ಹಾಲಿವುಡ್ ಟೌನ್ ಬಡಾವಣೆಯಲ್ಲಿ ಶ್ರೀಗಂಧದ ಮರ ಕಳವು ಮಾಡಿದ್ದ ಆರೋಪದಡಿ ಐವರನ್ನು ಪೊಲೀಸರು ಬಂಧಿಸಿದ್ದು, ಅವರಿಂದ 40 ಕೆ.ಜಿ ತೂಕದ ಶ್ರೀಗಂಧ ಜಪ್ತಿ ಮಾಡಿದ್ದಾರೆ.

ತುಮಕೂರು ಶಿರಾದ ವೆಂಕಟೇಶ್ ಅಲಿಯಾಸ್ ಬಿಸ್ಕೆಟ್ (21), ನೆಲಮಂಗಲದ ವೆಂಕಟೇಶ್ ಅಲಿಯಾಸ್ ಸಣ್ಣಿ (28), ಶಿಡ್ಲಘಟ್ಟದ ಅನಿಲ್‌ಕುಮಾರ್ (42), ಆಂಧ್ರಪ್ರದೇಶದ ವೆಂಕಟರಮಣ (42) ಹಾಗೂ ಕೃಷ್ಣಮೂರ್ತಿ (40) ಬಂಧಿತರು.

‘ಫೆ. 9ರಂದು ಕೃತ್ಯ ನಡೆದಿತ್ತು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು’ ಎಂದೂ ಪೊಲೀಸರು ತಿಳಿಸಿದರು.

ನೈಸ್ ರಸ್ತೆಯಲ್ಲಿ ಅಪಘಾತ: ಮಹಿಳೆ ಸಾವು

ಬೆಂಗಳೂರು: ಬ್ಯಾಡರಹಳ್ಳಿ ಬಳಿ ನೈಸ್ ರಸ್ತೆಯಲ್ಲಿ ಲಾರಿ ಹಾಗೂ ಕಾರು ನಡುವೆ ಅಪಘಾತ ಸಂಭವಿಸಿದ್ದು, ಕಾರಿನಲ್ಲಿದ್ದ ಸುಲೋಚನಾ (24) ಎಂಬುವರು ಮೃತಪಟ್ಟಿದ್ದಾರೆ. ಕಾರು ಜಖಂಗೊಂಡಿದ್ದು, ಲಾರಿ ಚಾಲಕನ ನಿರ್ಲಕ್ಷ್ಯ ಅಪಘಾತಕ್ಕೆ ಕಾರಣವೆಂದು ಮೇಲ್ನೋಟಕ್ಕೆ ಗೊತ್ತಾಗಿದೆ.

‘ಆನೇಕಲ್‌ನ ಸುಲೋಚನಾ ಅವರು ಕುಟುಂಬ ಸಮೇತ ಧರ್ಮಸ್ಥಳಕ್ಕೆ ಹೋಗಿದ್ದರು. ವಾಪಸು ಬರುತ್ತಿದ್ದಾಗ ಅವಘಡ ಸಂಭವಿಸಿದೆ. ಕಾರಿನಲ್ಲಿದ್ದ ಮಗು ಸೇರಿ ನಾಲ್ವರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಸಿದ್ಧ ಉಡುಪುಗಳಲ್ಲಿ ಬಚ್ಚಿಟ್ಟು ಡ್ರಗ್ಸ್ ಸಾಗಣೆ

ಬೆಂಗಳೂರು: ಗಾರ್ಮೆಂಟ್ಸ್ ಕಾರ್ಖಾನೆಯೊಂದರ ಹೆಸರಿನ ಸಿದ್ಧ ಉಡುಪುಗಳಲ್ಲಿ ಬಚ್ಚಿಟ್ಟು ಸಾಗಿಸುತ್ತಿದ್ದ ಡ್ರಗ್ಸ್ ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.


‘ಆಸ್ಟ್ರೇಲಿಯಾಗೆ ಡ್ರಗ್ಸ್ ಸಾಗಿಸುತ್ತಿರುವ ಮಾಹಿತಿ ಆಧರಿಸಿ ತಪಾಸಣೆ ನಡೆಸಿದಾಗ ₹ 89.92 ಲಕ್ಷ ಮೌಲ್ಯದ 4 ಕೆ.ಜಿ 496 ಗ್ರಾಂ ಎಫೆಡ್ರೈನ್ ಡ್ರಗ್ಸ್ ಪತ್ತೆಯಾಯಿತು. ಬಾಕ್ಸ್ ಮೇಲಿನ ವಿಳಾಸ ಆಧರಿಸಿ ವ್ಯಕ್ತಿಯೊಬ್ಬರನ್ನು ಬಂಧಿಸಲಾಗಿದೆ. ಆತ ಯಾರಿಗೆ ಡ್ರಗ್ಸ್ ಕಳುಹಿಸುತ್ತಿದ್ದ ಎಂಬುದು ತನಿಖೆಯಿಂದ ತಿಳಿಯಬೇಕು’ ಎಂದೂ ಕಸ್ಟಮ್ಸ್ ಮೂಲಗಳು ಹೇಳಿವೆ.

ನಗರದಲ್ಲಿ ಇಂದು

ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ವೃತ್ತಿ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರ ಹಾಗೂ ಸಹಾಯವಾಣಿ ಕೇಂದ್ರದ ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿ.ಆರ್.ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಂ ಭಾವಚಿತ್ರಕ್ಕೆ ಪುಷ್ಪ ಸಮರ್ಪಣೆ–ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಬಿ.ಶ್ರೀರಾಮುಲು, ಅಧ್ಯಕ್ಷತೆ–ಶಾಸಕ ರಿಜ್ವಾನ್ ಅರ್ಷದ್, ಆಯೋಜನೆ–ಸಮಾಜ ಕಲ್ಯಾಣ ಇಲಾಖೆ, ಸ್ಥಳ–ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10

ಸತ್ಯಜಿತ್ ರೇ ಅವರ 101ನೇ ಜನ್ಮದಿನದ ಅಂಗವಾಗಿ ಸಿನಿಮಾ ಪ್ರದರ್ಶನ: ಸಿನಿಮಾಗಳು–‘ಜಲ್ಸಾಘರ್’ (1958) ಮತ್ತು ‘ನಾಯಕ್’ (1966), ಆಯೋಜನೆ–ಆರ್.ವಿ ವಿಶ್ವವಿದ್ಯಾಲಯದ ಫಿಲ್ಮ್ ಸೊಸೈಟಿ, ಸ್ಥಳ–ಎಂಸಿಎ ಕಟ್ಟಡದ ಸಭಾಂಗಣ, ವಿಶ್ವವಿದ್ಯಾಲಯದ ಆವರಣ, ಮಧ್ಯಾಹ್ನ 1ರಿಂದ

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ವಸಂತೋತ್ಸವ ಮತ್ತು ದುಶ್ಯಂತ್ ಶ್ರೀಧರ್ ತಂಡ ದಿಂದ ಕರ್ನಾಟಕ ಸಂಗೀತ ಕಾರ್ಯಕ್ರಮ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 6ರಿಂದ







ನಗರದ ಕೆ.ಜಿ. ರಸ್ತೆಯ ಜನತಾಬಜಾರ್ ಎದುರು ಭಾರಿ ಮಳೆಯಿಂದ ಬುಡಮೇಲಾದ ಮರವು ವಾಲಿಬಿದ್ದಿದ್ದು ಬಸ್, ಕಾರು ಹಾಗೂ ಆಟೊಗೆ ಹಾನಿಯಾಗಿದೆ– ಪ್ರಜಾವಾಣಿ ಚಿತ್ರ/ ಎಸ್.ಕೆ. ದಿನೇಶ್ (ಎಡ ಚಿತ್ರ), ಓಕಳಿಪುರಂನಲ್ಲಿ ರೈಲ್ವೇ ಅಂಡರ್ ಪಾಸ್ ನಲ್ಲಿ ನಿಂತ ಮಳೆ ನೀರಿನಲ್ಲಿ ವಾಹನ ಸವಾರರು ಪರದಾಡುತ್ತಿರುವ ದೃಶ್ಯ. –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಬಿಸಿಲಿನ ಬೇಗೆಗೆ ತಂಪೆರೆದ ಮಳೆ • ಜೋರು ಗಾಳಿ ಜೊತೆ ಆಲಿಕಲ್ಲು • ಮನೆಗಳಿಗೆ ನುಗ್ಗಿದ ನೀರು

ಗುಡುಗು–ಸಿಡಿಲು ಮಳೆ; ಉರುಳಿದ ಮರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ಸಂಜೆಯಿಂದ ರಾತ್ರಿಯವರೆಗೂ ಜೋರು ಮಳೆ ಆಗಿದ್ದು, 20ಕ್ಕೂ ಹೆಚ್ಚು ಕಡೆ ಮರ ಹಾಗೂ ಕೊಂಬೆಗಳು ಉರುಳಿಬಿದ್ದಿವೆ. ಉತ್ತರಹಳ್ಳಿಯಲ್ಲಿ ಕೆಲವು ಮನೆಗಳಿಗೆ ನೀರು ನುಗ್ಗಿತ್ತು.

ನಗರದ ಬಹುತೇಕ ಪ್ರದೇಶಗಳಲ್ಲಿ ಬೆಳಿಗ್ಗೆಯಿಂದಲೂ ಮೋಡ ಕವಿದ ವಾತಾವರಣ ಇತ್ತು. ತಂಪಿನ ಗಾಳಿಯೂ ಬೀಸುತ್ತಿತ್ತು. ಆಗಾಗ ಬಿಸಿಲು ಕಾಣಿಸಿಕೊಂಡರೂ ಹೆಚ್ಚು ಸಮಯ ಇರಲಿಲ್ಲ. ಸಂಜೆ ವೇಳೆ ಜೋರಾಗಿ ಗಾಳಿ ಸಮೇತ ಮಳೆ ಬರಲಾರಂಭಿಸಿತ್ತು.

ರಾಜರಾಜೇಶ್ವರಿನಗರ, ಕೆಂಗೇರಿ, ನಾಯಂಡಹಳ್ಳಿ, ದೀಪಾಂಜಲಿ ನಗರ, ವಿಜಯನಗರ, ರಾಜಾಜಿನಗರ, ಯಶವಂತಪುರ, ಪೀಣ್ಯ, ಮಲ್ಲೇಶ್ವರ, ಶೇಷಾದ್ರಿಪುರ, ವಿದ್ಯಾರಣ್ಯಪುರ, ದೊಡ್ಡಬೊಮ್ಮಸಂದ್ರ, ಸಂಜಯನಗರ, ಹೆಬ್ಬಾಳ, ಆರ್.ಟಿ.ನಗರ, ಗಂಗಾನಗರ, ವಸಂತನಗರ, ಪುಲಿಕೇಶಿನಗರ, ಹೆಣ್ಣೂರು, ಬಾಣಸವಾಡಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಆಯಿತು.

ಮೆಜೆಸ್ಟಿಕ್, ಗಾಂಧಿನಗರ, ಚಿಕ್ಕಪೇಟೆ, ಕಲಾಸಿಪಾಳ್ಯ, ಸಿಟಿ ಮಾರ್ಕೆಟ್, ಶಿವಾಜಿನಗರ, ಅಶೋಕನಗರ,



ಚರ್ಚ್‌ಸ್ಟ್ರೀಟ್‌ನಲ್ಲಿ ಕುಟುಂಬವೊಂದು ಮಳೆಯಿಂದ ರಕ್ಷಣೆಪಡೆಯಲು ಛತ್ರಿ ಆಸರೆಪಡೆದಿರುವ ಪರಿ

ಕೋರಮಂಗಲ, ಮಡಿವಾಳ, ಜಯನಗರ, ಬಸವನಗುಡಿ, ಬನಶಂಕರಿ, ಹನುಮಂತನಗರ, ಗಿರಿನಗರ, ಕೋರಮಂಗಲ, ಮಡಿವಾಳ, ಎಂ.ಜಿ. ರಸ್ತೆ, ಶಿವಾಜಿನಗರ, ಅಶೋಕನಗರ, ಹಲಸೂರು, ವಿವೇಕನಗರ, ಹಲಸೂರು ಗೇಟ್, ಲಾಲ್‌ಬಾಗ್, ಶಾಂತಿನಗರ, ವಿಲ್ಸನ್ ಗಾರ್ಡನ್ ಹಾಗೂ ಸುತ್ತಮುತ್ತ ಮಳೆ ಸುರಿಯಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಖೇಲೋ ಇಂಡಿಯಾ ಕ್ರೀಡಾಕೂಟವನ್ನು ಮಳೆಯಿಂದಾಗಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು.

ಧಾರಾಕಾರವಾಗಿ ಹರಿದ ನೀರು: ಗಾಂಧಿನಗರ, ಮೆಜೆಸ್ಟಿಕ್, ಶಿವಾನಂದ ವೃತ್ತ, ಚಿಕ್ಕಪೇಟೆ, ಬಿ.ವಿ.ಕೆ. ಅಯ್ಯಂಗಾರ್ ರಸ್ತೆ ಹಾಗೂ ಇತರೆಡೆ ಕಾಮಗಾರಿಗಳು ನಡೆಯುತ್ತಿವೆ. ಈ ಭಾಗದಲ್ಲಿ ರಸ್ತೆಗಳು ಬಹುತೇಕ ಜಲಾವೃತವಾಗಿತ್ತು.

ಕಾಮಗಾರಿ ನಡೆಯುತ್ತಿರುವ ಸ್ಥಳಗಳಲ್ಲಿ ರಸ್ತೆ ಅಗೆಯಲಾಗಿದ್ದು, ಅದರ ಮಣ್ಣನ್ನು ಎಲ್ಲೆಂದರಲ್ಲಿ ಹಾಕಲಾಗಿದೆ. ಮಳೆ ಬಿದ್ದಿದ್ದರಿಂದ ಮಣ್ಣು, ನೀರಿನ ಜೊತೆಯಲ್ಲಿ ಸೇರಿ ಕೆಸರಾಗಿತ್ತು.

ಭಾನುವಾರ ರಜೆ ದಿನವಾಗಿದ್ದರಿಂದ ಜನರ ಓಡಾಟ ಕಡಿಮೆ ಇತ್ತು. ಮಾರುಕಟ್ಟೆ ಹಾಗೂ ಇತರೆ ಕೆಲಸಕ್ಕಾಗಿ ಬಂದಿದ್ದ ಜನ, ವಾಪಸು ಮನೆಗೆ ಹೋಗುವಾಗ ಮಳೆಯಲ್ಲಿ ಸಿಲುಕಿದ್ದರು. ರಸ್ತೆ ಅಕ್ಕ–ಪಕ್ಕದ ಮಳಿಗೆಗಳು, ಕೆಳಸೇತುವೆಗಳಲ್ಲಿ ಆಶ್ರಯ ಪಡೆದಿದ್ದರು.

ಮಾರುಕಟ್ಟೆ ಪ್ರದೇಶಗಳಲ್ಲಿ ಕೆಲವರು ಕೊಡೆ ಹಿಡಿದು ಹೆಜ್ಜೆ ಹಾಕಿದರು. ಕೆಲವರು, ಮಳೆಯಲ್ಲೇ ಸುತ್ತಾಡಿ ಸಂಭ್ರಮಿಸಿದರು.

ಸಂಚಾರ ಅಸ್ತವ್ಯಸ್ತ

ಬೆಂಗಳೂರು: ಜೋರು ಗಾಳಿ ಹಾಗೂ ಆಲಿಕಲ್ಲು ಸಹಿತವಾಗಿ ನಗರದ ವಿವಿಧೆಡೆ ಮಳೆ ಆಯಿತು. ಇದರಿಂದಾಗಿ ನಗರದ ಹಲವೆಡೆ ಮರಗಳು ಹಾಗೂ ಮರದ ಕೊಂಬೆಗಳು ಉರುಳಿಬಿದ್ದಿದ್ದವು. ಇದರಿಂದಾಗಿ ಕೆಲ ರಸ್ತೆಗಳಲ್ಲಿ ವಾಹನಗಳ ಓಡಾಟ ಬಂದ್ ಆಗಿತ್ತು.

ಬಿಟಿಎಂ 37ನೇ ಮುಖ್ಯರಸ್ತೆ, 15ನೇ ಮುಖ್ಯರಸ್ತೆ, ಐಎಎಸ್ ಅಧಿಕಾರಿಗಳ ಕಾಲೊನಿ, ಕೋರಮಂಗಲ, ಸದಾನಂದನಗರ, ಕೆಂಗೇರಿಯ ಮೈಲಸಂದ್ರ, ಹಗದೂರಿನ ಮುಖ್ಯರಸ್ತೆ, ವೈಟ್‌ಫೀಲ್ಡ್, ಮೈಕೊ ಲೇಔಟ್, ಗೊಟ್ಟಿಗೆರೆ, ಶ್ರೀರಾಮಪುರ, ಗಾಂಧಿನಗರ, ಬ್ಯಾಟರಾಯನಪುರ, ಇತರೆ 20ಕ್ಕೂ ಹೆಚ್ಚು ಕಡೆ ಮರ ಹಾಗೂ ಕೊಂಬೆಗಳು ಬಿದ್ದಿದ್ದವು.

ಬಿಬಿಎಂಪಿ ಸಹಾಯವಾಣಿಗೆ ಕರೆಗಳು ಬರುತ್ತಿದ್ದಂತೆ ಸಿಬ್ಬಂದಿ ಸ್ಥಳಕ್ಕೆ ಹೋಗಿ ಸ್ಥಳೀಯರ ಜೊತೆ ಸೇರಿ ಮರಗಳನ್ನು ತೆರವು ಮಾಡಿದರು. ವಾಹನಗಳ ಸಂಚಾರಕ್ಕೆ ಅನುಕೂಲ ಕಲ್ಪಿಸಿಕೊಟ್ಟರು.

ಮೆಜೆಸ್ಟಿಕ್‌ನ ಕೆ.ಜಿ. ರಸ್ತೆಯಲ್ಲಿ ಬಿಎಂಟಿಸಿ ಬಸ್ ಮೇಲೆಯೇ ಮರ ಬಿದ್ದಿತ್ತು. ಚಾವಣಿ ಜಖಂಗೊಂಡಿತ್ತು. ಪ್ರಯಾಣಿಕರನ್ನು ಸುರಕ್ಷಿತವಾಗಿ ಬಸ್ಸಿನಿಂದ ಕೆಳಗೆ ಇಳಿಸಲಾಗಿದೆ.

ಬಹುತೇಕ ಕಡೆ ವಿದ್ಯುತ್ ವ್ಯತ್ಯಯ

‘ಧಾರಾಕಾರ ಮಳೆಯಿಂದಾಗಿ ನಗರದ ಬಹುತೇಕ ಪ್ರದೇಶಗಳಲ್ಲಿ ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಕೆಲವೆಡೆ ಮರದ ಕೊಂಬೆಗಳು ಕಂಬ ಹಾಗೂ ತಂತಿ ಮೇಲೆ ಬಿದ್ದಿದ್ದು, ವಿದ್ಯುತ್ ವ್ಯತ್ಯಯ ಉಂಟಾಗಿದೆ. ತುರ್ತು ದುರಸ್ತಿ ಕಾರ್ಯ ಪ್ರಗತಿಯಲ್ಲಿದೆ’ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ. ‘ಜಯನಗರ, ವೈಟ್‌ಫೀಲ್ಡ್, ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ 16 ವಿದ್ಯುತ್ ಕಂಬಗಳು ಬಿದ್ದಿವೆ. 17 ಕಂಬಗಳ ಮೇಲೆ ಮರದ ಕೊಂಬೆಗಳು ಬಿದ್ದಿವೆ. ಇದರಿಂದ ತಂತಿಗಳು ತುಂಡರಿಸಿದ್ದು, ಮರು ಜೋಡಣೆ ನಡೆದಿದೆ’ ಎಂದೂ ಹೇಳಿದ್ದಾರೆ.

ನಗರದ ಹಲವು ರಸ್ತೆಗಳಲ್ಲಿ ನೀರು ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು. ಕೆಲ ವಾಹನಗಳು ಕೆಟ್ಟು ನಿಂತಿದ್ದವು. ಅಂಥ ವಾಹನಗಳನ್ನು ಸ್ಥಳೀಯರೇ ತಳ್ಳಿ ಸುರಕ್ಷಿತ ಸ್ಥಳಕ್ಕೆ ತಲುಪಿಸಿದರು.



ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬೈಲುಕುಪ್ಪೆ ಸಮೀಪ ಮೈಸೂರು–ಮಡಿಕೇರಿ ರಸ್ತೆಯಲ್ಲಿ ತೆಂಗಿನಮರವೊಂದು ಲಾರಿ ಮೇಲೆ ಭಾನುವಾರ ಉರುಳಿ ಬಿದ್ದಿದೆ –ಪ್ರಜಾವಾಣಿ ಚಿತ್ರ

ರಾಜ್ಯದ ವಿವಿಧೆಡೆ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಕಡೆ ಭಾನುವಾರ ಗುಡುಗು–ಸಿಡಿಲು ಸಹಿತ ಜೋರು ಮಳೆ ಸುರಿಯಿತು.

ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಗುಡುಗು ಸಹಿತ ಧಾರಾಕಾರ ಮಳೆ ಸುರಿಯಿತು. ಬಿರುಗಾಳಿಗೆ ಬೃಹತ್ ಮರ, ವಿದ್ಯುತ್ ಕಂಬಗಳು ನೆಲಕ್ಕುರಳಿವೆ. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಹಲವು ತಾಸು ಸಂಚಾರ ವ್ಯತ್ಯಯವಾಗಿತ್ತು. ಬಿಡದಿಯಲ್ಲಿ ಸಿಡಿಲು ಬಡಿದು 10 ಕುರಿ ಹಾಗೂ 6 ಮೇಕೆ ಸಾವನ್ನಪ್ಪಿವೆ.

ಮಳೆಯ ಜೊತೆಗೆ ತೀವ್ರ ಗಾಳಿ ಬೀಸಿದ್ದರಿಂದ ಯಾದಗಿರಿ ಜಿಲ್ಲೆ ಹುಣಸಗಿ–ನಾರಾಯಣಪುರ ರಾಜ್ಯ ಹೆದ್ದಾರಿಯಲ್ಲಿ ಬೃಹತ್ ಗಾತ್ರದ ಮರಗಳು ಉರುಳಿ ಬಿದ್ದವು. ಇದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು.

ಕೊಟ್ಟಗುಡ್ಡ ಗ್ರಾಮದಲ್ಲಿ ಮರವೊಂದು ವಿದ್ಯುತ್ ತಂತಿ ಮೇಲೆ ಉರುಳಿಬಿದ್ದ ಪರಿಣಾಮ ಐದು ವಿದ್ಯುತ್ ಕಂಬಗಳು ನೆಲಕಚ್ಚಿದವು. ಮೌನೇಶ್ವರ ಕ್ಯಾಂಪ್‌ನಲ್ಲಿ ಅಂಗಡಿ ಮತ್ತು ಮನೆಗಳ ತಗಡಿನ ಮೇಲ್ಛಾವಣಿ ಹಾರಿಹೋಗಿವೆ.

ಮೈಸೂರು ಭಾಗದಲ್ಲಿ ಮಳೆ ಮುಂದುವರಿದಿದ್ದು, ಭಾನುವಾರ ಸಿಡಿಲು ಬಡಿದು ಇಬ್ಬರು ಮೃತರಾಗಿದ್ದಾರೆ. ಆರು ಮಂದಿ ಗಾಯಗೊಂಡಿದ್ದಾರೆ.

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ವಳಲೇಕಟ್ಟೆಕೊಪ್ಪಲಿನಲ್ಲಿ ಸಿಡಿಲು ಬಡಿದು ಮಾಸ್ತಮ್ಮ (53) ಮೃತರಾದರು. ಗ್ರಾಮದಲ್ಲಿ ಒಂದು ಹಸು ಕೂಡ ಮೃತಪಟ್ಟಿದೆ. ಚಿನಕುರಳಿ ಹಾಗೂ ಕುಂಬಾರಕೊಪ್ಪಲು ಗ್ರಾಮದ 6 ಮಂದಿ ಗಾಯಗೊಂಡಿದ್ದಾರೆ.

ಬೇಲೂರು ತಾಲ್ಲೂಕಿನ ಬಿಕ್ಕೋಡು ಹೋಬಳಿ ಕೃಷ್ಣಪುರದಲ್ಲಿ ಸಿಡಿಲು ಬಡಿದು ರಂಗನಾಯಕ (70) ಸಾವನ್ನಪ್ಪಿದ್ದಾರೆ. ಜಮೀನಿನಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಮಳೆಯಿಂದ ಆಶ್ರಯ ಪಡೆಯಲು ಮರದ ಕೆಳಗೆ ನಿಂತಿದ್ದಾಗ ಮರಕ್ಕೆ ಸಿಡಿಲು ಬಡಿದಿದೆ.

ಮೈಸೂರು ನಗರದಲ್ಲಿ 100ಕ್ಕೂ ಅಧಿಕ ಮರಗಳು ಹಾಗೂ 50ಕ್ಕೂ ಅಧಿಕ ವಿದ್ಯುತ್ ಕಂಬಗಳು ಧರೆಗುರುಳಿವೆ. ಚಾಮರಾಜ ಜೋಡಿ ರಸ್ತೆಯಲ್ಲಿ ಬೃಹತ್ ಮರ ಉರುಳಿ ಬಿದ್ದು ಆಟೊ ಮತ್ತು ಕಾರು ಜಖಂಗೊಂಡವು. ಮಂಡ್ಯ ಜಿಲ್ಲೆಯ ಕೆಆರ್‌ಎಸ್‌ನಿಂದ ಮೈಸೂರಿಗೆ ಬರುತ್ತಿದ್ದ ಸಾರಿಗೆ ಸಂಸ್ಥೆ ಬಸ್ ಮೇಲೆ ವಿದ್ಯುತ್ ಕಂಬ ಉರುಳಿದ ಪರಿಣಾಮ ಪ್ರಯಾಣಿಕರು ಬಸ್‌ನಿಂದ ಇಳಿದು ಓಡಿದರು. ಬಸ್‌ಗೆ ತಂತಿ ತಾಗದಿದ್ದರಿಂದ ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ. ಕೊಡಗು ಜಿಲ್ಲೆಯ ಸಿದ್ದಾಪುರ ವ್ಯಾಪ್ತಿಯಲ್ಲಿ ಭಾರಿ ಮಳೆಯಾಗಿದೆ.

172 ಕಡೆ ಉರುಳಿದ ವಿದ್ಯುತ್ ಕಂಬಗಳು

ಬೆಂಗಳೂರು: ‘ಗಾಳಿ ಸಹಿತ ಜೋರಾಗಿ ಸುರಿದ ಮಳೆಯಿಂದಾಗಿ ಬೆಂಗಳೂರಿನ ಜಯನಗರ, ವೈಟ್‌ಫೀಲ್ಡ್, ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್, ಹೊಸಕೋಟೆ, ಮಾಗಡಿ, ಚಂದಾಪುರ ವಿಭಾಗದಲ್ಲಿ, ರಾಮನಗರ ಹಾಗೂ ಕೋಲಾರ ಜಿಲ್ಲೆಗಳಲ್ಲಿ 172 ಕಡೆ ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. 136 ಕಡೆ ವಿದ್ಯುತ್ ಕಂಬ ಹಾಗೂ ತಂತಿ ಮೇಲೆ ಮರಗಳು ಬಿದ್ದಿವೆ’ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

‘ಕನ್ನಡದ ಉಳಿವಿಗೆ ಯಕ್ಷಗಾನದ ಪಾತ್ರ ಮಹತ್ವದ್ದು’

ಯಕ್ಷಗಾನ ಬಯಲಾಟ ಅಕಾಡೆಮಿ ಅಧ್ಯಕ್ಷ ಜಿ.ಎಲ್.ಹೆಗಡೆ ಅನಿಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಭಾಷೆಯ ಉಳಿವಿನಲ್ಲಿ ಯಕ್ಷಗಾನದ ಪಾತ್ರ ಮಹತ್ವದ್ದಾಗಿದೆ. ರಾತ್ರಿಯಿಂದ ಬೆಳಗಿನವರೆಗೂ ಯಕ್ಷಗಾನ ನಡೆಯುತ್ತದೆ. ಹೀಗಿದ್ದರೂ ಅದರಲ್ಲಿನ ಪಾತ್ರಧಾರಿಗಳು ಒಂದೂ ಇಂಗ್ಲಿಷ್ ಪದ ಬಳಸುವುದಿಲ್ಲ. ಯಕ್ಷಗಾನವು ಹವ್ಯಕರ ಕಲೆ. ಇದನ್ನು ಉಳಿಸಿ ಬೆಳೆಸುವ ಕೆಲಸ ಮಾಡಬೇಕು’ ಎಂದು ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಅಧ್ಯಕ್ಷ ಜಿ.ಎಲ್.ಹೆಗಡೆ ತಿಳಿಸಿದರು.

ಅಖಿಲ ಹವ್ಯಕ ಮಹಾಸಭಾ ಭಾನುವಾರ ಹಮ್ಮಿಕೊಂಡಿದ್ದ ಸಂಸ್ಥಾಪನೋತ್ಸವ, ಹವ್ಯಕ ವಿಶೇಷ ಪ್ರಶಸ್ತಿ ಮತ್ತು ಪಲ್ಲವ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ನಾವು ಭವ್ಯವಾದ ಸಂಸ್ಕೃತಿ ಹೊಂದಿದ್ದೇವೆ. ದಿವ್ಯವಾದ ಇತಿಹಾಸ ನಮಗಿದೆ. ಹೀಗಿದ್ದರೂ ಪಠ್ಯಗಳಲ್ಲಿ ಈಗಲೂ ರಾಬರ್ಟ್ ಕ್ಲೈವ್‌ನ ಕುರಿತು ಓದುವಂತಹ ಸ್ಥಿತಿ ಇದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಚ್.ಎಸ್. ಸಚ್ಚಿದಾನಂದ ಮೂರ್ತಿ, ‘ಬ್ರಾಹ್ಮಣ ಸಮಾಜ ಸಂಕಷ್ಟದ ಸ್ಥಿತಿಯಲ್ಲಿದೆ. ಉಪ ಜಾತಿಗಳಲ್ಲಿನ ಭಿನ್ನಾಭಿಪ್ರಾಯ ಬದಿಗೊತ್ತಿ ನಾವೆಲ್ಲಾ ಒಗ್ಗೂಡಬೇಕು’ ಎಂದು ತಿಳಿಸಿದರು.

ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ.ಗಿರಿಧರ ಕಜೆ, ‘ಮಹಾಸಭೆ ಸ್ಥಾಪನೆಯಾಗಿ 79 ವರ್ಷ ಆಗಿದೆ. ಸೇನೆ, ರಾಜಕೀಯ, ಶಿಕ್ಷಣ, ಸಮಾಜ ಸೇವೆ, ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹವ್ಯಕರು ಸಾಧನೆ ಮಾಡಿದ್ದಾರೆ. ಅವರನ್ನು ಸನ್ಮಾನಿಸುವ ಮೂಲಕ ಯುವ ಸಮುದಾಯವನ್ನು ಸಾಧನೆಯತ್ತ ಪ್ರೇರೇಪಿಸುವ ಕೆಲಸವನ್ನು ಮಹಾಸಭಾ ಮಾಡುತ್ತಿದೆ’ ಎಂದರು.



ಕಾರ್ಯಕ್ರಮದಲ್ಲಿ ಎಚ್.ಎಸ್.ಸಚ್ಚಿದಾನಂದಮೂರ್ತಿ ಅವರು ತ್ರಿಯಂಬಕ ಗಣೇಶ ಹೆಗಡೆ (ಹವ್ಯಕ ಸೇವಾಶ್ರೀ), ಅಶ್ವಿನಿ ಭಟ್ (ಹವ್ಯಕಶ್ರೀ–ಕ್ರೀಡೆ), ಬಳ್ಕೂರು ಕೃಷ್ಣಯಾಜಿ (ಹವ್ಯಕ ಭೂಷಣ–ಯಕ್ಷಗಾನ), ನಾರಾಯಣ ದಾಸರು (ಹವ್ಯಕ ಭೂಷಣ–ಹರಿಕಥೆ), ಗಜಾನನ ಶರ್ಮ (ಹವ್ಯಕ ವಿಭೂಷಣ–ಸಾಹಿತ್ಯ), ಉದಯಕುಮಾರ್ ನೂಜಿ (ಹವ್ಯಕ ಭೂಷಣ–ಸಮಾಜಸೇವೆ), ಸಿ.ಜಿ. ರಾಜಾರಾಮ (ಹವ್ಯಕಶ್ರೀ–ಕೃಷಿ ಉದ್ಯಮ) ಹಾಗೂ ಅಶ್ವಿನಿಕುಮಾರ್ ಭಟ್ (ಹವ್ಯಕಶ್ರೀ–ಪರಿಸರ) ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಸಂಸ್ಥಾಪನೋತ್ಸವ ಸಮಿತಿ ಸಂಚಾಲಕ ಮುಗಲೋಡಿ ಕೃಷ್ಣಮೂರ್ತಿ, ಹವ್ಯಕ ವಿಶೇಷ ಪ್ರಶಸ್ತಿ ಸಂಚಾಲಕ ರವಿನಾರಾಯಣ ಪಟ್ಟಾಜೆ, ಪ್ರಧಾನ ಕಾರ್ಯದರ್ಶಿ ಸಿ.ವಿ.ವೇಣುವಿಘ್ನೇಶ, ಡಾ.ಗಿರಿಧರ ಕಜೆ, ಜಿ.ಎಲ್.ಹೆಗಡೆ ಹಾಗೂ ಇತರರು ಇದ್ದರು– ಪ್ರಜಾವಾಣಿ ಚಿತ್ರ

ಕೃಷಿ ಹೊಂಡದಲ್ಲಿ ಮುಳುಗಿ ಮೂವರು ಬಾಲಕರು ಸಾವು

ಪ್ರಜಾವಾಣಿ ವಾರ್ತೆ

ಗೌರಿಬಿದನೂರು: ತಾಲ್ಲೂಕಿನ ಹೊಸೂರು ಹೋಬಳಿಯ ಹಂಪಸಂದ್ರದಲ್ಲಿ ಭಾನುವಾರ ಕೃಷಿ ಹೊಂಡದಲ್ಲಿ ಈಜಲು ಹೋಗಿದ್ದ ಮೂವರು ಬಾಲಕರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ಹಂಪಸಂದ್ರ ಗ್ರಾಮದ ಲಿಖಿತ್ (16), ರಾಜೇಶ್ (16) ಹಾಗೂ ಬೆಂಗಳೂರಿನ ಮನೋಜ್ (15) ಎಂದು ಮೃತಪಟ್ಟವರು. ಬೇಸಿಗೆ ರಜೆಗೆ ಅಜ್ಜಿ ಮನೆಗೆ ಬಂದಿದ್ದ ಬೆಂಗಳೂರಿನ ಮನೋಜ್, ಅಕ್ಕಪಕ್ಕದ ಮನೆಯ ಆರು ಸ್ನೇಹಿತರೊಂದಿಗೆ ಈಜಲು ತೆರಳಿದ್ದ. ಏಳು ಬಾಲಕರು ಕೃಷಿ ಹೊಂಡದಲ್ಲಿ ಮುಳುಗಿದ್ದರು. ಆ ಪೈಕಿ ನಾಲ್ವರು ಈಜಿ ದಡ ಸೇರಿ ಗ್ರಾಮಸ್ಥರಿಗೆ ವಿಷಯ ಮುಟ್ಟಿಸಿದ್ದಾರೆ.

ಗ್ರಾಮಸ್ಥರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಕೃಷಿ ಹೊಂಡ ಒಡೆದು ಮೃತದೇಹ ಹೊರತೆಗೆದಿದ್ದಾರೆ. ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಗೌರಿಬಿದನೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ

‘ಸಮಾಜ ಸೇವಕರಿಗೆ ಗೌರವ ವಿರಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಧಿಕಾರದಲ್ಲಿ ಇರುವವರು, ಅತಿ ಶ್ರೀಮಂತರಿಗೆ ಮಾತ್ರ ಹೆಚ್ಚು ಗೌರವ ಸಿಗುತ್ತಿದೆ. ಆದರೆ, ಆರ್.ಎನ್.ಶೆಟ್ಟಿಯವರ ಸಮಾಜ ಸೇವೆ ಗುರುತಿಸಿ, ಅವರ ಪ್ರತಿಮೆ ಅನಾವರಣಗೊಳಿಸಿರುವುದು ಶ್ಲಾಘನೀಯ’ ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಹೇಳಿದರು.

ನಗರದ ಬಂಟರ ಸಂಘದಲ್ಲಿ ಭಾನುವಾರ ನಡೆದ ದಿವಂಗತ ಆರ್.ಎನ್.ಶೆಟ್ಟಿ ಅವರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಆರ್.ಎನ್.ಶೆಟ್ಟಿ ಅವರು ಸಮಾಜಕ್ಕೆ ನೀಡಿರುವ ಕೊಡುಗೆ ಅನನ್ಯ. ಅವರು ಹೆಚ್ಚು ವ್ಯಾಸಂಗ ಮಾಡದಿದ್ದರೂ ತಮ್ಮ ಅನುಭವಗಳಿಂದ ಯಶಸ್ಸನ್ನು ಸಾಧಿಸಿದ್ದರು. ದಾನ, ಧರ್ಮಗಳ ಮೂಲಕ ಸಮಾಜಕ್ಕೆ ಮಾದರಿ ವ್ಯಕ್ತಿಯಾಗಿದ್ದರು. ಅವರ ಸಾಧನೆ ಮತ್ತು ಸಮಾಜ ಸೇವೆ ಗುರುತಿಸಿ ಗೌರವ ಸಲ್ಲಿಸಬೇಕು. ಅದು ನಮ್ಮೆಲ್ಲರ ಜವಾಬ್ದಾರಿ’ ಎಂದರು.



ಬಂಟರ ಸಂಘದ ವತಿಯಿಂದ ಕರ್ನಾಟಕ ಮಹಿಳಾ ದಕ್ಷತ ಸಮಿತಿಯ ಅಧ್ಯಕ್ಷರಾದ ಶರಣ್ಯ ಎಸ್.ಹೆಗ್ಡೆ ಅವರಿಗೆ ‘ದಿ.ಸುಶೀಲಾ ಪಿ.ಶೆಟ್ಟಿ ಸ್ಮಾರಕ ಮಹಿಳಾ ಸಾಧಕಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಂತೋಷ್ ಹೆಗ್ಡೆ, ಆರ್.ಉಪೇಂದ್ರ ಶೆಟ್ಟಿ ಹಾಗೂ ಇತರರು ಇದ್ದಾರೆ.

ಮುಂಬೈನ ಹೇರಂಬ ಇಂಡಸ್ಟ್ರೀಸ್‌ನ ಮುಖ್ಯಸ್ಥ ಸದಾಶಿವ ಕೆ.ಶೆಟ್ಟಿ ಅವರಿಗೆ ‘ಆರ್.ಎನ್.ಶೆಟ್ಟಿ ಸ್ಮಾರಕ ಔದ್ಯಮಿಕ ಸಾಧಕ ಪ್ರಶಸ್ತಿ’ ಹಾಗೂ ಕರ್ನಾಟಕ ಮಹಿಳಾ ದಕ್ಷತ ಸಮಿತಿ ಅಧ್ಯಕ್ಷರಾದ ಶರಣ್ಯ ಎಸ್.ಹೆಗ್ಡೆ ಅವರಿಗೆ ‘ದಿ.ಸುಶೀಲಾ ಪಿ.ಶೆಟ್ಟಿ ಸ್ಮಾರಕ ಮಹಿಳಾ ಸಾಧಕಿ ಪ್ರಶಸ್ತಿ’ ನೀಡಿ ಗೌರವಿಸಲಾಯಿತು.

ಗಿರೀಶ್ ರೈ ಬರೆದಿರುವ ‘ಪ್ರಜಾಪ್ರಭುತ್ವ-ಬಂಟ ಜನಪ್ರತಿನಿಧಿಗಳು’ ಎಂಬ ಪುಸ್ತಕವನ್ನು ಸಂತೋಷ್ ಹೆಗ್ಡೆ ಬಿಡುಗಡೆ ಮಾಡಿದರು. ಕರಾವಳಿಯ ಬಿಸು (ಯುಗಾದಿ) ಆಚರಣೆಯೂ ನಡೆಯಿತು.

ಹೈಕೋರ್ಟ್ ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ, ಬಂಟರ ಸಂಘದ ಅಧ್ಯಕ್ಷ ಆರ್.ಉಪೇಂದ್ರ ಶೆಟ್ಟಿ ಇದ್ದರು.

ವಿಮಾನದಲ್ಲಿ ತಾಂತ್ರಿಕ ದೋಷ 12 ಮಂದಿಗೆ ಗಾಯ

ದುರ್ಗಾಪುರ, ಪಶ್ಚಿಮ ಬಂಗಾಳ (ಪಿಟಿಐ): ಮುಂಬೈ–ದುರ್ಗಾಪುರ ನಡುವಣ, ಸ್ಪೈಸ್‌ಜೆಟ್ ಸಂಸ್ಥೆಯ ಬೋಯಿಂಗ್ ಬಿ737 ವಿಮಾನ ಇಳಿಯುವ ವೇಳೆ ಭಾನುವಾರ ಕಂಡುಬಂದ ತಾಂತ್ರಿಕದೋಷದಿಂದ ಉಂಟಾದ ಒತ್ತಡದಿಂದ 12 ಮಂದಿ ಗಾಯಗೊಂಡರು.

ಪಶ್ಚಿಮ ಬಂಗಾಳದ ದುರ್ಗಾಪುರ ನಿಲ್ದಾಣದಲ್ಲಿ ಎಸ್‌ಜಿ–945 ವಿಮಾನದಲ್ಲಿ ಈ ಘಟನೆ ನಡೆದಿದೆ. ಈ ಕುರಿತು ಸ್ಪೈಸ್‌ಜೆಟ್‌ನ ವಕ್ತಾರ, ‘ಕೆಲವರಿಗೆ ಗಾಯಗಳಾಗಿವೆ. ಗಾಯಾಳುಗಳಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ವೈದ್ಯಕೀಯ ಚಿಕಿತ್ಸೆ ಒದಗಿಸಲಾಗಿದೆ’ ಎಂದರು.

ಘಟನೆಗೆ ವಿಷಾದ ವ್ಯಕ್ತಪಡಿಸಿರುವ ಸ್ಪೈಸ್‌ಜೆಟ್ ಸಂಸ್ಥೆಯು, ‘ಇದೊಂದು ದುರದೃಷ್ಟಕರ ಘಟನೆ. ಗಾಯಾಳುಗಳಿಗೆ ಅಗತ್ಯವಿರುವ ಎಲ್ಲ ವೈದ್ಯಕೀಯ ಸೌಲಭ್ಯವನ್ನು ಕಲ್ಪಿಸಲಾಗುವುದು’ ಎಂದಿದೆ.

‘ಬಿಯಾಂಡ್ ಈಸ್ಟ್ ಆ್ಯಂಡ್ ವೆಸ್ಟ್’ ಕೃತಿ ಕುರಿತ ಚರ್ಚೆ

‘ಎರಡು ನಾಗರಿಕತೆಗಳನ್ನು ತುಲನಾತ್ಮಕವಾಗಿ ನೋಡುವ ಕೃತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾಕಾವ್ಯಗಳು- ಅನಂತರದ ಸಾಹಿತ್ಯಕೃತಿಗಳ ಮೂಲಕ ಎರಡು ನಾಗರಿಕತೆಗಳು, ಸಂಸ್ಕೃತಿಯನ್ನು ತುಲನಾತ್ಮಕವಾಗಿ ನೋಡುವುದು ‘ಬಿಯಾಂಡ್ ಈಸ್ಟ್ ಆ್ಯಂಡ್ ವೆಸ್ಟ್’ ಕೃತಿಯ ಉದ್ದೇಶ’ ಎಂದು ವಿಮರ್ಶಕ ಪ್ರೊ. ಸಿ.ಎನ್.ರಾಮಚಂದ್ರನ್ ತಿಳಿಸಿದರು.

ಸುಚೇತನ ಸ್ವರೂಪ ಅವರ ‘ಆ ಪೂರ್ವ ಈ ಪಶ್ಚಿಮ’ ಪುಸ್ತಕವನ್ನು ಎನ್.ಎಸ್.ರಾಘವನ್ ಅವರು ‘ಬಿಯಾಂಡ್ ಈಸ್ಟ್ ಆ್ಯಂಡ್ ವೆಸ್ಟ್’ ಶೀರ್ಷಿಕೆಯಡಿ ಇಂಗ್ಲಿಷ್‌ಗೆ ಅನುವಾದಿಸಿದ್ದು, ಈ ಕೃತಿ ಕುರಿತ ಆನ್‌ಲೈನ್ ಚರ್ಚೆಯಲ್ಲಿ ಶನಿವಾರ ಮಾತನಾಡಿದರು.

‘ಇದು ಮಹತ್ವಾಕಾಂಕ್ಷೆಯ ವೈಚಾರಿಕ ಕೃತಿ. ಪಾಶ್ಚಿಮಾತ್ಯ, ಭಾರತೀಯ ಮಹಾಕಾವ್ಯಗಳು, ಪಂಪನಿಂದ ಇಂದಿನವರೆಗಿನ ಕನ್ನಡ ಸಾಹಿತ್ಯದ ಮೇಲುನೋಟ, ವಚನ ಸಾಹಿತ್ಯ ಹೀಗೆ ಪೂರ್ಣ-ಪ್ರಮಾಣದ ವ್ಯಾಖ್ಯಾನ ಅಸಾಧ್ಯ ಅನಿಸುವಷ್ಟು ವಿಚಾರ ಇದರಲ್ಲಿವೆ’ ಎಂದರು.

‘ಮಹಾಕಾವ್ಯಗಳು, ಅವುಗಳ ಕಾಲಘಟ್ಟದ ಸಮಾಜ, ಸಂಸ್ಕೃತಿ, ಜನಾಂಗದ ಪ್ರಜ್ಞೆಯನ್ನು ಸಫಲವಾಗಿ ಪ್ರತಿಫಲಿಸುತ್ತವೆ. ವಿಶ್ವದಲ್ಲಿ ಕೇವಲ ನಾಲ್ಕು ಶ್ರೇಷ್ಠ ಮಹಾಕಾವ್ಯಗಳಿವೆ ಎನ್ನುತ್ತಾರೆ ಲೇಖಕರು. ಸಾಹಿತ್ಯ ಕೃತಿಗಳು ಸಮಾಜ ಅಥವಾ ರಾಷ್ಟ್ರದ ಸಂಸ್ಕೃತಿ, ಚಿಂತನೆ, ಪ್ರಬುದ್ಧತೆಯನ್ನು ಪ್ರತಿಫಲಿಸುವುದಿಲ್ಲ. ಅಲ್ಲಿಯೂ ಆಯ್ಕೆ ಬರುತ್ತದೆ’ ಎಂದರು.

ಪ್ರೊ.ಓ.ಎಲ್.ನಾಗಭೂಷಣಸ್ವಾಮಿ, ‘ಈ ಪುಸ್ತಕ ಓದಿದಾಗ ನಮ್ಮ ಸಂಸ್ಕೃತಿ, ಸಾಹಿತ್ಯ ಕೃತಿಗಳ ಬಗ್ಗೆ ಅಪೂರ್ವವಾದ ಒಳನೋಟಗಳು ಲಭಿಸುತ್ತವೆ. ಇಷ್ಟೊಂದು ವ್ಯಾಪ್ತಿಯ ಒಂದು ಸಾಂಸ್ಕೃತಿಕ ವಿಮರ್ಶೆ ಕನ್ನಡದಲ್ಲಿ ಆಗಿಲ್ಲ’ ಎಂದರು.

ಪ್ರೊ.ಎಚ್.ಎಸ್.ರಾಘವೇಂದ್ರ ರಾವ್, ‘ಪೂರ್ವವನ್ನು ಮರೆತ ಹಾಗೆ ಪಶ್ಚಿಮವು ನಮ್ಮನ್ನು ಆವರಿಸುತ್ತಿರುವ ವಿಶ್ವದಲ್ಲಿ, ನಾವೆಲ್ಲಾ ಪೂರ್ವ ಬೇಕು ಎನ್ನುತ್ತಲೇ ಪಶ್ಚಿಮವಾಗುತ್ತಿರುವ ಈ ಕ್ಷಣದಲ್ಲಿ ಇಂತಹ ಪುಸ್ತಕದ ಓದಿಗೆ ಬಹಳ ಮಹತ್ವವಿದೆ. ಕವಿರಾಜಮಾರ್ಗದಿಂದ ಕಾರಂತರವರೆಗಿನ ಸಾಹಿತ್ಯದ ವಿಸ್ತಾರವನ್ನು ಲೇಖಕರು ಏಕಕಾಲದಲ್ಲಿ, ಒಟ್ಟಂದದಲ್ಲಿ ಮತ್ತು ಬಿಡಿಯಾಗಿ ಗಮನಕ್ಕೆ ತಂದಿದ್ದಾರೆ’ ಎಂದು ಹೇಳಿದರು.

ಲೇಖಕಿ ವನಮಾಲಾ ವಿಶ್ವನಾಥ, ‘ಮೂಲ ಕೃತಿಯಲ್ಲಿ ಇರುವ ಸಣ್ಣಪುಟ್ಟ ತೊಂದರೆಗಳನ್ನು ಅನುವಾದಿತ ಕೃತಿಯಲ್ಲಿ ನಿವಾರಿಸುವ ಮೂಲಕ ಸ್ಪಷ್ಟತೆ ನೀಡುವ ಕೆಲಸವನ್ನು ಎನ್.ಎಸ್.ರಾಘವನ್ ಮಾಡಿದ್ದಾರೆ’ ಎಂದು ಹೇಳಿದರು.

ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, ಮೂಲ ಕೃತಿಯ ಲೇಖಕ ಸುಚೇತನ ಸ್ವರೂಪ, ಎನ್.ಎಸ್. ರಾಘವನ್ ಇದ್ದರು.

‘ವಿದ್ಯಾರ್ಥಿ ವೇತನ: ಅವಧಿ ವಿಸ್ತರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿ ವೇತನ ತಂತ್ರಾಂಶದ (ಎಸ್‌ಎಸ್‌ಪಿ) ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸಬೇಕು ಎಂದು ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ.

ಬಿ.ಎಸ್ಸಿ. ನರ್ಸಿಂಗ್ ಮತ್ತು ವಿವಿಧ ಪದವಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಸರ್ಕಾರಿ ಸೀಟು ಪಡೆದ ವಿದ್ಯಾರ್ಥಿಗಳು ರಾಜ್ಯದಾದ್ಯಂತ ಮಾರ್ಚ್ ತಿಂಗಳಲ್ಲಿ ಕಾಲೇಜಿಗೆ ಪ್ರವೇಶ ಪಡೆದಿದ್ದಾರೆ. ಈ ವಿದ್ಯಾರ್ಥಿಗಳಿಗೆ ಕೌನ್ಸೆಲಿಂಗ್ ನಂಬರ್ ನೀಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ವಿಳಂಬ ನೀತಿ ಅನುಸರಿಸುತ್ತಿದೆ. ಹೀಗಾಗಿ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅಡಚಣೆಯಾಗುತ್ತಿದೆ. ಸಂಬಂಧಪಟ್ಟ ಇಲಾಖೆಗಳ ನಡುವಣ ಸಂವಹನ ಕೊರತೆಯಿಂದ ವಿದ್ಯಾರ್ಥಿಗಳು ತೊಂದರೆ ಅನುಭವಿಸಬೇಕಾಗಿದೆ ಎಂದು ದೂರಿದ್ದಾರೆ.

ಈ ಬಗ್ಗೆ ಕ್ರಮಕೈಗೊಳ್ಳಬೇಕು ಎಂದು ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದಾರೆ.

ನಿಧನ ವಾರ್ತೆ

ಡಿ.ಎಸ್. ಚಂದ್ರಶೇಖರಯ್ಯ



ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಗಣಿತ ವಿಜ್ಞಾನ ವಿಭಾಗದ ನಿವೃತ್ತ ಮುಖ್ಯಸ್ಥ ಡಾ.ಡಿ. ಎಸ್.ಚಂದ್ರಶೇಖರಯ್ಯ (78) ನಗರದಲ್ಲಿ ಶನಿವಾರ ನಿಧನರಾದರು. ಲೇಖಕ ಡಿ.ಎಸ್.ನಾಗಭೂಷಣ ಅವರ ಸಹೋದರರಾಗಿದ್ದ ಚಂದ್ರಶೇಖರಯ್ಯ ಅವರಿಗೆ ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅಭಿಮತ

‘ಆತ್ಮ ಕಥನಕ್ಕೆ ನೆನಪಿನ ನಿಧಿ ಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆತ್ಮಕಥನಕ್ಕೆ ನೆನಪಿನ ನಿಧಿ ಬೇಕು. ಆ ನಿಧಿಯನ್ನು ಎಷ್ಟರ ಮಟ್ಟಿಗೆ ಸಂಯೋಜಿಸಿ ಕೃತಿಯಾಗಿ ರೂಪಿಸುತ್ತೇವೆ ಎಂಬುದು ತುಂಬಾ ಮುಖ್ಯ’ ಎಂದು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ತಿಳಿಸಿದರು.

ಬಿ.ಎಂ.ಶ್ರೀ.ಪ್ರತಿಷ್ಠಾನ ಹಾಗೂ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಕಥೆಗಾರ ಕೆ.ಸತ್ಯನಾರಾಯಣ ಅವರಿಗೆ ‘ಸೂ.ವೆಂ.ಆರಗ ವಿಮರ್ಶಾ ಪ್ರಶಸ್ತಿ’ ಹಾಗೂ ವಿಮರ್ಶಕಿ ಶಾಂತಾ ಇಮ್ರಾಪುರ ಅವರಿಗೆ ‘ಡಾ.ವಿಜಯಾ ಸುಬ್ಬರಾಜ್ ಗಣ್ಯಲೇಖಕಿ’ ಪ್ರಶಸ್ತಿ ಪ್ರದಾನ ಮಾಡಿ ಭಾನುವಾರ ಮಾತನಾಡಿದರು.

‘ಆತ್ಮಕಥನವು ಕಥೆ, ಕಾದಂಬರಿ, ನಾಟಕಗಳಿಗಿಂತಲೂ ಭಿನ್ನವಾದ ಪ್ರಕಾರ. ಇದನ್ನು ಶುರುಮಾಡುವ ವಿಧಾನವೇ ಬೇರೆಯದ್ದಾಗಿರುತ್ತದೆ. ಇದನ್ನು ಸಾಹಿತ್ಯದ, ವಿಮರ್ಶೆಯ ಪರಿಧಿಯೊಳಗೆ ಅತ್ಯಂತ ಗಂಭೀರವಾಗಿ ಪರಿಗಣಿಸಬೇಕೋ ಬೇಡವೋ ಎಂಬ ಯೋಚನೆ ಇದೆ. ಆತ್ಮಕಥನಗಳಲ್ಲಿನ ಸಾಮಾನ್ಯ ಅಂಶವನ್ನು ಶೋಧಿಸಿ, ಅದನ್ನು ಹೇಗೆ ಆರಂಭಿಸುತ್ತಾರೆ, ಏತಕ್ಕಾಗಿ ಬರೆಯುತ್ತಾರೆ ಎಂಬುದನ್ನು ಸೂತ್ರೀಕರಿಸಿ ಅದಕ್ಕೆ ತಾತ್ವಿಕ ಚೌಕಟ್ಟು ಕಟ್ಟಬೇಕು. ಆ ಪ್ರಯತ್ನವನ್ನು ಸತ್ಯನಾರಾಯಣ ‘ಅವರವರ ಭವಕ್ಕೆ ಓದುಗರ ಭಕುತಿಗೆ’ ಕೃತಿಯಲ್ಲಿ ಮಾಡಿದ್ದಾರೆ’ ಎಂದು ಹೇಳಿದರು.



ಅಗ್ರಹಾರ ಕೃಷ್ಣಮೂರ್ತಿ (ಎಡತುದಿ) ಅವರು ಶಾಂತಾ ಇಮ್ರಾಪುರ ಹಾಗೂ ಕೆ.ಸತ್ಯನಾರಾಯಣ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. (ಎಡದಿಂದ) ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಗೌರವ ಕೋಶಾಧಿಕಾರಿ ಎಸ್ ಅನಿಲ್ ಕುಮಾರ್, ಲೇಖಕಿ ವಿಜಯಾ ಸುಬ್ಬರಾಜ್ ಮತ್ತು ಗೌರವ ಕಾರ್ಯದರ್ಶಿ ಶಾಂತರಾಜು ಇದ್ದಾರೆ–ಪ್ರಜಾವಾಣಿ ಚಿತ್ರ

ಕೆ.ಸತ್ಯನಾರಾಯಣ, ‘ಬೇರೆ ಬೇರೆ ಪ್ರಕಾರಕ್ಕೆ ಸಿಕ್ಕಷ್ಟೆ ಮನ್ನಣೆ ವಿಮರ್ಶೆಗೂ ಲಭಿಸಿರುವುದಕ್ಕೆ ಸಂತಸವಾಗಿದೆ. ವಿಮರ್ಶೆ ಎಂಬುದು ನಮ್ಮ ಅನುಭವ ಮತ್ತು ಸಂತಸ ಹಂಚಿಕೊಳ್ಳುವಿಕೆ. ಅದು ಕೇವಲ ಮಾಹಿತಿಯಲ್ಲ’ ಎಂದು ಹೇಳಿದರು.

ಶಾಂತಾ ಇಮ್ರಾಪುರ ಅವರು, ‘ಬಿಎಂಶ್ರೀ ಅವರನ್ನು ನೆನೆಯದ ಕನ್ನಡದ ಮನಸ್ಸುಗಳೇ ಇಲ್ಲ. ಕನ್ನಡ ಭಾಷೆಯನ್ನ ಪುನರುಜ್ಜೀವನಗೊಳಿಸುವ ದಿಸೆಯಲ್ಲಿ ಆಲೋಚಿಸಿದ ಪ್ರಮುಖರಲ್ಲಿ ಅವರೂ ಕೂಡ ಒಬ್ಬರಾಗಿದ್ದರು’ ಎಂದರು.

‘ಮಹಿಳೆಯರು ಉತ್ಕೃಷ್ಟವಾದ ಬರಹಗಳನ್ನು ನೀಡುತ್ತಿದ್ದಾರೆ. ಚರಿತ್ರೆಯ ಹಿನ್ನೆಲೆಯಲ್ಲಿ ಮುಂದೆ ಸಾಗುತ್ತಿದ್ದಾರೆ. ಅವರಿಗೆ ಇನ್ನಷ್ಟು ಪ್ರೋತ್ಸಾಹ ಹಾಗೂ ಮನ್ನಣೆ ನೀಡುವ ಕೆಲಸ ಆಗಬೇಕು’ ಎಂದು ತಿಳಿಸಿದರು.

ಹೂವಿನಾಯಕನಹಳ್ಳಿ: ಅಭಿವೃದ್ಧಿಗೊಂಡ ಕೆರೆ ಲೋಕಾರ್ಪಣೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ವ್ಯಾಪ್ತಿಯ ಬಂಡಿಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ಹಾಗೂ ಐಟಿಸಿ ಸಂಸ್ಥೆಯ ಸಹಯೋಗದಲ್ಲಿ ಅಭಿವೃದ್ಧಿಪಡಿಸಿರುವ ಹೂವಿನಾಯಕನಹಳ್ಳಿ ಗ್ರಾಮದ ಕೆರೆಯನ್ನು ಸಂಸದ ಡಿ.ವಿ. ಸದಾನಂದಗೌಡ ಅವರು ಲೋಕಾರ್ಪಣೆಗೊಳಿಸಿದರು.

‘ಅಲ್ಪಾವಧಿಯಲ್ಲಿ ಹೆಚ್ಚಿನ ತೆರಿಗೆ ಸಂಗ್ರಹಿಸುವ ಮೂಲಕ ಮೂಲಸೌಕರ್ಯ ಅನುಷ್ಠಾನಗೊಳಿಸುವ ಕಾರ್ಯದಲ್ಲಿ ಈ ಪಂಚಾಯಿತಿಯು ಮುಂಚೂಣಿಯಲ್ಲಿದೆ. ಜನರ ಜೀವನಾಡಿಯಾಗಿರುವ ಕೆರೆಯನ್ನು ಅಭಿವೃದ್ಧಿಗೊಳಿಸಿರುವುದು ಶ್ಲಾಘನೀಯ’ ಎಂದು ಸದಾನಂದ ಗೌಡ ತಿಳಿಸಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಎನ್.ಜಗದೀಶ್ ಮಾತನಾಡಿದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್, ತಹಶೀಲ್ದಾರ್ ಕೆ.ನರಸಿಂಹಮೂರ್ತಿ, ಅಂತರರಾಷ್ಟ್ರೀಯ ವಿಮಾನನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎ.ರವಿ, ಗ್ರಾಮ ಪಂಚಾಯಿತಿ ಸದಸ್ಯರಾದ ಎಂ.ಗಿರೀಶ್, ಎನ್.ಮುನೇಗೌಡ, ಬಿಜೆಪಿ ಮುಖಂಡರಾದ ದೊಡ್ಡಬಸವರಾಜು, ಡಿ.ಜಗನ್ನಾಥ್, ಟಿ.ಪಿ.ಪ್ರಕಾಶ್, ದೀಪು ಇದ್ದರು.



ಸಂಸದ ಸದಾನಂದ ಗೌಡ ಅವರು ಕೆರೆ ಲೋಕಾರ್ಪಣೆ ಕಾರ್ಯಕ್ರಮವನ್ನು ಉದ್ಘಾಟಿಸಿದರು

ಸಾರಿಗೆ ಸಂಸ್ಥೆಯ 7,200 ನೌಕರರ ವಿರುದ್ಧದ ಪ್ರಕರಣ ಮನ್ನಾ

ಬೆಂಗಳೂರು: ಕರ್ನಾಟಕ ರಸ್ತೆ ಸಾರಿಗೆ ನಿಗಮವು (ಕೆಎಸ್ಆರ್‌ಟಿಸಿ) 7,200 ನೌಕರರ ವಿರುದ್ಧದ ಶಿಸ್ತು ಪ್ರಕರಣಗಳನ್ನು ಒಂದು ಬಾರಿಗೆ ಅನ್ವಯಿಸುವಂತೆ ಮನ್ನಾ ಮಾಡಿದೆ.

ಭಾನುವಾರ ನಡೆದ ಕಾರ್ಮಿಕರ ದಿನಾಚರಣೆ ಸಂದರ್ಭದಲ್ಲಿ ನಿಗಮವು ಕಾರ್ಮಿಕರಿಗೆ ಈ ಕೊಡುಗೆ ನೀಡಿದೆ. ಹತ್ತು ತಿಂಗಳಿಗಿಂತ ಕಡಿಮೆ ಅವಧಿಯ ಗೈರುಹಾಜರಿಯನ್ನು ಮನ್ನಿಸಲಾಗಿದೆ. ಕೂಡಲೇ ಕರ್ತವ್ಯಕ್ಕೆ ಹಾಜರಾಗುವ ನೌಕರರ ವಿಚಾರಣೆಯನ್ನು ರದ್ದುಗೊಳಿಸಲಾಗಿದೆ. ದೀರ್ಘ ಕಾಲದಿಂದ ಕೆಲಸಕ್ಕೆ ಗೈರಾಗಿದ್ದ 110 ನೌಕರರು ಮೂರು ದಿನಗಳಿಂದ ಕರ್ತವ್ಯ ಹಾಜರಾಗಿದ್ದಾರೆ.

ಬೆಂಗಳೂರು ಕೇಂದ್ರೀಯ ವಿಭಾಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್, ಶಿಸ್ತು ಪ್ರಕರಣ ಕೈಬಿಡಲಾದ ನೌಕರರಿಗೆ ಆದೇಶದ ಪ್ರತಿ ಹಾಗೂ ಸಿಹಿ ವಿತರಿಸಿ ಶುಭ ಕೋರಿದರು.

ಒಟ್ಟು 8,414 ಮಂದಿ ವಿರುದ್ಧ ಅಶಿಸ್ತು ಪ್ರಕರಣಗಳು ದಾಖಲಾಗಿವೆ. 7,200 ಪ್ರಕರಣಗಳನ್ನು ಕಡಿಮೆ ಅಂದರೆ, ₹100ರಿಂದ ₹ 500 ದಂಡ ವಿಧಿಸಿ ಮುಕ್ತಾಯಗೊಳಿಸಲಾಗಿದೆ. ಏನಿಲ್ಲವೆಂದರೂ ₹ 25,000 ದಂಡ ವಿಧಿಸಬಹುದಾಗಿದ್ದ ಪ್ರಕರಣಗಳಿವು ಎಂದು ನಿಗಮವು ತಿಳಿಸಿದೆ.

ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದ ಅನ್ಬುಕುಮಾರ್, 'ಕಾರ್ಮಿಕರೇ ಸಾರಿಗೆ ಸಂಸ್ಥೆಯ ಬೆನ್ನೆಲುಬು. ಅವರ ಕ್ಷೇಮವೇ ಪ್ರಮುಖ ಆದ್ಯತೆ. ಅಧಿಕಾರಿಗಳು ಮತ್ತು ನೌಕರರ ನಡುವೆ ಬಾಂಧವ್ಯ ಚೆನ್ನಾಗಿದ್ದರೆ ಸಂಸ್ಥೆಯೂ ಚೆನ್ನಾಗಿರುತ್ತದೆ' ಎಂದರು.

'ಶಿಕ್ಷೆ ವಿಧಿಸುವುದಷ್ಟೇ ಆಡಳಿತ ವರ್ಗದ ಕೆಲಸವಲ್ಲ. ನೌಕರರು ಮತ್ತೊಮ್ಮೆ ಅಪರಾಧ, ಅಪಘಾತ ಅಥವಾ ಗೈರು ಹಾಜರಿಯಂತಹ ಪ್ರಕರಣಗಳಲ್ಲಿ ಭಾಗಿಯಾಗಬಾರದು. ಜನರಿಗೆ ಉತ್ತಮ ಸೇವೆ ಒದಗಿಸಲು ನಮ್ಮೊಡನೆ ಕೈಜೋಡಿಸಬೇಕು' ಎಂದರು.

'ನಿಗಮ ನಿತ್ಯ ಸರಾಸರಿ ₹10 ಕೋಟಿ ವಹಿವಾಟು ನಡೆಸಬೇಕು. ಈಗ ಸರಾಸರಿ ₹ 8 ಕೋಟಿ ವಹಿವಾಟು ನಡೆಯುತ್ತಿದೆ. ಇದರಲ್ಲಿ ಶೇ 70ರಷ್ಟು ಮೊತ್ತ ಇಂಧನಕ್ಕಾಗಿ ವ್ಯಯವಾಗಲಿದೆ. ನಿಗಮವು ಸದ್ಯ ಆರ್ಥಿಕವಾಗಿ ಕ್ಲಿಷ್ಟಕರ ಪರಿಸ್ಥಿತಿಯಲ್ಲಿದೆ' ಎಂದು ತಿಳಿಸಿದರು.

ಉನ್ನತ ವಿದ್ಯಾಭ್ಯಾಸ ನಡೆಸುತ್ತಿರುವ ನೌಕರರ ಮಕ್ಕಳನ್ನು ಸನ್ಮಾನಿಸಲಾಯಿತು.



ಕೆಎಸ್ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಅವರು ಶಿಸ್ತು ಪ್ರಕರಣಗಳನ್ನು ಕೈಬಿಡಲಾದ ನೌಕರರಿಗೆ ಆದೇಶದ ಪ್ರತಿ ಹಸ್ತಾಂತರಿಸಿದರು

ಅತ್ತಿಬೆಲೆವರೆಗೆ ಮೆಟ್ರೊ: ಎಚ್‌ಡಿಕೆ ಇಂಗಿತ

ಆನೇಕಲ್: 'ಅತ್ತಿಬೆಲೆಗೆ ಮೆಟ್ರೊ ರೈಲು ತರುವ ಸಂಬಂಧ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು. ಈ ಭಾಗದ ಜನರಿಗೆ ಅನುಕೂಲ ಮಾಡುವ ಉದ್ದೇಶ ನಮ್ಮದಾಗಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಜನತಾ ಜಲಧಾರೆ ಕಾರ್ಯಕ್ರಮದಲ್ಲಿ ಮಾತನಾಡಿ, 'ರಾಜ್ಯದಲ್ಲಿ ತೆರಿಗೆ ಹಣ ಲೂಟಿಯಾಗುತ್ತಿದೆ. ಶೇ 40ರಷ್ಟು ಕಮಿಷನ್ ಬಗ್ಗೆ ಚರ್ಚೆಯಾಗುತ್ತಿದೆ. ರಾಷ್ಟ್ರೀಯ ಪಕ್ಷಗಳು ಪರಸ್ಪರ ಕೆಸರೆರಚಾಟ ನಡೆಸುತ್ತಿವೆ' ಎಂದು ಅವರು ತಿಳಿಸಿದರು.

ಪಟಿಯಾಲ ಘರ್ಷಣೆ 6 ಮಂದಿ ಬಂಧನ

ನವದೆಹಲಿ: ಪಂಜಾಬ್‌ನ ಪಟಿಯಾಲ ಜಿಲ್ಲೆಯಲ್ಲಿ ನಡೆದ ಘರ್ಷಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಸಂಚುಕೋರ ಸೇರಿ ಆರು ಮಂದಿಯನ್ನು ಭಾನುವಾರ ಬಂಧಿಸಲಾಗಿದೆ.

ದಮ್‌ದಮಿ ಟಕ್ಸಾಲ್ ಸಂಘಟನೆಯ ಮುಖಂಡ ಬರ್ಜಿಂದರ್ ಸಿಂಗ್ ಪರ್ವಾನಾ ಬಂಧಿತ ಆರೋಪಿ.

ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ, ಉಗ್ರರ ನಿಗ್ರಹ ಕಾನೂನು ಹಾಗೂ 1984ರ ದಂಗೆ ಕುರಿತ ಹೇಳಿಕೆಗಳಿಂದ ಬರ್ಜಿಂದರ್ ಸಿಂಗ್ ಪರ್ವಾನಾ ಈ ಹಿಂದೆ ಚರ್ಚೆಗೆ ಗ್ರಾಸವಾಗಿದ್ದರು. 'ಪರ್ವಾನಾ ಸ್ವಯಂ ಘೋಷಿತ ಸಿಖ್ ಮುಖಂಡನಾಗಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ಬೆಂಬಲ ಪಡೆಯಲು ಅಸಂಬದ್ಧ ಭಾಷಣಗಳನ್ನು ಮಾಡಿದ್ದಾರೆ' ಎಂದು ಪೊಲೀಸ್ ಐಜಿ ಮುಖ್ವಿಂದರ್ ಸಿಂಗ್ ಛಿನ ಹೇಳಿದ್ದಾರೆ.

ಈ ಹಿಂದೆ ಶಿವಸೇನಾ ಮುಖಂಡ ಹರೀಶ್ ಸಿಂಗ್ಲಾ ಸೇರಿ ಮೂರು ಆರೋಪಿಗಳನ್ನು ಬಂಧಿಸಲಾಗಿತ್ತು. ಹರೀಶ್, ಪಂಜಾಬ್‌ನಲ್ಲಿ ಖಾಲಿಸ್ತಾನ ವಿರೋಧಿ ಪ್ರತಿಭಟನೆಗಳ ನೇತೃತ್ವ ವಹಿಸಿದ್ದು, ಘರ್ಷಣೆಯಲ್ಲಿ ಅವರು ಪ್ರಮುಖ ಪಾತ್ರ ವಹಿಸಿರುವುದಾಗಿ ಶಂಕಿಸಲಾಗಿದೆ.



ಗೌರವ ವಂದನೆ ಸ್ವೀಕಾರ

ಭೂಸೇನೆಯ ನೂತನ ಉಪ ಮುಖ್ಯಸ್ಥರಾಗಿ ಭಾನುವಾರ ಅಧಿಕಾರ ಸ್ವೀಕರಿಸಿದ ಲೆಫ್ಟಿನೆಂಟ್ ಜನರಲ್ ಬಿ.ಎಸ್. ರಾಜು ಅವರು ನವದೆಹಲಿಯ ಸೌತ್ ಬ್ಲಾಕ್‌ನಲ್ಲಿ ಸೇನಾ ಸಿಬ್ಬಂದಿಯಿಂದ ಗೌರವ ವಂದನೆ ಸ್ವೀಕರಿಸಿದರು –ಪಿಟಿಐ ಚಿತ್ರ

ಬಿರ್‌ಭೂಮ್ ಹಿಂಸಾಚಾರ ಪ್ರಕರಣ ಗಾಯಗೊಂಡಿದ್ದ ಮಹಿಳೆ ಸಾವು

ರಾಮ್‌ಪುರಹಾಟ್ (ಪಿಟಿಐ): ಬಿರ್‌ಭೂಮ್ ಜಿಲ್ಲೆಯ ಬೋಗ್‌ತುಇ ಗ್ರಾಮದಲ್ಲಿ ಮಾರ್ಚ್‌ನಲ್ಲಿ ನಡೆದ ಹಿಂಸಾಚಾರದಲ್ಲಿ ಸುಟ್ಟ ಗಾಯಗಳಿಂದ ಬಳಲುತ್ತಿದ್ದ ಮಹಿಳೆಯೊಬ್ಬರು ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಬೆಳಿಗ್ಗೆ ಆಸ್ಪತ್ರೆಯಲ್ಲಿಯೇ ಕೊನೆಯುಸಿರೆಳೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಇದರೊಂದಿಗೆ, ಸ್ಥಳೀಯ ಟಿಎಂಸಿ ನಾಯಕನ ಹತ್ಯೆಯ ನಂತರ ಬೋಗ್‌ತುಇ ಗ್ರಾಮದಲ್ಲಿ ಮನೆಗಳಿಗೆ ಬೆಂಕಿ ಹಚ್ಚಿದ ಘಟನೆಯಲ್ಲಿ ಮೃತಪಟ್ಟವರ ಒಟ್ಟು ಸಂಖ್ಯೆ 10ಕ್ಕೆ ಏರಿಕೆಯಾಗಿದೆ.

ಶೇಕಡಾ 27ರಷ್ಟು ಸುಟ್ಟ ಗಾಯಗಳೊಂದಿಗೆ ಮಹಿಳೆಯನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಗಾಯಾಳು ಮಹಿಳೆಯ ಸ್ಥಿತಿ ಸುಧಾರಿಸಿದ ನಂತರ ಆಕೆಯನ್ನು ಮನೆಗೆ ಕಳುಹಿಸಲಾಗಿತ್ತು. ಆದರೆ, ಮತ್ತೆ ಆಕೆಯ ಆರೋಗ್ಯ ಸ್ಥಿತಿ ಹದಗೆಟ್ಟ ನಂತರ ಮತ್ತೊಮ್ಮೆ ರಾಮ್‌ಪುರಹಾಟ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಯಿತು. ಬಳಿಕ ಅವರು ಭಾನುವಾರ ಮುಂಜಾನೆ ಸಾವಿಗೀಡಾಗಿದ್ದಾರೆ' ಎಂದು ಅವರು ಹೇಳಿದ್ದಾರೆ.



ಕಾರ್ಮಿಕರ ದಿನಾಚರಣೆ

ಅಂತರರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಅಂಗವಾಗಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯು ಪುರಭವನದ ಬಳಿ ಭಾನುವಾರ ಏರ್ಪಡಿಸಿದ್ದ ರ‍್ಯಾಲಿಯಲ್ಲಿ ವಿವಿಧ ಸಂಘಟನೆಗಳ ಸದಸ್ಯರು ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಕಳವಳ

ಧ್ವನಿ ಎತ್ತದ ಕಾರ್ಮಿಕ ಸಂಘಟನೆಗಳು

ಪ್ರಜಾವಾಣಿ ವಾರ್ತೆ

ಆನೇಕಲ್: 'ಕೇಂದ್ರ ಸರ್ಕಾರದ ಶೋಷಣೆ, ಕಾರ್ಮಿಕ ವಿರೋಧಿ ನೀತಿ ಮತ್ತು ಧೋರಣೆ ವಿರುದ್ಧ ಧ್ವನಿ ಎತ್ತಲು ಕಾರ್ಮಿಕ ಸಂಘಟನೆಗಳು ವಿಫಲವಾಗಿವೆ' ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ಭಾನುವಾರ ತಾಲ್ಲೂಕಿನ ಬೊಮ್ಮಸಂದ್ರದಲ್ಲಿ ಕೆಪಿಸಿಸಿ ಕಾರ್ಮಿಕ ಘಟಕ ಹಮ್ಮಿಕೊಂಡಿದ್ದ 'ಕಾರ್ಮಿಕರ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ಕಾರ್ಮಿಕರ ಹಿತಾಸಕ್ತಿಗೆ ಧಕ್ಕೆ ತರುತ್ತಿರುವ ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಜನರೇ ಧ್ವನಿ ಎತ್ತಬೇಕು' ಎಂದರು.

'ಕಾರ್ಮಿಕರ ಕಲ್ಯಾಣಕ್ಕಾಗಿ ರೂಪಿಸಿದ್ದ ಕಾನೂನು ಬಿಜೆಪಿ ಆಡಳಿತ ದಲ್ಲಿ ಸಡಿಲವಾಗುತ್ತಿದೆ. ಕಾರ್ಮಿಕರ ಶ್ರೇಯೋಭಿವೃದ್ಧಿಯ 49 ಕಾಯ್ದೆಗಳಲ್ಲಿ ಸುಮಾರು 20 ಕಾಯ್ದೆ ತೆಗೆಯಲಾಗಿದೆ. ನೋಟಿಸ್ ನೀಡದೆ ಕಾರ್ಮಿಕರನ್ನು ಕೆಲಸದಿಂದ ಕಿತ್ತು ಹಾಕುವಂತಹ ಕಾನೂನುಗಳನ್ನು ಕೇಂದ್ರ ಜಾರಿಗೆ ತರುತ್ತಿದೆ. ಕಾರ್ಮಿಕರ ಹಕ್ಕಿಗಾಗಿ ಎಲ್ಲ ಪಕ್ಷಗಳು ಧ್ವನಿ ಎತ್ತಬೇಕು. ಕಾರ್ಮಿಕರ ಹಿತ ಕಾಯುವುದು ಎಲ್ಲರ ಜವಾಬ್ದಾರಿ' ಎಂದರು.

'ದೇಶದಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಸಂಕಷ್ಟದಲ್ಲಿವೆ. ಇವುಗಳಿಗೆ ನೆರವಾಗದ ಕೇಂದ್ರ ಸರ್ಕಾರ ಬಂಡವಾಳ ಶಾಹಿಗಳ ₹10 ಲಕ್ಷ ಕೋಟಿ ಸಾಲಮನ್ನಾ ಮಾಡಿದೆ. ಬಿಜೆಪಿಯನ್ನು ಈ ಹಿಂದೆ ವ್ಯಾಪಾರಿಗಳ ಪಕ್ಷ ಎಂದು ಕರೆಯಲಾಗುತ್ತಿತ್ತು. ಅದರಂತೆ ವ್ಯಾಪಾರಿಗಳಿಗೆ ಮಾತ್ರ ನೆರವಾಗುತ್ತಿದೆ. ರೈತರು, ಕಾರ್ಮಿಕರ ಕಲ್ಯಾಣ ಮರೆತಿದೆ. ದೇಶದಲ್ಲಿ 26.12 ಲಕ್ಷ ಸರ್ಕಾರಿ ಉದ್ಯೋಗಗಳು ಖಾಲಿಯಿವೆ. ಜನರ ಹಿತ ಕಾಯುವಲ್ಲಿ ವಿಫಲವಾಗಿರುವ ಬಿಜೆಪಿಯು ಧರ್ಮ, ಜಾತಿ ಆಧಾರದ ಮೇಲೆ ಮತ ಗಳಿಸಲು ಮುಂದಾಗುತ್ತಿದೆ. ತಮ್ಮನ್ನು ಪ್ರಶ್ನಿಸುವವರ ಮೇಲೆ ಕೆಸರೆರಚುವ ಕೆಲಸ ಮಾಡಲು ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಳ್ಳುತ್ತಿದೆ' ಎಂದು ಆರೋಪಿಸಿದರು.

'ಶಿಕ್ಷಕ, ಕೃಷಿಕ, ಕಾರ್ಮಿಕ, ಸೈನಿಕ ಸಮಾಜದ ಆಧಾರ ಸ್ತಂಭಗಳು ಆದರೆ ಬಿಜೆಪಿ ಆಡಳಿತದಲ್ಲಿ ಈ ಸ್ತಂಭಗಳ ಕಲ್ಯಾಣಕ್ಕಾಗಿ ಸೂಕ್ತ ಕಾರ್ಯಕ್ರಮ ರೂಪಿಸಿಲ್ಲ. ಹಾಗಾಗಿ ದೇಶದ ಹಿತಕ್ಕೆ ಧಕ್ಕೆ ಆಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಸಲೀಂ ಅಹಮದ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಸಂಸದ ಡಿ.ಕೆ.ಸುರೇಶ್, ಶಾಸಕ ಬಿ.ಶಿವಣ್ಣ, ವಿಧಾನ ಪರಿಷತ್ ಸದಸ್ಯರಾದ ಯು.ಬಿ. ವೆಂಕಟೇಶ್, ಕಾಂಗ್ರೆಸ್ ಕಾರ್ಮಿಕ ಘಟಕದ ಅಧ್ಯಕ್ಷ ಪುಟ್ಟಸ್ವಾಮಿ ಗೌಡ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಪ್ಪ, ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಲಕ್ಷ್ಮೀನಾರಾಯಣ್, ಯುವ ಕಾಂಗ್ರೆಸ್ ಅಧ್ಯಕ್ಷ ಮಹಮದ್ ನಲಪಾಡ್, ಮಾಜಿ ಸಚಿವ ಎಚ್.ಎಂ.ರೇವಣ್ಣ ಅವರು ಇದ್ದರು.

ಗೌರವ ವಂದನೆ ಸ್ವೀಕಾರ ಕಾರ್ಯಕ್ರಮದ ಬಳಿಕ ಭೂಸೇನೆಯ ನೂತನ ಮುಖ್ಯಸ್ಥರ ಹೇಳಿಕೆ

ಸನ್ನದ್ಧ ಸೇನೆಯೇ ಆದ್ಯತೆ: ಜ. ಪಾಂಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸದ್ಯದ ಹಾಗೂ ಭವಿಷ್ಯದ ಭದ್ರತಾ ಅಪಾಯಗಳನ್ನು ಎದುರಿಸುವ ದಿಸೆಯಲ್ಲಿ ಸೇನೆಯನ್ನು ಗರಿಷ್ಠ ಮಟ್ಟದ ಕಾರ್ಯಾಚರಣೆ ಸನ್ನದ್ಧ ಸ್ಥಿತಿಯಲ್ಲಿ ಇರಿಸುವುದೇ ತಮ್ಮ ಆದ್ಯತೆಯಾಗಿದೆ ಎಂದು ಸೇನೆಯ ನೂತನ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ಭಾನುವಾರ ಹೇಳಿದ್ದಾರೆ.

ಪೂರ್ವ ಲಡಾಖ್‌ನಲ್ಲಿ ಚೀನಾದಿಂದ ಎದುರಾಗಿರುವ ಬಿಕ್ಕಟ್ಟು, ಜಮ್ಮು– ಕಾಶ್ಮೀರದಲ್ಲಿ ಗಡಿಯಾಚೆಗಿನ ಭಯೋತ್ಪಾದನಾ ಚಟುವಟಿಕೆ ಸವಾಲುಗಳು ಎದುರಾಗಿರುವ ಈ ಸಮಯದಲ್ಲಿ ಪಾಂಡೆ ಅವರ ಈ ಮಾತು ಮಹತ್ವ ಪಡೆದಿದೆ.

ಅಧಿಕಾರ ಸ್ವೀಕರಿಸಿದ ಮರುದಿನ ಮಾತನಾಡಿದ ಅವರು, 'ಜಾಗತಿಕ ಮಟ್ಟದಲ್ಲಿ ಭೌಗೋಳಿಕ, ರಾಜಕೀಯ ಪರಿಸ್ಥಿತಿಗಳು ತ್ವರಿತಗತಿಯಲ್ಲಿ ಬದಲಾಗುತ್ತಿವೆ. ಅದರ ಹಲವು ಸವಾಲುಗಳನ್ನು ನಾವು ಎದುರಿಸುತ್ತಿದ್ದೇವೆ' ಎಂದರು.



ವಾಯುಪಡೆ ಮುಖ್ಯಸ್ಥ ವಿ.ಆರ್. ಚೌಧರಿ, ಭೂಸೇನೆಯ ಮುಖ್ಯಸ್ಥ ಮನೋಜ್ ಪಾಂಡೆ ಮತ್ತು ನೌಕಾಪಡೆಯ ಮುಖ್ಯಸ್ಥ ಆರ್. ಹರಿಕುಮಾರ್ ಅವರು ಗೌರವ ವಂದನೆ ಕಾರ್ಯಕ್ರಮದಲ್ಲಿ ಜೊತೆಯಾಗಿ ಕಾಣಿಸಿಕೊಂಡರು –ಪಿಟಿಐ ಚಿತ್ರ

> ಗಡಿರಕ್ಷಣೆ ಹಾಗೂ ದೇಶ ನಿರ್ಮಾಣ ವಿಚಾರದಲ್ಲಿ ಸೇನಾಪಡೆಯು ವರ್ಣರಂಜಿತ ಇತಿಹಾಸ ಹೊಂದಿದೆ. ಭಾರತೀಯ ಸೇನೆಯನ್ನು ಮುನ್ನಡೆಸುವ ಅವಕಾಶ ಸಿಕ್ಕಿದ್ದು ನನಗೆ ಹೆಮ್ಮೆ
> **ಮನೋಜ್ ಪಾಂಡೆ,** ಸೇನೆಯ ನೂತನ ಮುಖ್ಯಸ್ಥ

'ನೌಕಾಪಡೆ ಹಾಗೂ ವಾಯುಪಡೆಗಳ ಜೊತೆಗೂಡಿ ಸೇನಾಪಡೆಯು ಎಂತಹ ಸವಾಲಿನ ಪರಿಸ್ಥಿತಿಯನ್ನಾದರೂ ಜಂಟಿಯಾಗಿ ಎದುರಿಸಲಿದೆ' ಎಂದು ಹೇಳಿದ್ದಾರೆ.

'ಈಗ ನಡೆಯುತ್ತಿರುವ ಸೇನಾ ಸುಧಾರಣೆಗಳು, ದಕ್ಷತೆಯನ್ನು ಹೆಚ್ಚಿಸುವ ಸೇನಾ ಪುನರ್‌ರಚನೆ ಕೆಲಸಗಳು ತಮ್ಮ ಅವಧಿಯಲ್ಲಿ ಆದ್ಯತೆ ಪಡೆಯಲಿವೆ' ಎಂದಿರುವ ಅವರು, ರಕ್ಷಣಾ ಕ್ಷೇತ್ರವು ಸ್ವಾವಲಂಬನೆ ಸಾಧಿಸುವುದಕ್ಕೂ ಹೆಚ್ಚಿನ ಗಮನ ನೀಡುವ ಭರವಸೆ ಕೊಟ್ಟರು.

ಸೌತ್ ಬ್ಲಾಕ್‌ನಲ್ಲಿ ಗೌರವ ವಂದನೆ ಸ್ವೀಕರಿಸಿದ ಬಳಿಕ ಮಾಧ್ಯಮ ಗೋಷ್ಠಿಯಲ್ಲಿ ಅವರು ಮಾತನಾಡಿದರು. ವಾಯುಪಡೆ ಮುಖ್ಯಸ್ಥ ಏರ್‌ಚೀಫ್ ಮಾರ್ಷಲ್ ವಿ.ಆರ್. ಚೌಧರಿ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್.ಹರಿಕುಮಾರ್ ಅವರು ಉಪಸ್ಥಿತರಿದ್ದರು.

ಮೂರೂ ಪಡೆಗಳ ನಡುವೆ ಸಹಕಾರ ಹೆಚ್ಚಿಸುವುದು ಹಾಗೂ ಇತರೆ ಸಂಸ್ಥೆಗಳ ಜೊತೆ ಸಂಪರ್ಕ ಸಾಧಿಸುವ ಮೂಲಕ ದೇಶ ನಿರ್ಮಾಣ ಕೆಲಸದಲ್ಲಿ ತೊಡಗಿಸಿಕೊಳ್ಳುವುದಾಗಿ ಪಾಂಡೆ ತಿಳಿಸಿದರು. ಹಿಂದಿನ ಸೇನಾ ಮುಖ್ಯಸ್ಥರ ಉತ್ತಮ ಕೆಲಸಗಳನ್ನು ಮುಂದುವರಿಸುವ ಬದ್ಧತೆ ವ್ಯಕ್ತಪಡಿಸಿದ ಅವರು, ಸೈನಿಕರು ಹಾಗೂ ಸಿಬ್ಬಂದಿಯ ಕಲ್ಯಾಣವೂ ತಮ್ಮ ಆದ್ಯತೆಗಳಲ್ಲಿ ಸೇರಿದೆ ಎಂದು ಹೇಳಿದರು.

ನೌಕಾಪಡೆ ಹಾಗೂ ವಾಯುಪಡೆಯ ಮುಖ್ಯಸ್ಥರ ಕುರಿತು ಮಾತನಾಡಿದ ಪಾಂಡೆ, ಒಟ್ಟಿಗೇ ಬೆಳೆದ ಮೂವರು ಇದೀಗ ಒಂದೇ ಅವಧಿಯಲ್ಲಿ ಮೂರು ಸೇನೆಗಳ ನೇತೃತ್ವ ವಹಿಸಿದ್ದೇವೆ ಎಂದರು. ಈ ಮೂವರೂ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ 61ನೇ ಕೋರ್ಸ್‌ನಲ್ಲಿ ಸಹಪಾಠಿಗಳಾಗಿದ್ದರು.

ಎಂಜಿನಿಯರಿಂಗ್ ವಿಭಾಗದಿಂದ ಆಯ್ಕೆಯಾದ ಮೊದಲ ಸೇನಾ ಮುಖ್ಯಸ್ಥರಾಗಿರುವ ಪಾಂಡೆ, ಸೇನೆಯ ಎಲ್ಲ ಪಡೆಗಳು ಹಾಗೂ ಸೇವೆಗಳಿಗೆ ಸಮಾನ ಅವಕಾಶ ಸಿಗಬೇಕು ಎಂದರು.

ಜನರಲ್ ಎಂ.ಎಂ. ನರವಣೆ ಅವರಿಂದ ತೆರವಾದ ಸ್ಥಾನಕ್ಕೆ ಪಾಂಡೆ ಅವರು ನೇಮಕಗೊಂಡಿದ್ದು, 29ನೇ ಸೇನಾ ಮುಖ್ಯಸ್ಥರಾಗಿ ಶನಿವಾರ ಅಧಿಕಾರ ವಹಿಸಿಕೊಂಡಿದ್ದರು.

ಮದುರೈ ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳ ಪ್ರಮಾಣವಚನ ಸಮಾರಂಭ

'ಚರಕ ಶಪಥ' ವಿವಾದ, ಡೀನ್ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಸರ್ಕಾರಿ ಸ್ವಾಮ್ಯದ ಪ್ರತಿಷ್ಠಿತ ಮದುರೈ ವೈದ್ಯಕೀಯ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆಯ 'ಹಿಪ್ರೊಕ್ರಾಟಿಕ್' ಹೆಸರಿನ ಪ್ರಮಾಣ ವಚನದ (ವೈದ್ಯ ವಿದ್ಯಾರ್ಥಿಗಳಿಗೆ ಬೋಧಿಸಲಾಗುವ ಪ್ರಮಾಣವಚನ) ಬದಲಿಗೆ ಸಂಸ್ಕೃತದ ಮಹರ್ಷಿ ಚರಕ ಶಪಥ ಬೋಧಿಸಲಾಗಿದೆ. ಇದು ವಿವಾದಕ್ಕೆ ಕಾರಣವಾಗಿದ್ದು, ನಿಯಮಗಳ ಉಲ್ಲಂಘನೆ ಮತ್ತು ಏಕಪಕ್ಷೀಯವಾಗಿ ಸಂಸ್ಕೃತದಲ್ಲಿ ಶಪಥ ಬೋಧಿಸಿದ ನಿರ್ಣಯದ ವಿರುದ್ಧ ರಾಜ್ಯ ಸರ್ಕಾರ ಇಲಾಖಾವಾರು ತನಿಖೆಗೆ ಆದೇಶಿಸಿದೆ.

ಅಲ್ಲದೆ, ಮದುರೈ ವೈದ್ಯಕೀಯ ಕಾಲೇಜಿನ ಡೀನ್ ಡಾ. ಎ. ರಥಿನಾವೇಲ್ ಅವರನ್ನು ಭಾನುವಾರ ವರ್ಗಾವಣೆ ಮಾಡಲಾಗಿದೆ.

> **ಏನಿದು ಮಹರ್ಷಿ ಚರಕ ಶಪಥ?**
> ಮಹರ್ಷಿ ಚರಕ ಶಪಥವು ಭಾರತದ ಆಯುರ್ವೇದ ವ್ಯವಸ್ಥೆಯ ಸಂಸ್ಕೃತದ ಪುಸ್ತಕದ ಭಾಗವಾಗಿದೆ. ಇತ್ತೀಚೆಗೆ ರಾಷ್ಟ್ರೀಯ ವೈದ್ಯಕೀಯ ಆಯೋಗವು ವೈದ್ಯಕೀಯ ವಿದ್ಯಾರ್ಥಿಗಳಿಗೆ 'ಹಿಪೊಕ್ರಾಟಿಕ್' ಪ್ರಮಾಣದ ಬದಲಿಗೆ ಮಹರ್ಷಿ ಚರಕ ಶಪಥ ಬೋಧಿಸಬೇಕು ಎಂದು ಶಿಫಾರಸು ಮಾಡಿತ್ತು. ಅಲ್ಲದೆ ಇದು ಕೇವಲ ವೈದ್ಯಕೀಯ ಕಾಲೇಜುಗಳ ಆಯ್ಕೆಗೆ ಬಿಟ್ಟಿದ್ದು, ಕಡ್ಡಾಯವಲ್ಲ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯಾ ಅವರು ಸಂಸತ್ತಿನಲ್ಲಿ ಹೇಳಿದ್ದರು.

ಈ ಸಂಬಂಧ ರಾಜ್ಯದ ಎಲ್ಲಾ ವೈದ್ಯಕೀಯ ಕಾಲೇಜುಗಳಿಗೆ ಡೀನ್‌ಗಳಿಗೆ ಪತ್ರ ಬರೆದಿರುವ ರಾಜ್ಯ ಸರ್ಕಾರ, 'ಹಿಪೊಕ್ರಾಟಿಕ್' ಪ್ರಮಾಣ ವಚನವನ್ನು ಮಾತ್ರವೇ ಬೋಧಿಸಬೇಕು ಎಂದು ಸೂಚನೆ ನೀಡಿದೆ.

ಪ್ರಕರಣದ ಹಿನ್ನೆಲೆ: ಮದುರೈ ವೈದ್ಯಕೀಯ ಕಾಲೇಜಿನಲ್ಲಿ ಶನಿವಾರ ಆಯೋಜನೆಗೊಂಡಿದ್ದ ಮೊದಲ ವರ್ಷದ ವೈದ್ಯ ವಿದ್ಯಾರ್ಥಿಗಳ ಪ್ರಮಾಣವಚನ ಕಾರ್ಯಕ್ರಮದಲ್ಲಿ ರಾಜ್ಯದ ವಿತ್ತ ಸಚಿವ ಪಿ.ಟಿ.ಆರ್. ಪಳನಿವೇಲ್ ತ್ಯಾಗರಾಜನ್ ಮತ್ತು ವಾಣಿಜ್ಯ ತೆರಿಗೆಗಳ ಸಚಿವ ಪಿ. ಮೂರ್ತಿ ಅವರು ಭಾಗವಹಿಸಿದ್ದರು.

ವೈದ್ಯ ವಿದ್ಯಾರ್ಥಿಗಳಿಗೆ 'ಹಿಪೊಕ್ರಾಟಿಕ್' ಪ್ರಮಾಣದ ಬದಲಿಗೆ ಸಂಸ್ಕೃತದ 'ಮಹರ್ಷಿ ಚರಕ ಶಪಥ' ಬೋಧಿಸಲಾಗಿತ್ತು. ಈ ವೇಳೆ ಇಬ್ಬರು ಸಚಿವರು ಮಹರ್ಷಿ ಚರಕ ಶಪಥಕ್ಕೆ ವಿರೋಧ ವ್ಯಕ್ತಪಡಿಸಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಆರೋಗ್ಯ ಸಚಿವ ಮಾ. ಸುಬ್ರಮಣಿಯನ್, 'ನೀಲಗಿರೀಸ್, ತಿರುವಳ್ಳೂರು ಸೇರಿದಂತೆ ಹಲವು ಕಾಲೇಜುಗಳಲ್ಲಿ ಮೊದಲ ವರ್ಷದ ವೈದ್ಯ ವಿದ್ಯಾರ್ಥಿಗಳು 'ಹಿಪೊಕ್ರಾಟಿಕ್' ಪ್ರಮಾಣವಚನ ಸ್ವೀಕರಿಸುವ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೇನೆ. ಇದು ತಮಿಳುನಾಡಿನಲ್ಲಿ ನಡೆದುಬಂದ ಪರಿಪಾಠ. ಈ ಸಂಪ್ರದಾಯವನ್ನು ಬದಲಾವಣೆ ಮಾಡುವ ಅವಕಾಶ ನೀಡಿದವರು ಯಾರು? ಹೇಗೆ ಉಚ್ಚಾರಣೆ ಮಾಡಬೇಕೆಂಬುದು ಸಹ ಗೊತ್ತಿಲ್ಲದ ಭಾಷೆಯನ್ನು ವಿದ್ಯಾರ್ಥಿಗಳು ಬಳಸಬೇಕೆಂದಾದರೆ ಹೇಗೆ?' ಎಂದು ಪ್ರಶ್ನಿಸಿದ್ದಾರೆ. ರಾಜ್ಯದಲ್ಲಿ ಹಿಂದಿ ಅಥವಾ ಸಂಸ್ಕೃತ ರೀತಿಯ ಭಾಷಾ ಹೇರಿಕೆಯ ಯತ್ನವನ್ನು ರಾಜ್ಯ ಸರ್ಕಾರ ವಿರೋಧಿಸುತ್ತದೆ ಎಂದು ಹೇಳಿದ್ದಾರೆ.

ಕರ್ನಾಟಕದ ಗಡಿ ಭಾಗಗಳಲ್ಲಿ ಮರಾಠಿಗರು ಇರುವ ಕನ್ನಡ ನೆಲ

'ಮಹಾರಾಷ್ಟ್ರಕ್ಕೆ ಸೇರ್ಪಡೆ ಹೋರಾಟಕ್ಕೆ ಬೆಂಬಲ'

ಪುಣೆ(ಪಿಟಿಐ): 'ಕರ್ನಾಟಕದ ಗಡಿಭಾಗಗಳ ಮರಾಠಿ ಭಾಷಿಕರು ಇರುವ ಸ್ಥಳಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಿಕೊಳ್ಳುವ ಹೋರಾಟಕ್ಕೆ ತಮ್ಮ ಬೆಂಬಲವು ಮುಂದುವರಿಯಲಿದೆ' ಎಂದು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಹೇಳಿದ್ದಾರೆ.

ಮಹಾರಾಷ್ಟ್ರದ ಸಂಸ್ಥಾಪನಾ ದಿನದ ಅಂಗವಾಗಿ ಭಾನುವಾರ ಪುಣೆಯಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅವರು, 'ಮಹಾರಾಷ್ಟ್ರ ಸಂಸ್ಥಾಪನೆಯ 62ನೇ ವರ್ಷದ ಸಂಭ್ರಮ ಆಚರಿಸುತ್ತಿದ್ದೇವೆ. ಆದರೆ ಮರಾಠಿ ಮಾತನಾಡುವವರು ಇರುವ ಕರ್ನಾಟಕದ ಬೀದರ್, ಭಾಲ್ಕಿ, ಬೆಳಗಾವಿ, ಕಾರವಾರ, ನಿಪ್ಪಾಣಿ ಮತ್ತು ಇತರೆ ಜಿಲ್ಲೆಗಳ ಗ್ರಾಮಗಳನ್ನು ರಾಜ್ಯದ ಜೊತೆ ವಿಲೀನಗೊಳಿಸಲಾಗದಿರುವುದಕ್ಕೆ ಪಶ್ಚಾತ್ತಾಪವಿದೆ' ಎಂದು ಹೇಳಿದರು.

'ಮಹಾರಾಷ್ಟ್ರದ ಜನತೆ ಮತ್ತು ಸರ್ಕಾರವು ಮಹಾರಾಷ್ಟ್ರಕ್ಕೆ ಸೇರಬೇಕೆಂಬ ಕರ್ನಾಟಕದ ಗಡಿ ಭಾಗಗಳ ಜನರ ಹೋರಾಟದ ಪರವಾಗಿರಲಿವೆ. ಕರ್ನಾಟಕದಲ್ಲಿರುವ ಗ್ರಾಮಗಳು ಮಹಾರಾಷ್ಟ್ರದ ಭಾಗವಾಗುವವರೆಗೆ ಅವರಿಗೆ ನಾವು ಸಹಕಾರ ನೀಡುತ್ತೇವೆ' ಎಂದು ಹೇಳಿದ್ದಾರೆ.

ಕಳೆದ ಹಲವು ದಿನಗಳಿಂದ ಮರಾಠಿ ಭಾಷಿಕರು ಹೆಚ್ಚಾಗಿರುವ ಬೆಳಗಾವಿ, ಕಾರವಾರ ಮತ್ತು ನಿಪ್ಪಾಣಿ ಸೇರಿದಂತೆ ಕರ್ನಾಟಕದ ಹಲವು ಗ್ರಾಮಗಳು ತನ್ನದು ಎಂದು ಮಹಾರಾಷ್ಟ್ರ ಪ್ರತಿಪಾದಿಸುತ್ತಿದೆ. ಈ ಕುರಿತ ವ್ಯಾಜ್ಯವು ಸುಪ್ರೀಂ ಕೋರ್ಟ್‌ನಲ್ಲಿದೆ.

> **'ಪವಾರ್ ಮಿದುಳು ಹಿಮ್ಮುಖ ಚಲಿಸುತ್ತಿದೆ'**
> ಬೆಂಗಳೂರು: 'ಮಹಾರಾಷ್ಟ್ರ ಮುಖ್ಯಮಂತ್ರಿ ಅಜಿತ್ ಪವಾರ್ ಮಿದುಳು ಹಿಮ್ಮುಖವಾಗಿ ಚಲಿಸುತ್ತಿದೆ. ಅದಕ್ಕಾಗಿಯೇ ದೇಶಕ್ಕೆ ಸ್ವಾತಂತ್ರ್ಯ ದೊರಕಿ 75 ವರ್ಷಗಳಾದರೂ ಅವರು ಗಡಿಗಳ ಬಗ್ಗೆಯೇ ಮಾತನಾಡುತ್ತಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.
> ಕರ್ನಾಟಕ ಮತ್ತು ಕನ್ನಡಿಗರ ಕುರಿತು ಪವಾರ್ ಕೀಳು ಅಭಿರುಚಿಯ ಹೇಳಿಕೆ ನೀಡಿರುವುದಕ್ಕೆ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, 'ಕರ್ನಾಟಕದ ಗಡಿ ಭಾಗದಲ್ಲಿರುವ ಮರಾಠಿ ಭಾಷಿಕ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಿಕೊಳ್ಳಲು ಅಲ್ಲಿನ ಸರ್ಕಾರದ ಬೆಂಬಲವಿದೆ ಎಂದು ಅವರು ಹೇಳಿದ್ದಾರೆ. ಮಹಾರಾಷ್ಟ್ರದಲ್ಲಿ ಕನ್ನಡ ಭಾಷಿಕರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳೂ ಇವೆ ಎಂಬುದನ್ನು ಅವರು ಮರೆಯಬಾರದು' ಎಂದಿದ್ದಾರೆ.

ಕಾಮಗಾರಿ ಅಪೂರ್ಣ: ವಾಹನ ಸವಾರರಿಗೆ ತೊಂದರೆ

ಕೆ.ಆರ್.ಪುರ: ಬಿದರಹಳ್ಳಿ ಹೋಬಳಿಯ ಕೆ.ದೊಮ್ಮಸಂದ್ರದ ಎಂಬತ್ತು ಅಡಿ ಮುಖ್ಯರಸ್ತೆ ವಿಸ್ತರಣೆ ಹಾಗೂ ರಾಜಕಾಲುವೆಗೆ ಬ್ರಿಡ್ಜ್ ನಿರ್ಮಿಸಲು ಅಗೆದ ರಸ್ತೆ ಹಾಗೇ ಬಿಡಲಾಗಿದ್ದು, ಇಕ್ಕಟ್ಟಾದ ರಸ್ತೆಯಲ್ಲಿ ವಾಹನ ಸವಾರರು ಸಂಚರಿಸುವ ಸ್ಥಿತಿ ಇದ್ದು, ಅಪಘಾತಗಳಿಗೂ ಆಸ್ಪದವಾಗುತ್ತಿದೆ.

ಮೇಡಹಳ್ಳಿಯಿಂದ ಬೆಳತೂರು ಕಡೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಇದಾಗಿದೆ. ನಿತ್ಯ ಸಾವಿರಾರು ವಾಹನಗಳು ಸಂಚರಿಸಲಿದ್ದು, ಕೆ.ದೊಮ್ಮಸಂದ್ರ ಬಳಿ ಮೂರು ತಿಂಗಳ ಹಿಂದೆ ಎಂಬತ್ತು ಅಡಿ ರಸ್ತೆಯನ್ನು ಅಗೆದಿದ್ದು, ಹಾಗೆ ಬಿಡಲಾಗಿದೆ.

'ಮೂರು ತಿಂಗಳ ಹಿಂದೆ ಕಾಮಗಾರಿ ಆರಂಭಿಸಲಾಗಿತ್ತು. ರಸ್ತೆಯನ್ನು ಅಗೆದು ಬಿಟ್ಟಿರುವುದರಿಂದ ರಸ್ತೆ ಪಕ್ಕದಲ್ಲಿ ದೊಡ್ಡ ಕಂದಕ ಮೂಡಿದೆ. ಮಕ್ಕಳು, ಹಿರಿಯರಿಗೆ ತೊಂದರೆ ಆಗುತ್ತಿದೆ. ಸೇತುವೆ ನಿರ್ಮಿಸಲು ಕಟ್ಟಿರುವ ಕಂಬಿಗಳು ಹಾಗೆ ಬಿಡಲಾಗಿದೆ. ಎಚ್ಚರ ತಪ್ಪಿದರೆ ಅನಾಹುತ ಕಟ್ಟಿಟ್ಟ ಬುತ್ತಿ ಎಂಬಂತಹ ಸ್ಥಿತಿ ಇದೆ' ಎಂದು ಸ್ಥಳೀಯ ನಿವಾಸಿ ಬೆಳತೂರು ಪರಮೇಶ್ ದೂರಿದರು.

'ಪಕ್ಕದಲ್ಲಿಯೇ ಕೇಬಲ್ ಅಳವಡಿಕೆ ಕಾಮಗಾರಿಯೂ ನಡೆಯುತ್ತಿದೆ. ಸುತ್ತಮುತ್ತಲಿನ ಪ್ರದೇಶಗಳಲ್ಲಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಇಲ್ಲಿಯವರೆಗೆ ಮೂರು ಬಾರಿ ಅಪಘಾತ ಸಂಭವಿಸಿದೆ. ಈ ಬಗ್ಗೆ ಎಚ್ಚೆತ್ತುಕೊಳ್ಳದೆ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ' ಎಂದರು.



ರಾಜಕಾಲುವೆಗೆ ಬ್ರಿಡ್ಜ್ ನಿರ್ಮಾಣ ಮಾಡಲು ಅಗೆದ ರಸ್ತೆ

ಸೇಂಟ್ ಮೇರಿಸ್ ದ್ವೀಪಕ್ಕೆ ದಿಗ್ಬಂಧನ

ಪ್ರಜಾವಾಣಿ ವಾರ್ತೆ

ಉಡುಪಿ: ಸೇಂಟ್ ಮೇರಿಸ್ ದ್ವೀಪ ಹಾಗೂ ಮಲ್ಪೆ ಬೀಚ್‌ನಲ್ಲಿ ಈಚೆಗೆ 6 ಪ್ರವಾಸಿಗರು ಮೃತಪಟ್ಟ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ದ್ವೀಪದಲ್ಲಿ ಗರಿಷ್ಠ ಸುರಕ್ಷತಾ ಕ್ರಮ ಕೈಗೊಂಡಿದ್ದು, ಪ್ರವಾಸಿಗರು ದ್ವೀಪದಲ್ಲಿ ಸಮುದ್ರಕ್ಕಿಳಿಯದಂತೆ ತೀರದ ಉದ್ದಕ್ಕೂ ತಡೆಬೇಲಿ ಹಾಕಿಸಿದೆ.

ಅಲ್ಲಲ್ಲಿ ಎಚ್ಚರಿಕೆಯ ಫಲಕ ಅಳವಡಿಸಲಾಗಿದೆ. 8 ಮಂದಿ ಲೈಫ್ ಗಾರ್ಡ್ ಹಾಗೂ 6 ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿದೆ.

ಮಳೆಗಾಲ ಆರಂಭವಾದ ಕೂಡಲೇ ದ್ವೀಪಕ್ಕೆ ಪ್ರವಾಸಿಗರ ನಿರ್ಬಂಧ ಇರುತ್ತದೆ. ಮಳೆಗಾಲ ಮುಗಿಯುವಷ್ಟರಲ್ಲಿ ದ್ವೀಪದಲ್ಲಿ ಸೆಲ್ಫಿ ಸ್ಟಾಂಡ್‌ಗಳನ್ನು ಹಾಕಲಾಗುವುದು ಎಂದು ಮಲ್ಪೆ ಬೀಚ್ ಕಾರ್ಯನಿರ್ವಾಹಕ ಅಧಿಕಾರಿ ಸುದೇಶ್ ಶೆಟ್ಟಿ ಮಾಹಿತಿ ನೀಡಿದ್ದಾರೆ.

10 ದಿನಗಳಲ್ಲಿ 6 ಮಂದಿ ಸಾವು: ಏ.4ರಂದು ಬೆಂಗಳೂರಿನ ಜಾಲಹಳ್ಳಿಯ ಸಾಮ್ರಾಟ್ ಮಜುಂದಾರ್ (28), ಏ.7ರಂದು ಕೇರಳದ ಕೊಟ್ಟಯಂನ ಎಂಜಿನಿಯರಿಂಗ್ ಕಾಲೇಜೊಂದರ ಮೂವರು, ಏ.14ರಂದು ಬೆಂಗಳೂರಿನ ಜಿಕೆವಿಕೆ ಕೃಷಿ ವಿಶ್ವವಿದ್ಯಾಲಯದ ಸತೀಶ್ ಎಂ. ನಂದಿಹಳ್ಳಿ ಹಾಗೂ ಸತೀಶ್ ಎಸ್.ಕಲ್ಯಾಣಶೆಟ್ಟಿ ಎಂಬುವರು ಅಲೆಗಳ ಸೆಳೆತಕ್ಕೆ ಸಿಲುಕಿ ಮೃತಪಟ್ಟಿದ್ದರು.

ಸಂಕ್ಷಿಪ್ತ ಸುದ್ದಿ

ಜಮ್ಮು–ಕಾಶ್ಮೀರ: ಇಬ್ಬರು ಹೈಬ್ರಿಡ್ ಉಗ್ರರ ಸೆರೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್ ಮತ್ತು ಶ್ರೀನಗರ ಜಿಲ್ಲೆಗಳಲ್ಲಿ ಲಷ್ಕರ್–ಎ–ತೈಯಬಾ (ಎಲ್‌ಇಟಿ) ಸಂಘಟನೆಗೆ ಸೇರಿದ ಇಬ್ಬರು ಹೈಬ್ರಿಡ್ ಭಯೋತ್ಪಾದಕರನ್ನು ಭಾನುವಾರ ಭದ್ರತಾ ದಳ ಬಂಧಿಸಿದೆ ಎಂದು ಪೊಲೀಸರು ಹೇಳಿದ್ದಾರೆ.

'ಗಡಿಹಾಮ್ ಕುಲ್ಗಮ್ ಪ್ರದೇಶಕ್ಕೆ ಸೇರಿದ ನಿಷೇಧಿತ ಭಯೋತ್ಪಾದಕ ಸಂಘಟನೆ ಎಲ್‌ಇಟಿಯ ಹೈಬ್ರಿಡ್ ಭಯೋತ್ಪಾದಕ ಯಾಮಿನ್ ಯೂಸುಫ್ ಭಟ್‌ನನ್ನು ಕುಲ್ಗಾಮ್ ಪೊಲೀಸ್ ಮತ್ತು ಸೇನೆಯ ತಂಡ ಬಂಧಿಸಿದೆ' ಎಂದು ಕಾಶ್ಮೀರ ವಲಯದ ಪೊಲೀಸ್ ತನ್ನ ಟ್ವಿಟರ್‌ನಲ್ಲಿ ಹೇಳಿದೆ.

ಉತ್ತರಪ್ರದೇಶ: 53,942 ಧ್ವನಿವರ್ಧಕಗಳ ತೆರವು

ಲಖನೌ(ಪಿಟಿಐ): ಉತ್ತರ ಪ್ರದೇಶ ಸರ್ಕಾರ ನೀಡಿರುವ ಆದೇಶದ ಮೇರೆಗೆ, ಧಾರ್ಮಿಕ ಸ್ಥಳಗಳಲ್ಲಿ ಅನಧಿಕೃತವಾಗಿ ಅಳವಡಿಸಲಾಗಿದ್ದ 53,942 ಧ್ವನಿವರ್ಧಕಗಳನ್ನು ತೆರವುಗೊಳಿಸಲಾಗಿದೆ ಎಂದು ಎಡಿಜಿಪಿ ಪ್ರಶಾಂತ್ ಕುಮಾರ್ ತಿಳಿಸಿದರು.

ಧಾರ್ಮಿಕ ಸ್ಥಳಗಳಲ್ಲಿ ಅಕ್ರಮವಾಗಿ ಅಳವಡಿಸಿರುವ ಧ್ವನಿವರ್ಧಕಗಳನ್ನು ತೆರವುಗೊಳಿಸುವಂತೆ ಉತ್ತರ ಪ್ರದೇಶ ಸರ್ಕಾರ ಏಪ್ರಿಲ್ 24ರಂದು ಆದೇಶ ಹೊರಡಿಸಿತ್ತು.

ಕೌಟುಂಬಿಕ ದೌರ್ಜನ್ಯ ಪ್ರಕರಣ: ವರದಿ ಸಲ್ಲಿಕೆಗೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ಮಹಿಳೆಯರನ್ನು ಹಿಂಸಾಚಾರದಿಂದ ರಕ್ಷಿಸುವ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ–2005ರ ಅಡಿಯಲ್ಲಿ ಇಲ್ಲಿಯವರೆಗೆ ದಾಖಲಾದ ಹಾಗೂ ಪರಿಹಾರ ಕಂಡ ಪ್ರಕರಣಗಳ ಸಂಖ್ಯೆಗಳ ಬಗ್ಗೆ ವಿವರ ನೀಡುವಂತೆ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರಕ್ಕೆ (ನಾಲ್ಸಾ) ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಯು.ಯು. ಲಲಿತ್, ಎಸ್. ರವೀಂದ್ರ ಭಟ್ ಮತ್ತು ಪಿ.ಎಸ್. ನರಸಿಂಹ ಅವರನ್ನೊಳಗೊಂಡ ನ್ಯಾಯಪೀಠವು, 'ವಿ ದಿ ವುಮೆನ್ ಆಫ್ ಇಂಡಿಯಾ' ಸಂಘಟನೆಯು ಸಲ್ಲಿಸಿದ ಮನವಿಯ ವಿಚಾರಣೆಯನ್ನು ನಡೆಸುತ್ತಿದೆ.

ನ್ಯಾಯಾಲಯವು ಜುಲೈ 20ಕ್ಕೆ ವಿಚಾರಣೆಯನ್ನು ಮುಂದೂಡಿದೆ.

ದ್ವೇಷ ಭಾಷಣ: ಕೇರಳದ ಮಾಜಿ ಶಾಸಕನ ಬಂಧನ, ಬಿಡುಗಡೆ

ತಿರುವನಂತಪುರ (ಪಿಟಿಐ): ಕೇರಳದ ಮಾಜಿ ಶಾಸಕ ಪಿ.ಸಿ.ಜಾರ್ಜ್ ಅವರನ್ನು ಮುಸ್ಲಿಮರ ವಿರುದ್ಧ ದ್ವೇಷ ಭಾಷಣ ಮಾಡಿದ ಆರೋಪದಲ್ಲಿ ಪೊಲೀಸರು ಭಾನುವಾರ ಬಂಧಿಸಿದ್ದರು. ಬಳಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ತಿರುವನಂತಪುರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಅನಂತಪುರಿ ಹಿಂದೂ ಮಹಾ ಸಮ್ಮೇಳನದಲ್ಲಿ ಮಾತನಾಡಿದ ಜಾರ್ಜ್ ಅವರು, ಮುಸ್ಲಿಮರು ನಡೆಸುವ ರೆಸ್ಟೋರೆಂಟ್‌ಗಳಿಗೆ ತೆರಳದಂತೆ ಮುಸ್ಲಿಮೇತರರಿಗೆ ಕರೆ ನೀಡಿದ್ದರು.

'ಮುಸ್ಲಿಮರು ನಡೆಸುತ್ತಿರುವ ರೆಸ್ಟೋರೆಂಟ್‌ಗಳಲ್ಲಿ ನಿರ್ವೀರ್ಯಗೊಳಿಸುವಂತಹ ಅಂಶಗಳನ್ನು ಒಳಗೊಂಡಿರುವ ಚಹಾ ಮಾರಾಟ ಮಾಡಲಾಗುತ್ತಿದೆ. ಅದರಿಂದ ಜನರ ಸಂತಾನವೃದ್ಧಿ ಸಾಮರ್ಥ್ಯವನ್ನು ಕುಂದಿಸುವ ಮೂಲಕ ದೇಶದಲ್ಲಿ ನಿಯಂತ್ರಣ ಸಾಧಿಸುವ ಪ್ರಯತ್ನ ನಡೆಸಲಾಗಿದೆ' ಎಂದೂ ಹೇಳಿದ್ದರು.

ಕಾಂಗ್ರೆಸ್‌ನ ಮಾಜಿ ಮುಖಂಡ ಜಾರ್ಜ್ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತವಾಗಿದ್ದು, ಅವರ ವಿರುದ್ಧ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಕ್ರಮಕೈಗೊಂಡಿದ್ದಾರೆ. ಜಾರ್ಜ್ ಅವರ ಹೇಳಿಕೆಯನ್ನು ಆಡಳಿತಾರೂಢ ಎಲ್‌ಡಿಎಫ್ ಮತ್ತು ವಿರೋಧ ಪಕ್ಷ ಕಾಂಗ್ರೆಸ್ ಖಂಡಿಸಿವೆ. ಜಾರ್ಜ್ ಅವರನ್ನು ಕೋಟಯಂ ಜಿಲ್ಲೆಯಲ್ಲಿರುವ ಅವರ ನಿವಾಸದಿಂದ ಪೊಲೀಸರು ತಿರುವನಂತಪುರಕ್ಕೆ ಕರೆ ತಂದಾಗ ಬಿಜೆಪಿ ಕಾರ್ಯಕರ್ತರು ಘೋಷಣೆ ಕೂಗಿ ಸ್ವಾಗತಿಸುವ ಮೂಲಕ ಅವರಿಗೆ ಬೆಂಬಲ ಸೂಚಿಸಿದರು.

545 ಪಿಎಸ್ಐ ನೇಮಕಾತಿ ಅಕ್ರಮ • ಪೊಲೀಸರು ಸೇರಿ 12 ಅಭ್ಯರ್ಥಿಗಳ ಬಂಧನ • ಒಎಂಆರ್ ತಿದ್ದಲು ಹಣ

ರಕ್ತಚಂದನ ದೋಚಿದ್ದವನಿಗೆ 27ನೇ ರ್‍ಯಾಂಕ್

• ಸಂತೋಷ ಜಿಗಳಿಕೊಪ್ಪ

ಮುಖ್ಯಾಂಶಗಳು

- ₹ 13 ಲಕ್ಷ ಮೌಲ್ಯದ ರಕ್ತಚಂದನ ದೋಚಿದ್ದ
- ಭದ್ರತಾ ವಿಭಾಗದ ಕಾನ್‌ಸ್ಟೆಬಲ್‌ಗೆ 3ನೇ ರ್‍ಯಾಂಕ್
- ಲಕ್ಷಾಂತರ ರೂಪಾಯಿ ನೀಡಿ ಅಕ್ರಮ

ಬೆಂಗಳೂರು: ಹೊಸಕೋಟೆ ಬಳಿ 'ರಕ್ತ ಚಂದನ' ದೋಚಿದ್ದ ಪ್ರಕರಣದಲ್ಲಿ ಸಿಕ್ಕಿಬಿದ್ದು ಅಮಾನತಾಗಿದ್ದ ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯ ಹೆಡ್ ಕಾನ್‌ಸ್ಟೆಬಲ್ ಮಮತೇಶ್ ಗೌಡ, 545 ಪಿಎಸ್ಐ ನೇಮಕಾತಿ ಲಿಖಿತ ಪರೀಕ್ಷೆಯಲ್ಲಿ ಅಕ್ರಮ ಎಸಗಿ 27ನೇ ರ್‍ಯಾಂಕ್ (ಸೇವಾನಿರತ ಅಭ್ಯರ್ಥಿ) ಪಡೆದಿರುವುದನ್ನು ಸಿಐಡಿ ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ಒಎಂಆರ್ ಪ್ರತಿ ತಿದ್ದಿ ಹಾಗೂ ಬ್ಲೂಟೂತ್ ಬಳಸಿ ಅಕ್ರಮ ಎಸಗಿದ್ದ ಆರೋಪದಡಿ 22 ಅಭ್ಯರ್ಥಿಗಳ ವಿರುದ್ಧ ನಗರದ ಹೈಗ್ರೌಂಡ್ಸ್ ಠಾಣೆಯಲ್ಲಿ ಶನಿವಾರ ಪ್ರಕರಣ ದಾಖಲಾಗಿದೆ. ಆರೋಪಿಗಳಾದ ಹೆಡ್ ಕಾನ್‌ಸ್ಟೆಬಲ್ ಮಮತೇಶ್ ಗೌಡ, ಕಾನ್‌ಸ್ಟೆಬಲ್‌ಗಳಾದ ಗಜೇಂದ್ರ, ಯಶವಂತ ದೀಪ, ಸಾಮಾನ್ಯ ಅಭ್ಯರ್ಥಿಗಳಾದ ಮಧು, ರಘುವೀರ್, ನಾಗರಾಜ್, ಮೋಹನ್‌ಕುಮಾರ್, ನಾರಾಯಣಸ್ವಾಮಿ, ಪವನ್‌ಕುಮಾರ್ ಸೇರಿದಂತೆ 12 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಇನ್ನುಳಿದ 10 ಅಭ್ಯರ್ಥಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

'ಪಿಎಸ್ಐ ನೇಮಕಾತಿ ಅಕ್ರಮ ಸಂಬಂಧ ಕಲಬುರಗಿ ಚೌಕ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ತನಿಖೆಯನ್ನು ಸಿಐಡಿ ಅಧಿಕಾರಿಗಳು ನಡೆಸುತ್ತಿದ್ದಾರೆ. ಹೊಸದಾಗಿ ದಾಖಲಾಗಿರುವ ಪ್ರಕರಣದ ತನಿಖೆಯನ್ನೂ ಸಿಐಡಿ ಅಧಿಕಾರಿಗಳು ಮುಂದುವರಿಸಲಿದ್ದಾರೆ. ಪ್ರಕರಣದ ತನಿಖೆಯನ್ನು ಹಸ್ತಾಂತರಿಸುವ ಸಂಬಂಧ ಪ್ರಕ್ರಿಯೆ ಚಾಲ್ತಿಯಲ್ಲಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಲಕ್ಷಾಂತರ ರೂಪಾಯಿ ನೀಡಿರುವ ಮಮತೇಶ್: 'ಬಂಧಿತ ಹೆಡ್ ಕಾನ್‌ಸ್ಟೆಬಲ್ ಮಮತೇಶ್ ಗೌಡ, ಬೆಂಗಳೂರು ಸಿಸಿಬಿ ವಿಭಾಗದಲ್ಲಿ ಹೆಡ್ ಕಾನ್‌ಸ್ಟೆಬಲ್ ಆಗಿ ಕೆಲಸ ಮಾಡುತ್ತಿದ್ದ. 2021 ಡಿಸೆಂಬರ್‌ನಲ್ಲಿ ಆತನನ್ನು ಮಹದೇವಪುರ ಠಾಣೆಗೆ ವರ್ಗಾಯಿಸಲಾಗಿತ್ತು. ಅದಾದ ನಂತರವೂ, ಸಿಸಿಬಿ ವಿಭಾಗದಲ್ಲೇ ಕೆಲಸ ಮಾಡುತ್ತಿರುವುದಾಗಿ ಹೇಳಿಕೊಂಡು ಓಡಾಡುತ್ತಿದ್ದ' ಎಂದು ಸಿಐಡಿ ಮೂಲಗಳು ಹೇಳಿವೆ.

'ಆಂಧ್ರಪ್ರದೇಶದಿಂದ ರಕ್ತ ಚಂದನದ ತುಂಡುಗಳನ್ನು ನಗರಕ್ಕೆ ಅಕ್ರಮವಾಗಿ ಸಾಗಿಸುತ್ತಿದ್ದ ಮಾಹಿತಿ ಮಮತೇಶ್‌ಗೆ ಗೊತ್ತಾಗಿತ್ತು. ಸಹೋದ್ಯೋಗಿ ಮಂಜುನಾಥ್ ಜೊತೆ ಸೇರಿ ರಕ್ತಚಂದನ ಸುಲಿಗೆ ಮಾಡಲು ಸಂಚು ರೂಪಿಸಿದ್ದ. 2021ರ ಡಿಸೆಂಬರ್ 15ರಂದು ಹೊಸಕೋಟೆ ಸಂತೇಗೇಟ್ ಬಳಿ ವಾಹನ ಅಡ್ಡಗಟ್ಟಿ, ಚಾಲಕನಿಗೆ ಕೈಕೋಳ ತೋರಿಸಿದ್ದ. ನಂತರ, ₹ 13 ಲಕ್ಷ ಮೌಲ್ಯದ ರಕ್ತ ಚಂದನದ ತುಂಡುಗಳನ್ನು ಸುಲಿಗೆ ಮಾಡಿ ಪರಾರಿಯಾಗಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಹೊಸಕೋಟೆ ಪೊಲೀಸರು ಎಫ್ಐಆರ್ ದಾಖಲಿಸಿಕೊಂಡು, ಕಮಿಷನರ್ ಕಮಲ್ ಪಂತ್ ಅವರಿಗೆ ವರದಿ ನೀಡಿದ್ದರು. ಅದರನ್ವಯ ಮಮತೇಶ್ ಗೌಡ ಹಾಗೂ ಮಂಜುನಾಥ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿತ್ತು.'

'ಪಿಎಸ್ಐ ಹುದ್ದೆಗೆ ಅರ್ಜಿ ಸಲ್ಲಿಸಿದ್ದ ಮಮತೇಶ್, ಬೆಂಗಳೂರಿನ ಕೇಂದ್ರವೊಂದರಲ್ಲಿ ಪರೀಕ್ಷೆ ಬರೆದು 27ನೇ ರ್‍ಯಾಂಕ್ ಪಡೆದಿದ್ದ. ಆಯ್ಕೆ ಪಟ್ಟಿಯಲ್ಲಿದ್ದ ಅಭ್ಯರ್ಥಿಗಳನ್ನು ವಿಚಾರಣೆಗೆ ಕರೆಸಲಾಗಿತ್ತು. ಮಮತೇಶ್ ಗೌಡನ ಒಎಂಆರ್ ಕಾರ್ಬನ್ ಪ್ರತಿ ಪರಿಶೀಲಿಸಿದಾಗ ಸಾಕಷ್ಟು ವ್ಯತ್ಯಾಸಗಳು ಕಂಡುಬಂದಿವೆ. ಪತ್ರಿಕೆ -1ಕ್ಕೆ 22 ಅಂಕ ಹಾಗೂ ಪತ್ರಿಕೆ -2ಕ್ಕೆ 103.5 ಅಂಕ ಸೇರಿ ಒಟ್ಟು 125.5 ಅಂಕ ಪಡೆದು ಆಯ್ಕೆಯಾಗಿದ್ದ. ಅಕ್ರಮ ಎಸಗಲು ಅನುಕೂಲ ಕಲ್ಪಿಸಲು ಏಜೆಂಟರೊಬ್ಬರಿಗೆ ಲಕ್ಷಾಂತರ ರೂಪಾಯಿ ನೀಡಿದ್ದನೆಂಬ ಮಾಹಿತಿ ಇದೆ' ಎಂದೂ ಸಿಐಡಿ ಮೂಲಗಳು ತಿಳಿಸಿವೆ.

ಭದ್ರತಾ ವಿಭಾಗದ ಕಾನ್‌ಸ್ಟೆಬಲ್‌ಗೆ 3ನೇ ರ್‍ಯಾಂಕ್: 'ಪೊಲೀಸ್ ಭದ್ರತಾ ವಿಭಾಗದಲ್ಲಿ ಕಾನ್‌ಸ್ಟೆಬಲ್ ಆಗಿದ್ದ ಯಶವಂತ ದೀಪ, ಸೇವಾನಿರತ ಅಭ್ಯರ್ಥಿ ಮೀಸಲಾತಿಯಡಿ 3ನೇ ರ್‍ಯಾಂಕ್ ಪಡೆದು ಪಿಎಸ್ಐ ಹುದ್ದೆಗೆ ಆಯ್ಕೆಯಾಗಿದ್ದ. ಈತನ ಒಎಂಆರ್ ಕಾರ್ಬನ್ ಪ್ರತಿ ಪರಿಶೀಲಿಸಿದಾಗ, ಅಕ್ರಮ ಎಸಗಿದ್ದು ಗೊತ್ತಾಗಿದೆ. ಈತನನ್ನೂ ಬಂಧಿಸಿ, ಕಸ್ಟಡಿಗೆ ಪಡೆಯಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಒಎಂಆರ್ ಪ್ರತಿ ತಿದ್ದುಪಡಿ ಮಾಡಿರುವ ಯಶವಂತ, ಪತ್ರಿಕೆ 2ರಲ್ಲಿ (ಸಾಮಾನ್ಯ ಅಧ್ಯಯನ) 118.125 ಅಂಕ ಪಡೆದು ಪಿಎಸ್ಐ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಹೆಸರು ಗಿಟ್ಟಿಸಿದ್ದ' ಎಂದೂ ತಿಳಿಸಿದರು.

ಸಿಐಡಿ ವಿಚಾರಣೆಗೆ ಬಂದಾಗ ವಶಕ್ಕೆ

12 ಅಭ್ಯರ್ಥಿಗಳು ವಿಚಾರಣೆಗೆಂದು ಕಾರ್ಲ್‌ಟನ್ ಕಟ್ಟಡದಲ್ಲಿರುವ ಸಿಐಡಿ ಕಚೇರಿಗೆ ಶನಿವಾರ ಬಂದಿದ್ದರು. ಒಎಂಆರ್ ಪ್ರತಿಯನ್ನು ವ್ಯತ್ಯಾಸ ಕಂಡುಬರುತ್ತಿದ್ದಂತೆ ಸಿಐಡಿ ಅಧಿಕಾರಿಗಳೇ ಅವರನ್ನು ವಶಕ್ಕೆ ಪಡೆದು ಹೈಗ್ರೌಂಡ್ಸ್ ಠಾಣೆಗೆ ಒಪ್ಪಿಸಿದ್ದರೆಂಬುದು ಗೊತ್ತಾಗಿದೆ.

ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಹೆಸರಿದ್ದ 545 ಅಭ್ಯರ್ಥಿಗಳ ಪೈಕಿ, ಸುಮಾರು 400 ಅಭ್ಯರ್ಥಿಗಳು ಮಾತ್ರ ವಿಚಾರಣೆಗೆ ಹಾಜರಾಗಿದ್ದಾರೆ. ಗೈರಾಗಿರುವ ಅಭ್ಯರ್ಥಿಗಳಿಗೂ ನೋಟಿಸ್ ನೀಡಿರುವ ಸಿಐಡಿ ಅಧಿಕಾರಿಗಳು, 'ತ್ವರಿತವಾಗಿ ವಿಚಾರಣೆಗೆ ಬರಬೇಕು. ಇಲ್ಲದಿದ್ದರೆ, ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

ಕಾನ್‌ಸ್ಟೆಬಲ್ ಗಜೇಂದ್ರನಿಗೆ 'ಮೊದಲ ರ್‍ಯಾಂಕ್'

'ಬಂಧಿತ ಗಜೇಂದ್ರ, ಅಕ್ರಮ ಎಸಗಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಮೊದಲ ರ್‍ಯಾಂಕ್ ಪಡೆದಿದ್ದಾನೆ. ಈತ, ಸೈಬರ್ ಠಾಣೆಯೊಂದರಲ್ಲಿ ಕಾನ್‌ಸ್ಟೆಬಲ್ ಆಗಿ ಕೆಲಸ ಮಾಡುತ್ತಿದ್ದ' ಎಂದು ಸಿಐಡಿ ಮೂಲಗಳು ಹೇಳಿವೆ.

'ಸೇವಾನಿರತ ಅಭ್ಯರ್ಥಿ ಮೀಸಲಾತಿಯಡಿ ಗಜೇಂದ್ರ ಅರ್ಜಿ ಸಲ್ಲಿಸಿದ್ದ. ಪರೀಕ್ಷಾ ಕೇಂದ್ರವೊಂದರಲ್ಲಿ ಪರೀಕ್ಷೆ ಬರೆದಿದ್ದ ಈತ, ಪತ್ರಿಕೆ – 2ರ (ಸಾಮಾನ್ಯ ಅಧ್ಯಯನ) ಒಎಂಆರ್ ಪ್ರತಿ ತಿದ್ದುಪಡಿ ಮಾಡಿ 126 ಅಂಕ ಗಳಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಆದರೆ, ಪ್ರತಿ ತಿದ್ದುಪಡಿ ಮಾಡಿದ್ದು ಎಲ್ಲಿ? ಹಾಗೂ ಯಾರೆಲ್ಲ ಸಹಕಾರ ನೀಡಿದ್ದರು? ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದೂ ಮೂಲಗಳು ತಿಳಿಸಿವೆ.

ಮತ್ತಷ್ಟು ತಂಡಗಳ ರಚನೆ

'ಪಿಎಸ್ಐ ಪರೀಕ್ಷೆ ಅಕ್ರಮ ಸಂಬಂಧ ದಿನಕ್ಕೊಂದು ಮಾಹಿತಿಗಳು ಹೊರಬೀಳುತ್ತಿದ್ದು, ಪ್ರಕರಣದ ತನಿಖೆಗೆಂದು ಸಿಐಡಿ ಅಧಿಕಾರಿಗಳ ನೇತೃತ್ವದಲ್ಲಿ ಮತ್ತಷ್ಟು ವಿಶೇಷ ತಂಡಗಳನ್ನು ರಚಿಸಲಾಗಿದೆ' ಎಂದು ಮೂಲಗಳು ಹೇಳಿವೆ.

'ಕಲಬುರಗಿ ಚೌಕ್ ಠಾಣೆ ಹಾಗೂ ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆ ಪ್ರಕರಣಗಳನ್ನು ಪ್ರತ್ಯೇಕ ತಂಡಗಳು ತನಿಖೆ ಮಾಡಲಿವೆ. ಪರಸ್ಪರ ಆರೋಪಿಗಳ ಭಾಗಿ ಬಗ್ಗೆಯೂ ಮಾಹಿತಿ ಕಲೆ ಹಾಕಲಿವೆ' ಎಂದೂ ತಿಳಿಸಿವೆ.

ಸುದ್ದಿ 2 ನಿಮಿಷ

'ಸಿ.ಎಂ ಸ್ಥಾನದಿಂದ ಬಸವರಾಜ ಬೊಮ್ಮಾಯಿ ಬದಲಾವಣೆ'

ಮೈಸೂರು: 'ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಾಯಿಸಲು ಹೊರಟಿದ್ದಾರೆ. ಏಕೆಂದರೆ ಅವರು ಆರ್‌ಎಸ್‌ಎಸ್‌ನವರು ಅಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭಾನುವಾರ ಇಲ್ಲಿ ಹೇಳಿದರು.

ಹೊಸ ನಾಯಕತ್ವ ಹಾಗೂ ಹೊಸಮುಖಗಳಿಗೆ ಬಿಜೆಪಿಯಲ್ಲಿ ಆದ್ಯತೆ ಸಿಗಲಿದೆ ಎಂಬ ಬಿ.ಎಲ್. ಸಂತೋಷ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಬಿಜೆಪಿಯಲ್ಲಿ ಸಂತೋಷ್ ಮಾತು ನಡೆಯುತ್ತದೆ. ಬಸವರಾಜ ಬೊಮ್ಮಾಯಿ ಈ ಮೊದಲು ನಮ್ಮೊಂದಿಗೆ ಜನತಾ ಪರಿವಾರದಲ್ಲಿ ಇದ್ದರೂ ನಮ್ಮ ರಾಜಕೀಯ ಪಟ್ಟುಗಳನ್ನು ಕಲಿಯಲಿಲ್ಲ' ಎಂದು ಮಾರ್ಮಿಕವಾಗಿ ನುಡಿದರು.

'ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ಬಂದು ಬಹಳ ದಿನವಾಗಿದೆ. ಬಿಜೆಪಿ ಕಿತ್ತೊಗೆಯಲು ವಿಧಾನಸಭಾ ಚುನಾವಣೆಗಾಗಿ ಜನ ಕಾಯುತ್ತಿದ್ದಾರೆ' ಎಂದರು.

'ಮೈಸೂರಿನಲ್ಲಿ ನಡೆದ ಸಾಮೂಹಿಕ ಅತ್ಯಾಚಾರದಿಂದ ಹಿಡಿದು ಎಲ್ಲಾ ಪ್ರಕರಣಗಳ ನಿರ್ವಹಣೆಯಲ್ಲಿ ಗೃಹ ಸಚಿವರು ವಿಫಲರಾಗಿದ್ದಾರೆ. ರಾಜ್ಯದಲ್ಲಿ ಈಗ ದುರ್ಬಲ ಗೃಹ ಸಚಿವ ಹಾಗೂ ಮುಖ್ಯಮಂತ್ರಿ ಇದ್ದಾರೆ. ಕಾನೂನು ಸುವ್ಯವಸ್ಥೆಯೇ ಇಲ್ಲದಂತಾಗಿದೆ' ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್‌ನದ್ದು ವಂಶಪಾರಂಪರ್ಯ ರಾಜಕಾರಣ ಎಂಬ ಸಂತೋಷ್ ಹೇಳಿಕೆಗೆ, 'ಹಾಗಿದ್ದರೆ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಮಕ್ಕಳು ಯಾರು? ನಮ್ಮನ್ನು ಟೀಕಿಸಲು ಅವರಿಗೆ ನೈತಿಕತೆ ಇದೆಯೇ' ಎಂದು ಪ್ರಶ್ನಿಸಿದರು.



'ಶಾಕ್' ಕೊಟ್ಟ ಸಂತೋಷ್!

ಒಂದನೇ ಪುಟದಿಂದ

'ಗುಜರಾತ್ ಮತ್ತು ನವದೆಹಲಿಯ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಎರಡು ಬಾರಿ ಗೆದ್ದವರಿಗೆ ಟಿಕೆಟ್ ನೀಡದೇ ಇದ್ದರೂ ಅಲ್ಲಿ ಹೊಸದಾಗಿ ಬಿಜೆಪಿ ಕಣಕ್ಕಿಳಿಸಿದ ಅಭ್ಯರ್ಥಿಗಳು ಜಯ ಗಳಿಸಿದರು. ಇದು ಬಿಜೆಪಿಯ ಶಕ್ತಿ' ಎಂದಿರುವ ಅವರು ವ್ಯಕ್ತಿಗಿಂತ ಪಕ್ಷ ಮುಖ್ಯ ಎಂಬ ಸಂದೇಶವನ್ನು ರವಾನಿಸಿದ್ದಾರೆ.

'ಸಮಾಜದ ಬದಲಾವಣೆಗೆ ಸ್ಪಂದಿಸುವ ವಿಚಾರದಲ್ಲಿ ಯಾವ ಪಕ್ಷ ಬದಲಾವಣೆ ಆಗುವುದಿಲ್ಲವೋ ಆ ಪಕ್ಷ ನಾಶವಾಗಲಿದೆ. ಬದಲಾವಣೆಯಾಗುವ ಪಕ್ಷ ಉಳಿಯುತ್ತದೆ. ಬದಲಾವಣೆಗೆ ತಕ್ಕಂತೆ ಬಿಜೆಪಿ ಬದಲಾಗಿದೆ. ಆದರೆ ಕಾಂಗ್ರೆಸ್ ಹಾಗೆಯೇ ಇದೆ. ಹೀಗಾಗಿ ಕಾಂಗ್ರೆಸ್‌ನಲ್ಲಿ ಯುವ ನಾಯಕರು ಯಾರು ಎಂದರೆ ಸೋನಿಯಾಗಾಂಧಿ, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ ಹೀಗೆ ನಾಯಕರ ಪುತ್ರರೇ ಇದ್ದಾರೆ. ಜನ್ಮ ಪ್ರಮಾಣ ಪತ್ರ, ಮದುವೆ ಪ್ರಮಾಣಪತ್ರಗಳಿದ್ದರೆ ಕಾಂಗ್ರೆಸ್‌ನಲ್ಲಿ ನಾಯಕರಾಗಬಹುದು. ಬಿಜೆಪಿಯಲ್ಲಿ ಇಂತಹ ಉದಾಹರಣೆಗಳು ವಿರಳ. ನಮ್ಮಲ್ಲಿ ಕಾರ್ಯಕರ್ತರೇ ನಾಯಕರಾಗುವ ಅವಕಾಶ ಇದೆ' ಎಂದು ಹೇಳುವ ಮೂಲಕ ಕುಟುಂಬ ರಾಜಕಾರಣಕ್ಕೆ ಮುಂದೆ ಅವಕಾಶವಿಲ್ಲ ಎಂದು ಸಾರಿದ್ದಾರೆ.

'ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮೈಸೂರು ಭಾಗದ 11 ಕ್ಷೇತ್ರಗಳಲ್ಲಿ 8 ಕ್ಷೇತ್ರ ಗೆಲ್ಲಬೇಕು. ಇದಕ್ಕಾಗಿ ಯಾವುದೋ ನಾಯಕರ ಪಂಚೆ ಹಿಡಿದು ಅವರಿಗೇ ಟಿಕೆಟ್ ಕೊಡಿ ಎಂದು ಓಡಾಡಬೇಡಿ. ನೀವು ಅಂದುಕೊಂಡವರಿಗೆ ಟಿಕೆಟ್ ಸಿಗುವ ಸಾಧ್ಯತೆ ಶೇ 90ರಷ್ಟು ಕಡಿಮೆ. ಯಾರಿಗೆ ಟಿಕೆಟ್ ಸಿಕ್ಕಿದರೂ ಅವರ ಪರವಾಗಿ ಕೆಲಸ ಮಾಡಿ, ಮುಂದೊಂದು ದಿನ ನೀವೂ ನಾಯಕರಾಗಿ' ಎಂದಿರುವ ಸಂತೋಷ್ ಟಿಕೆಟ್‌ಗಾಗಿ ಲಾಬಿ ಮಾಡುವವರಿಗೆ ಕಡಿವಾಣ ಹಾಕುವ ಮಾತೂ ಆಡಿದ್ದಾರೆ.

ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳ ಸರಾಸರಿ ವಯಸ್ಸು 56 ರಿಂದ 57 ವರ್ಷಗಳು. ನಾಲ್ಕು ಮಂದಿ ಮುಖ್ಯಮಂತ್ರಿಗಳ ವಯಸ್ಸು 50 ಕ್ಕೂ ಕಡಿಮೆ. ಕೇಂದ್ರ ಸಂಪುಟದಲ್ಲಿರುವ ಬಹಳಷ್ಟು ಮಂದಿ ರಾಜಕೀಯ ಕುಟುಂಬದಿಂದ ಬಂದವರಲ್ಲ ಎಂದು ಸಂತೋಷ್ ಹೇಳಿದ್ದು, ಕೂಡಾ ಚರ್ಚೆಗೆ ಗ್ರಾಸವಾಗಿದೆ.

'ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ'

'ನಮ್ಮ ಪಕ್ಷ ಏನು ಮಾಡಲಿದೆ ಎಂಬ ಪ್ರಯೋಗಶೀಲತೆ ಬಗ್ಗೆ ಬಿ.ಎಲ್. ಸಂತೋಷ್ ಮೈಸೂರಿನಲ್ಲಿ ಮಾತನಾಡಿದ್ದಾರೆ. ಆದರೆ ಈ ಹೇಳಿಕೆಯ ಬಗ್ಗೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ. ಭಾನುವಾರ ಸಂಜೆ ಸುದ್ದಿಗಾರರ ಜತೆ ಮಾತನಾಡಿ, 'ಯಾರೂ ಅವರ ಮಾತುಗಳನ್ನು ವ್ಯಕ್ತಿಗತವಾಗಿ ತೆಗೆದುಕೊಳ್ಳಬೇಕಾಗಿಲ್ಲ' ಎಂದೂ ತಿಳಿಸಿದರು. ಯೋಗಿ ಆದಿತ್ಯನಾಥ ಅಂತಹವರು ಬೆಳಕಿಗೆ ಬಂದಿದ್ದು, ಇಂತಹ ಪ್ರಯೋಗಶೀಲತೆಯಿಂದಲೇ. ಪಕ್ಷದ ಸಿದ್ಧಾಂತವೆಂದರೆ, ಕಾರ್ಯಕರ್ತನಾಗಿ ಯಾವ ಎತ್ತರಕ್ಕೆ ಬೇಕಾದರೂ ಬೆಳೆಯಬಹುದು. ಕುಟುಂಬದ ಕಾರಣಕ್ಕೆ ಅಲ್ಲ. ಉತ್ತರಾಖಂಡದಲ್ಲಿ ಸೋತವರನ್ನೂ ಮುಖ್ಯಮಂತ್ರಿ ಮಾಡಲಾಯಿತು. ಪಕ್ಷ ತೀರ್ಮಾನ ಮಾಡಿದರೆ, ಯಾರನ್ನು ಯಾವ ಸ್ಥಾನಕ್ಕೆ ಬೇಕಾದರೂ ಕೂರಿಸಬಹುದು ಎಂದು ಹೇಳಿದರು.

ಡಿವೈಎಸ್ಪಿ, ಪಿಐಗಳ ಕೈವಾಡ?

ಒಂದನೇ ಪುಟದಿಂದ

ಎಂಜಿನಿಯರ್‌ಗಳ ತಂಡ ಪಿಎಸ್ಐ ಹಾಗೂ ಲೋಕೋಪಯೋಗಿ ಇಲಾಖೆಯ ಕಿರಿಯ ಎಂಜಿನಿಯರ್‌ಗಳ ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮ ನಡೆಸಿರುವ ಕುರಿತು ಮಾಹಿತಿ ಲಭಿಸಿದ್ದು, ಹೆಚ್ಚಿನ ವಿವರ ಸಂಗ್ರಹಿಸಲಾಗುತ್ತಿದೆ ಎಂದು ತನಿಖಾ ತಂಡದ ಮೂಲಗಳಿಂದ ಗೊತ್ತಾಗಿದೆ.

ಶ್ರೀಧರ ಪವಾರ ಸೆರೆ: ಪಿಎಸ್ಐ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದು ಹೊರಬರಲು ಕಾರಣವಾಗಿದ್ದ ಶ್ರೀಧರ ಪವಾರ ಎಂಬ ಅಭ್ಯರ್ಥಿಯನ್ನು ಸಿಐಡಿ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

'ಶ್ರೀಧರ ಕೂಡ ಪಿಎಸ್ಐ ಹುದ್ದೆಗೆ ಆಯ್ಕೆಯಾಗಿದ್ದ. ಆದರೆ, ಆತ ತನ್ನ ಪರೀಕ್ಷೆಯಲ್ಲಿ ಅಕ್ರಮ ನಡೆಸಿರುವುದಕ್ಕೆ ಯಾವುದೇ ದಾಖಲೆ ದೊರಕಿಲ್ಲ. ವೀರೇಶ ಮೇಳಕುಂದಾ ಎಂಬ ಅಭ್ಯರ್ಥಿಗೆ ಮಂಜುನಾಥ ಮೇಳಕುಂದಿಯನ್ನು ಪರಿಚಯಿಸಿದ್ದ. ಈ ರೀತಿ ನೆರವು ಒದಗಿಸಿದ್ದಕ್ಕೆ ತನಗೆ ₹ 5 ಲಕ್ಷ ನೀಡುವಂತೆ ಶ್ರೀಧರ ಬೇಡಿಕೆ ಇಟ್ಟಿದ್ದ. ವೀರೇಶ ಹಣ ಕೊಡಲಿಲ್ಲ ಎಂಬ ಸಿಟ್ಟಿನಿಂದ ಆತನ ಒಎಂಆರ್ ಪ್ರತಿಯ ಫೋಟೊಗಳನ್ನು ವಾಟ್ಸ್ ಆ್ಯಪ್‌ನಲ್ಲಿ ಹಂಚಿಕೊಂಡಿದ್ದ' ಎಂದು ಮೂಲಗಳು ಹೇಳಿವೆ.



ಶ್ರೀಧರ ಪವಾರ

ಬ್ಲೂಟೂತ್ ಬಳಸಲು ವಿಶೇಷ ತರಬೇತಿ!

ಪರೀಕ್ಷಾ ಕೇಂದ್ರದ ಒಳಗೆ ಬ್ಲೂಟೂತ್ ಉಪಕರಣ ಒಯ್ಯುವುದು ಹೇಗೆ? ಅದನ್ನು ಎಲ್ಲಿ, ಹೇಗೆ ಇಟ್ಟುಕೊಳ್ಳಬೇಕು, ಅನುಮಾನ ಬಂದರೆ ಯಾವ ರೀತಿ ಶಬ್ದ ನೀಡಬೇಕು, ಉತ್ತರ ಸ್ಪಷ್ಟವಾಗಿ ಕೇಳಿಸುವಂತೆ ಹೊರಗಿನವರು ಹೇಳುವುದು ಹೇಗೆ?–ಹೀಗೆ ಎಲ್ಲ ರೀತಿಯ ತರಬೇತಿಯನ್ನೂ ರುದ್ರಗೌಡ ತನ್ನ ಅಭ್ಯರ್ಥಿಗಳಿಗೆ ನೀಡಿದ್ದರು. ಅಭ್ಯರ್ಥಿಗಳು ಒಳಉಡುಪಿನಲ್ಲಿ ಬ್ಲೂಟೂತ್ ಉಪಕರಣ ಇಟ್ಟುಕೊಂಡು ಹೋಗಬೇಕು. ಪರೀಕ್ಷೆ ಆರಂಭವಾದ ಮೇಲೆ ಒಮ್ಮೆ ಕೆಮ್ಮಿದರೆ ಅವರಿಗೆ ಉತ್ತರ ಕೇಳಿಸುತ್ತದೆ ಎಂದರ್ಥ. ಆಗ ಹೊರಗೆ ಮೊಬೈಲ್, ಪ್ರಶ್ನೆ ಪತ್ರಿಕೆ ಇಟ್ಟುಕೊಂಡು ಕುಳಿತ ವ್ಯಕ್ತಿ ಉತ್ತರ ಹೇಳಲು ಶುರು ಮಾಡಬೇಕು. ಮಧ್ಯದಲ್ಲಿ ಏನಾದರೂ ವ್ಯತ್ಯಾಸವಾದರೆ ಮತ್ತೆ ಕೆಮ್ಮಬೇಕು. ಆ ಶಬ್ದ ಕೇಳಿಸಿದ ತಕ್ಷಣ ಹೊರಗಿನ ವ್ಯಕ್ತಿ ಮತ್ತೆ ಸರಿಯಾಗಿ ಹೇಳಬೇಕು. ಪ್ರತಿಯೊಂದು ಪ್ರಶ್ನೆಯ ಸಂಖ್ಯೆಯನ್ನು ಮೂರು ಬಾರಿ, ಅದರ ಉತ್ತರವನ್ನೂ ಮೂರು ಬಾರಿ ಹೇಳುವುದನ್ನು ಚಾಚೂ ತಪ್ಪದಂತೆ ಪಾಲಿಸಬೇಕು ಎಂಬುದನ್ನು ತರಬೇತಿ ವೇಳೆ ಹೇಳಿಕೊಡಲಾಗಿತ್ತು ಎಂಬುದು ಸಿಐಡಿ ತನಿಖೆ ವೇಳೆ ಬಯಲಿಗೆ ಬಂದಿದೆ.

'ಸಾವಿರ ದೇವಸ್ಥಾನಗಳಲ್ಲಿ ಓಂಕಾರ, ಸುಪ್ರಭಾತ'

ಮಂಗಳೂರು: 'ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆಗೆ ಕಡಿವಾಣ ಹಾಕುವಂತೆ ಗಡುವು ನೀಡಿದ್ದರೂ ಸರ್ಕಾರ ಈವರೆಗೆ ಕ್ರಮ ತೆಗೆದುಕೊಂಡಿಲ್ಲ. ಸುಪ್ರೀಂ ಕೋರ್ಟ್ ಆದೇಶಕ್ಕೂ ಬೆಲೆ ಕೊಟ್ಟಿಲ್ಲ. ಆದ್ದರಿಂದ ಮೇ 9ರಿಂದ ರಾಜ್ಯದ ಒಂದು ಸಾವಿರ ದೇವಸ್ಥಾನಗಳಲ್ಲಿ ಬೆಳಗಿನ ಜಾವ 5 ಗಂಟೆಗೆ ಧ್ವನಿವರ್ಧಕಗಳ ಮೂಲಕ ಓಂಕಾರ, ಸುಪ್ರಭಾತ ಹಾಕಲು ನಿರ್ಧರಿಸಲಾಗಿದೆ. ಇದನ್ನು ತಡೆಯಲು ಮುಂದಾದರೆ ಸಂಘರ್ಷ ಖಚಿತ' ಎಂದು ಶ್ರೀರಾಮಸೇನೆ ಅಧ್ಯಕ್ಷ ಪ್ರಮೋದ ಮುತಾಲಿಕ್ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘಿಸಿ ಮಸೀದಿಗಳಲ್ಲಿ ಬೆಳಿಗ್ಗೆ ಧ್ವನಿವರ್ಧಕ ಬಳಕೆ ಮಾಡಲಾಗುತ್ತಿದೆ. ಮೇ 1ರೊಳಗೆ ಇದನ್ನು ನಿಲ್ಲಿಸಬೇಕು ಎಂದು ಸರ್ಕಾರಕ್ಕೆ ಗಡುವು ನೀಡಲಾಗಿತ್ತು. ಸರ್ಕಾರ ಕ್ರಮ ಕೈಗೊಳ್ಳದಿರುವುದರಿಂದ ಈ ಹೋರಾಟಕ್ಕೆ ಸಂಘಟನೆ ಮುಂದಾಗಿದೆ. ಆಜಾನ್‌ಗಿಂತ ಜೋರಾಗಿ ಓಂಕಾರ, ಸುಪ್ರಭಾತ ಪ್ರಸಾರ ಮಾಡುತ್ತೇವೆ' ಎಂದರು.

ಅಕ್ಷಯ ತೃತೀಯ ಹಿಂದೂಗಳ ಪವಿತ್ರ ಹಬ್ಬ. ಈ ಸಂದರ್ಭದಲ್ಲಿ ಹಿಂದೂ ಮಹಿಳೆಯರು ಮುಸ್ಲಿಮರ ಬಂಗಾರದ ಅಂಗಡಿಗಳಲ್ಲಿ ಚಿನ್ನ ಖರೀದಿ ಮಾಡಬಾರದು ಎಂದು ಅವರು ಹಿಂದೂ ಮಹಿಳೆಯರಲ್ಲಿ ಮನವಿ ಮಾಡಿದರು.

ಪತಿಯ ಶವ ನೋಡಿ ಪತ್ನಿ ಸಾವು

ಹೊಳಲ್ಕೆರೆ: ತಾಲ್ಲೂಕಿನ ಕುಡಿನೀರಕಟ್ಟೆ ಗ್ರಾಮದಲ್ಲಿ ಭಾನುವಾರ ಅಪಘಾತದಲ್ಲಿ ಮೃತಪಟ್ಟ ಪತಿಯ ಶವ ನೋಡಿದ ಪತ್ನಿಯೂ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ನಿವೃತ್ತ ಶಿಕ್ಷಕ ಮಹೇಶ್ವರಪ್ಪ (70) ಅವರು ಬೈಕಿನಲ್ಲಿ ಹೋಗುತ್ತಿದ್ದಾಗ ಕುಡಿನೀರಕಟ್ಟೆ ಗೇಟ್ ಬಳಿ ಕಾರು ಡಿಕ್ಕಿಯಾಗಿ ಮೃತಪಟ್ಟಿದ್ದರು.

ಅವರ ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶವಾಗಾರದಲ್ಲಿ ಇಡಲಾಗಿತ್ತು. ಆಸ್ಪತ್ರೆಗೆ ಬಂದ ಮಹೇಶ್ವರಪ್ಪ ಅವರ ಪತ್ನಿ ಅನ್ನಪೂರ್ಣಮ್ಮ (65) ಪತಿಯ ಶವ ನೋಡಿದ ತಕ್ಷಣ ಹೃದಯಾಘಾತಕ್ಕೆ ಒಳಗಾಗಿ ಮೃತಪಟ್ಟಿದ್ದಾರೆ.

ಸಾಮರಸ್ಯ ಸಾರಿದ ಮಾಯಕೊಂಡ ಹೋಬಳಿಯ ಅಣಬೇರು ಗ್ರಾಮ

ಈದ್ಗಾ ಗೋಡೆ ನಿರ್ಮಾಣಕ್ಕೆ ಹಿಂದೂಗಳ ಭೂಮಿ

• ಎಚ್. ಅನಿತಾ

ದಾವಣಗೆರೆ: ದಾವಣಗೆರೆ ತಾಲ್ಲೂಕಿನ ಮಾಯಕೊಂಡ ಹೋಬಳಿಯ ಅಣಬೇರು ಗ್ರಾಮದ ರಾಜಶೇಖರಪ್ಪ ಮತ್ತು ರಾಜಪ್ಪ ಎಂಬುವವರ ಜಮೀನಿನ ನಡುವೆ ಈದ್ಗಾ ಮೈದಾನವಿದೆ. ಅಲ್ಲಿ ಕಳೆದ ವರ್ಷ ತೀವ್ರ ಗಾಳಿ-ಮಳೆಯಿಂದ ಈದ್ಗಾ ಗೋಡೆ ಕುಸಿದಿತ್ತು. ಅದನ್ನು ಮತ್ತೆ ಕಟ್ಟಲು ರಾಜಪ್ಪ ಅವರು ತಮಗೆ ಸೇರಿರುವ ಭೂಮಿಯಲ್ಲಿ ಸ್ವಲ್ಪ ಭಾಗವನ್ನು ಹೆಚ್ಚುವರಿಯಾಗಿ ನೀಡುವ ಮೂಲಕ ಸಾಮರಸ್ಯ ಮೆರೆದಿದ್ದಾರೆ.

ರಾಜಶೇಖರಪ್ಪ ಹಾಗೂ ರಾಜಪ್ಪ ನೀಡಿದ ಸಹಕಾರದಿಂದಾಗಿ ನೂತನ ಈದ್ಗಾ ಗೋಡೆ ಈಚೆಗೆ ಉದ್ಘಾಟನೆಗೊಂಡಿದೆ.

ಈದ್ಗಾ ಗೋಡೆ ನಿರ್ಮಾಣಕ್ಕೆ ಸಹಕಾರ ನೀಡಿದ ರಾಜಶೇಖರಪ್ಪ ಮತ್ತು ರಾಜಪ್ಪ ಅವರಿಗೆ ಮುಸ್ಲಿಂ ಸಮುದಾಯದ ಮುಖಂಡರು ಗೌರವ ಸಮರ್ಪಣೆ ಮಾಡುವ ಮೂಲಕ ಕೃತಜ್ಞತೆ ಸಲ್ಲಿಸಿದ್ದಾರೆ.

'ಗ್ರಾಮದಲ್ಲಿ ಆರು ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇದೆ. ವಿವಿಧ ಜಾತಿ, ಧರ್ಮಗಳ ಜನರು ಇಲ್ಲಿ ಸಾಮರಸ್ಯದಿಂದ ಬದುಕುತ್ತಿದ್ದೇವೆ. ಇದುವರೆಗೆ ಯಾವುದೇ ಅಹಿತಕರ ಘಟನೆಗಳು ನಡೆಯಲು ಅವಕಾಶ ನೀಡಿಲ್ಲ. ಕೋಮು ಸಾಮರಸ್ಯವನ್ನು ಕದಡುವಂತಹ ಅನೇಕ ಬೆಳವಣಿಗೆಗಳು ನಾಡಿನಲ್ಲಿ ನಡೆಯುತ್ತಿರುವುದನ್ನು ಪತ್ರಿಕೆ, ಟಿ.ವಿ.ಗಳಲ್ಲಿ ಗಮನಿಸುತ್ತಿದ್ದೇವೆ. ರಾಜಕೀಯ ಲಾಭಕ್ಕಾಗಿ ಯಾವುದೇ ಪಕ್ಷ ಅಥವಾ ಸಂಘಟನೆಗಳು ಕಿಡಿಗೇಡಿ ಕೃತ್ಯಗಳನ್ನು ನಡೆಸುವುದು ತಪ್ಪು. ಮುಸ್ಲಿಮರು ಎಲ್ಲಿಂದಲೋ ಬಂದವರಲ್ಲ. ಅವರೂ ಇಲ್ಲಿಯೇ ಹುಟ್ಟಿ, ಬೆಳೆದವರು. ನಮ್ಮಂತೆಯೇ ಅವರೂ ಬದುಕಬೇಕು. ಬಸವಣ್ಣ ಸೇರಿ ಹಲವು ದಾರ್ಶನಿಕರು ಇದನ್ನೇ ಹೇಳಿದ್ದಾರೆ. ಆದರೂ ಅಹಿತಕರ ಘಟನೆಗಳು ನಡೆಯುತ್ತಿರುವುದು ಬೇಸರ ತಂದಿದೆ. ಅದಕ್ಕೆ ನಾವು ಅವಕಾಶ ಮಾಡಿಕೊಡಬಾರದು. ಎಲ್ಲರೂ ಒಟ್ಟಾಗಿ ಬಾಳಬೇಕು' ಎನ್ನುತ್ತಾರೆ ಆಂಜನೇಯಸ್ವಾಮಿ ದೇವಸ್ಥಾನ ಸಮಿತಿ ಅಧ್ಯಕ್ಷರೂ ಆಗಿರುವ ಗ್ರಾಮದ ಕೆ.ಸಿ. ರಾಜಪ್ಪ.

'ಈದ್ಗಾ ಮೈದಾನದ ಜಾಗದ ಸಂಬಂಧ ಈ ಹಿಂದೆ ವಿವಾದ ಉಂಟಾಗಿತ್ತು. ಕೊನೆಗೆ ಪ್ರಕರಣ ಕೋರ್ಟ್ ಮೆಟ್ಟಿಲು ಏರಿತ್ತು. ಇದೀಗ ಯಾವುದೇ ಸಮಸ್ಯೆ ಇಲ್ಲ. ರಾಜಶೇಖರಪ್ಪ ಮತ್ತು ನಮ್ಮ ಜಮೀನಿನ ನಡುವೆ ಈದ್ಗಾ ಮೈದಾನವಿರುವುದರಿಂದ ಇಬ್ಬರೂ ಸೇರಿ ಜಾಗದ ಹಕ್ಕನ್ನು ಪ್ರಾರ್ಥನಾ ಮಂದಿರದವರಿಗೆ ಮಾಡಿಕೊಡಲು ನಿರ್ಧರಿಸಿದ್ದೇವೆ. ಇದರಿಂದ ಅವರಿಗೂ ಆತಂಕವಿಲ್ಲ. ಮುಂದೆ ಯಾರೂ ತಕರಾರು ತೆಗೆಯಲು ಅವಕಾಶ ಇಲ್ಲ. ಸರ್ವ ಜನಾಂಗದವರ ಸಮಾನತೆಗಾಗಿ ದುಡಿದ ಬಸವಣ್ಣನವರ ಜಯಂತಿ ಹಾಗೂ ಉಪವಾಸದ ಮಹತ್ವ ಸಾರುವ ರಂಜಾನ್ ಹಬ್ಬಗಳೆರಡೂ ಒಟ್ಟಿಗೆ ಬಂದಿರುವ ಸಂದರ್ಭದಲ್ಲಿ ನೂತನ ಪ್ರಾರ್ಥನಾ ಮಂದಿರ ಉದ್ಘಾಟನೆಯಾಗಿದ್ದು ಸಂತಸ ತಂದಿದೆ' ಎನ್ನುತ್ತಾರೆ ಅವರು.



ದಾವಣಗೆರೆ ತಾಲ್ಲೂಕಿನ ಮಾಯಕೊಂಡ ಸಮೀಪದ ಅಣಬೇರು ಗ್ರಾಮದ ಮುಸ್ಲಿಂ ಸಮುದಾಯದ ಈದ್ಗಾ ಮೈದಾನದಲ್ಲಿ ನೂತನ ಈದ್ಗಾ ಗೋಡೆಯ ಉದ್ಘಾಟನಾ ಸಮಾರಂಭದಲ್ಲಿ ಜಾಗವನ್ನು ದಾನವಾಗಿ ನೀಡಿದ ಗ್ರಾಮದ ಆಂಜನೇಯಸ್ವಾಮಿ ದೇವಸ್ಥಾನ ಸಮಿತಿ ಅಧ್ಯಕ್ಷ ಕೆ.ಸಿ. ರಾಜಪ್ಪ ಮತ್ತು ಬಳಗಟ್ಟೆರ ಶೇಖರಪ್ಪರನ್ನು ಮುಸ್ಲಿಂ ಸಮುದಾಯದ ಮುಖಂಡರು ಗೌರವಿಸಿದರು.

ರಾಜಕಾರಣದಲ್ಲಿರುವವರು ಏನು ಬೇಕಾದರೂ ಮಾಡಲಿ. ಗ್ರಾಮಗಳಲ್ಲಿ ಹಾಗೆ ಆಗಲ್ಲ. ನಮಗೇನಾದರೂ ಆದರೆ ಅವರು ಬೇಕು. ಅವರಿಗೇನಾದರೂ ಆದರೆ ನಾವು ಬೇಕು. ಮಾನವೀಯತೆ ಮುಖ್ಯ.

ಬಿ.ಎಸ್. ರಾಜಶೇಖರಪ್ಪ, ಗ್ರಾಮಸ್ಥ

ಗ್ರಾಮದಲ್ಲಿ ಹಿಂದೂ-ಮುಸ್ಲಿಂ ಸಮುದಾಯದವರು ಒಗ್ಗಟ್ಟಿನಿಂದ ಬದುಕುತ್ತಿದ್ದೇವೆ. ನೂತನ ಈದ್ಗಾ ಗೋಡೆ ನಿರ್ಮಾಣಕ್ಕೆ ಸಹಕಾರ ಸಿಕ್ಕಿದ್ದು ಸಂತಸ ತಂದಿದೆ.

ಎಂ.ಸಿ. ಬುಡೇನ್ ಸಾಬ್, ಅಣಬೇರು ಗ್ರಾಮ ಪಂಚಾಯಿತಿ ಸದಸ್ಯ

'ಭೌಗೋಳಿಕ ಗುರುತಷ್ಟೆ'

ಹೈದರಾಬಾದ್: 'ಹಿಂದೂ' ಎನ್ನುವುದು ಕೇವಲ ಭೌಗೋಳಿಕ ಗುರುತಷ್ಟೆ. ಹಿಮಾಲಯ ಮತ್ತು ಹಿಂದೂ ಮಹಾಸಾಗರದ ನಡುವಿನ ಭೂಮಿಯಲ್ಲಿ ವಾಸಿಸುವ ಎಲ್ಲಾ ಜನರು ಹಿಂದೂಗಳು ಎಂದು ಕೇಂದ್ರ ಸಚಿವ ಅಶ್ವಿನಿ ಕುಮಾರ್ ಚೌಬೆ ಶನಿವಾರ ಹೇಳಿದ್ದಾರೆ.



ಮಹಾ ಮಜ್ಜನ

ಅಭಿಷೇಕದಲ್ಲಿ ಮಿಂದ ಬಾಹುಬಲಿ

ಚಾಮರಾಜನಗರ ತಾಲ್ಲೂಕಿನ ಮಲೆಯೂರು ಗ್ರಾಮದಲ್ಲಿರುವ ಕನಕಗಿರಿ ಕ್ಷೇತ್ರದಲ್ಲಿ ಅತಿಶಯ ಮಹೋತ್ಸವದ ಅಂಗವಾಗಿ ಭಾನುವಾರ ನಡೆದ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಅರಿಸಿನ ಅಭಿಷೇಕದ ಸಂದರ್ಭದಲ್ಲಿ ಕಂಗೊಳಿಸಿದ ಬಾಹುಬಲಿ ಸ್ವಾಮಿ –ಪ್ರಜಾವಾಣಿ ಚಿತ್ರ/ ಸಿ.ಆರ್.ವೆಂಕಟರಾಮು

ಒಳನೋಟ

ವಿ.ವಿ ಕ್ರೀಡೆಗೆ ಬೇಕಿದೆ ಬಲ

ಬೆಂಗಳೂರು: 'ಹೆಚ್ಚಿದ ವಿ.ವಿ;ಸೊರಗಿದ ಕ್ರೀಡೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಮೇ 1) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಕ್ರೀಡಾ ಸೌಲಭ್ಯ ಹೆಚ್ಚಿಸಿ



ರಾಜ್ಯದಲ್ಲಿ ಉನ್ನತ ಶಿಕ್ಷಣದಲ್ಲಿ ಕ್ರೀಡೆಗೆ ಸಂಬಂಧಿಸಿದ ಕೋರ್ಸ್‌ಗಳನ್ನು ಆರಂಭಿಸುವ ಜತೆಗೆ ಕಾಲೇಜುಗಳಲ್ಲಿ ಉತ್ತಮವಾದ ಕ್ರೀಡಾಂಗಣ ನಿರ್ಮಿಸಬೇಕು. ಕ್ರೀಡಾಪಟುಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಸಹಕಾರಿಯಾಗುವಂತೆ ಎಲ್ಲ ಸೌಕರ್ಯಗಳನ್ನು ಕಲ್ಪಿಸಬೇಕು.

ವಿ.ಯಮನೂರ, ಕೊಪ್ಪಳ

ಆಸಕ್ತರಿಗೆ ಪ್ರೋತ್ಸಾಹ ಇಲ್ಲ

ಕಾಲೇಜುಗಳಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಕ್ರೀಡಾ ಸಾಧಕರನ್ನು ಆಹ್ವಾನಿಸುವುದು ವಿರಳ. ಈ ಕಾರಣದಿಂದಲೇ ವಿದ್ಯಾರ್ಥಿಗಳು ಕ್ರೀಡೆಯಿಂದ ದೂರ ಉಳಿಯುತ್ತಿದ್ದಾರೆ ಎನ್ನುವುದರಲ್ಲಿ ತಪ್ಪಿಲ್ಲ. ದೇಶದ ಬೆಳವಣಿಗೆಗೆ ಕ್ರೀಡೆಯೂ ಮುಖ್ಯ. ಶಾಲಾ ಹಂತದಿಂದಲೇ ಕ್ರೀಡೆಗೆ ಹೆಚ್ಚಿನ ಆದ್ಯತೆ ನೀಡಿದರೆ ಕ್ರೀಡಾ ಸಾಧಕರು ಹೊರಹೊಮ್ಮುತ್ತಾರೆ.



ದರ್ಶನ್, ತುಮಕೂರು

ರ್‍ಯಾಂಕ್ ಪಡೆಯುವ ಗುರಿ



ಪ್ರಸ್ತುತ ಯುವಕರಲ್ಲಿ ಕ್ರೀಡಾಸಕ್ತಿ ಹೆಚ್ಚಾಗಿದ್ದರೂ ಪ್ರೋತ್ಸಾಹ ಕಡಿಮೆ. ವಿಶ್ವವಿದ್ಯಾಲಯಗಳು ಶಿಕ್ಷಣದಲ್ಲಿ ಗುಣಮಟ್ಟ ಹೆಚ್ಚಿಸುವ ವೇಗದಲ್ಲಿ ಕ್ರೀಡೆಯ ಮಹತ್ವವನ್ನೇ ಮರೆಯುತ್ತಿವೆ. ವಿದ್ಯಾರ್ಥಿಗಳೂ ರ್‍ಯಾಂಕ್ ಪಡೆಯುವ ಧಾವಂತದಲ್ಲಿ ಕ್ರೀಡೆಯತ್ತ ಗಮನಹರಿಸುತ್ತಿಲ್ಲ. ಇನ್ನು ಮುಂದಾದರೂ ಶಾಲಾ ಕಾಲೇಜುಗಳಲ್ಲಿ ಕ್ರೀಡಾಸಕ್ತ ವಿದ್ಯಾರ್ಥಿಗಳನ್ನು ಗುರುತಿಸಿ, ಅವರನ್ನು ಪ್ರೋತ್ಸಾಹಿಸುವ ಕೆಲಸ ನಡೆಯಲಿ.

ಸೂರ್ಯ, ಹೂವಿನಹಡಗಲಿ, ಬಳ್ಳಾರಿ

ಮನೋಭಾವ ಬದಲಾಗಲಿ



ಕ್ರೀಡೆ ಪ್ರೋತ್ಸಾಹಿಸುವ ಮನೋಭಾವ ಪೋಷಕರಲ್ಲಿ ಕಡಿಮೆಯಾಗಿದೆ. ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ವ ನೀಡುತ್ತಿರುವುದರಿಂದ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಕಡಿಮೆಯಾಗುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಕ್ರೀಡಾ ಸೌಲಭ್ಯ ಹಾಗೂ ಕ್ರೀಡಾ ತರಬೇತುದಾರರ ಕೊರತೆ ಈಗಲೂ ಇದೆ. ಇದರಿಂದ ಮಕ್ಕಳಲ್ಲಿ ಪ್ರಾಥಮಿಕ ಹಂತದಲ್ಲೇ ಕ್ರೀಡಾಸಕ್ತಿ ಕುಂದುತ್ತಿದೆ. ಬಜೆಟ್‌ನಲ್ಲಿ ಕ್ರೀಡೆಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಕ್ರೀಡಾಪಟುಗಳನ್ನು ದೇಶಕ್ಕೆ ಕೊಡುಗೆ ನೀಡಬೇಕು.

ದಿಲೀಪ್, ದಾವಣಗೆರೆ

ಅವಕಾಶಗಳು ಸಿಗುತ್ತಿಲ್ಲ



ವಿಶ್ವವಿದ್ಯಾಲಯಗಳಲ್ಲಿ ಕ್ರೀಡೆ ಸೊರಗಿರುವುದಕ್ಕೆ ನುರಿತ ತರಬೇತುದಾರರ ಕೊರತೆಯೇ ಮುಖ್ಯ ಕಾರಣ. ಕ್ರೀಡಾಪಟುಗಳು ಸರಿಯಾಗಿ ತರಬೇತಿ ಪಡೆಯಲು ಸಾಧ್ಯವಾಗುತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಯುವಕರು ಮಾದಕ ವ್ಯಸನಿಗಳಾಗುತ್ತಿದ್ದಾರೆ. ಉತ್ತಮ ಕ್ರೀಡಾಪಟುಗಳಿಗೆ ಅವಕಾಶ ದೊರೆಯುತ್ತಿಲ್ಲ. ಕೊನೆಗೆ ರಾಜಕೀಯಕ್ಕೆ ಇವರನ್ನು ಬಳಸಿಕೊಂಡು, ಜೀವನದ ದಿಕ್ಕು ತಪ್ಪಿಸಲಾಗುತ್ತಿದೆ. ಇವೆಲ್ಲ ನಿಲ್ಲಬೇಕು.

ವರದರಾಜನ್, ಅಬ್ಬಿಗೆರೆ, ಬೆಂಗಳೂರು

ಕ್ರೀಡೆಗೆ ಬೇಕಿದೆ ಬಲ




ಹಿಂದೆ ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಕ್ರೀಡಾಕೂಟಕ್ಕೆ ಹೆಚ್ಚಿನ ಸ್ಪರ್ಧೆ ಏರ್ಪಡುತ್ತಿತ್ತು. ದಿನಗಳು ಕಳೆದಂತೆ ಅದು ಕ್ಷೀಣಿಸುತ್ತಿದೆ. ಕ್ರೀಡೆಯಲ್ಲಿ ಹೆಚ್ಚು ಸಾಧನೆ ಮಾಡಿದವರಿಗೆ ಅನುದಾನ, ಉನ್ನತ ಹುದ್ದೆ ನೀಡಬೇಕು. ಪ್ರತಿಭೆಗಳನ್ನು ಗುರುತಿಸಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಪ್ರೋತ್ಸಾಹ ನೀಡಲು ಸರ್ಕಾರ ಮುಂದಾಗಲಿ.

ಚೆಲುವರಾಜು, ಕೊಳ್ಳೇಗಾಲ

ನಿಧನ ವಾರ್ತೆ

ರಾಜಶೇಖರ ಮನಸೂರ



ಧಾರವಾಡ: ಹಿರಿಯ ಗಾಯಕ ಹಾಗೂ ಪ್ರಾಧ್ಯಾಪಕ ಡಾ. ರಾಜಶೇಖರ ಮನಸೂರ (79) ಅವರು ಭಾನುವಾರ ಬೆಂಗಳೂರಿನಲ್ಲಿ ನಿಧನರಾದರು.

ಅವರಿಗೆ ಪತ್ನಿ ಹಾಗೂ ಮೂವರು ಪುತ್ರಿಯರು ಇದ್ದಾರೆ. ಪಂ. ಮಲ್ಲಿಕಾರ್ಜುನ ಮನಸೂರ ಅವರ ಪುತ್ರ ಡಾ. ರಾಜಶೇಖರ ಮನಸೂರ ಅವರು ಜೈಪುರ ಅತ್ರೋಲಿ ಘರಾಣೆ ಸಂಗೀತದ ಮೇರು ಗಾಯಕರಾಗಿದ್ದರು. ಇಂಗ್ಲೆಂಡ್‌ನಲ್ಲಿ ಶಿಕ್ಷಣ ಪೂರೈಸಿ ಕರ್ನಾಟಕ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿ ನಿವೃತ್ತರಾಗಿದ್ದರು.

ಆಲ್ ಇಂಡಿಯಾ ರೇಡಿಯೊದ ಉನ್ನತ ಶ್ರೇಣಿಯ ಕಲಾವಿದರಾಗಿದ್ದ ಇವರು ಬಹಳಷ್ಟು ಪ್ರಮುಖ ವೇದಿಕೆಯಲ್ಲಿ ಕಛೇರಿ ನೀಡಿದ್ದಾರೆ. ಇವರ ಗಾಯನದ ಧ್ವನಿಮುದ್ರಿಕೆಗಳನ್ನು ಭೋಪಾಲ್‌ನಲ್ಲಿರುವ ಇಂದಿರಾಗಾಂಧಿ ರಾಷ್ಟ್ರೀಯ ಮನುಕುಲ ಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಗಳು ಸಂದಿವೆ. ಸಂಜೆ ಬೆಂಗಳೂರಿನಲ್ಲಿ ಅಂತ್ಯಕ್ರಿಯೆ ನಡೆಯಿತು.



> ನಿಮಗೆ ಇಷ್ಟವಾದ ಕೋರ್ಸ್ ಆಯ್ಕೆ ಮಾಡಿಕೊಂಡ ಕೂಡಲೇ ಯಶಸ್ಸು ಸಿಗುವುದಿಲ್ಲ. ಅದನ್ನು ಅತ್ಯುತ್ತಮವಾಗಿ ನಿರ್ವಹಣೆ ಮಾಡಿದರೆ ಮಾತ್ರ ಗೆಲುವು ನಿಮ್ಮದಾಗುತ್ತದೆ. ಹಾಗಾಗಿ ಎಸ್ಸೆಸ್ಸೆಲ್ಸಿ ನಂತರ ಯಾವ ಕೋರ್ಸ್ ಅನ್ನು ಅತ್ಯುತ್ತಮವಾಗಿ ನಿರ್ವಹಿಸಲು ಸಾಧ್ಯವೋ ಅದನ್ನೇ ಆರಿಸಿಕೊಳ್ಳಬೇಕು.

ಎಸ್ಸೆಸ್ಸೆಲ್ಸಿ ನಂತರ ಸೈನ್ಸಾ, ಆರ್ಟ್ಸಾ, ಕಾಮರ್ಸಾ?



ಅರವಿಂದ ಚೊಕ್ಕಾಡಿ

'ಹತ್ತನೇ ಕ್ಲಾಸ್ ಮುಗಿಯಿತು. ಮುಂದೆ ಯಾವ ಕೋರ್ಸ್‌ಗೆ ಸೇರಬೇಕು. ಆರ್ಟ್ಸಾ.. ಸೈನ್ಸಾ.. ಕಾಮರ್ಸಾ.. ಡಿಪ್ಲೊಮಾನಾ, ಐಟಿಐಗೆ ಸೇರೋದಾ' – ಇವು ಅನೇಕ ವಿದ್ಯಾರ್ಥಿಗಳು, ಪೋಷಕರಲ್ಲಿ ಕಾಡುತ್ತಿರುವ ಪ್ರಶ್ನೆಗಳು. ಫಲಿತಾಂಶ ಬರುವುದಕ್ಕೆ ಮುನ್ನ ಮಕ್ಕಳನ್ನು ಇಂಥ ಕೋರ್ಸ್‌ಗೆ ಸೇರಿಸಬೇಕೆಂದುಕೊಂಡಿದ್ದ ಪೋಷಕರು, ಒಮ್ಮೊಮ್ಮೆ ಫಲಿತಾಂಶದ ನಂತರದಲ್ಲಿ ಅಂಕಗಳನ್ನು ನೋಡಿದ ಮೇಲೆ ತಮ್ಮ ಯೋಚನೆಯನ್ನೇ ಬದಲಿಸಿಕೊಳ್ಳುತ್ತಾರೆ.

ಏನೇ ಆಗಲಿ, ಯಾರೇ ಸಲಹೆ ನೀಡಲಿ, ಅಂತಿಮವಾಗಿ ಕೋರ್ಸ್‌ನ ಆಯ್ಕೆ ವಿದ್ಯಾರ್ಥಿಯದ್ದೇ ಆಗಿರಬೇಕು. ಒಬ್ಬ ವಿದ್ಯಾರ್ಥಿಯ ಸಂದರ್ಶನವನ್ನು ಮಾಡಿದ ನಂತರ ಈ ವಿದ್ಯಾರ್ಥಿಗೆ ಈ ಕೋರ್ಸ್ ಆದೀತು ಎನ್ನಬಹುದೇ ಹೊರತು ವಿದ್ಯಾರ್ಥಿ ಯಾರೆಂದೇ ಗೊತ್ತಿಲ್ಲದೆ ಎಲ್ಲರಿಗೂ ಅನ್ವಯವಾಗುವಂತೆ ಸಲಹೆ ನೀಡಲು ಬರುವುದಿಲ್ಲ. ಆದರೆ ಯಾವ ವಿಧಾನದಲ್ಲಿ ಕೋರ್ಸ್ ಆಯ್ಕೆ ಮಾಡಿಕೊಳ್ಳಬೇಕು ಎಂದು ತಿಳಿಸಬಹುದು.

ಆದ್ಯತೆಯನ್ನು ಗಮನಿಸಿ

ಮೊದಲಿಗೆ ಮಕ್ಕಳ ಆದ್ಯತೆಯನ್ನು ಗಮನಿಸಬೇಕು. ಕೆಲವು ಕುಟುಂಬಗಳಲ್ಲಿ ಮಕ್ಕಳು ಆದಷ್ಟು ಬೇಗ ಉದ್ಯೋಗಕ್ಕೆ ಸೇರಬೇಕಾದ ಅನಿವಾರ್ಯತೆ ಇರುತ್ತದೆ. ಮಕ್ಕಳು ಇದಕ್ಕೆ ಒಪ್ಪದಿದ್ದರೆ ಜೀವನ ನಡೆಸಲಿಕ್ಕೇ ಸಾಧ್ಯವಿಲ್ಲ ಎನ್ನುವಂತಹ ಪರಿಸ್ಥಿತಿ ಇರುತ್ತದೆ. ಬೇಗನೆ ಉದ್ಯೋಗಕ್ಕೆ ಸೇರುವುದು ಮಕ್ಕಳ ವಿಕಾಸದ ದೃಷ್ಟಿಯಿಂದ ಸರಿಯಲ್ಲದಿದ್ದರೂ, ಕುಟುಂಬದ ಅಗತ್ಯಕ್ಕಾದರೂ ಅವರು ಸ್ಪಂದಿಸಬೇಕಾಗುತ್ತದೆ. ಆಗ ತಕ್ಷಣದ ಅಗತ್ಯವನ್ನು ಪೂರೈಸಿದ ಬಳಿಕ ವಿದ್ಯಾರ್ಥಿಯ ಆಸಕ್ತಿಯ ಕೋರ್ಸ್ ಅನ್ನು ಬದಲಿ ವ್ಯವಸ್ಥೆಗಳ ಮೂಲಕ ಮಾಡಿಕೊಳ್ಳಬೇಕು.

ಈ ಒಂದು ಸನ್ನಿವೇಶವನ್ನು ಹೊರತುಪಡಿಸಿದರೆ ಮಕ್ಕಳ ಆಸಕ್ತಿಗಳಿಗೆ ಪಾಲಕರು ಸ್ಪಂದಿಸಬೇಕು. ಆದರೆ, ಅವರ ಮೇಲೆ ಒತ್ತಡ ಹೇರಬಾರದು. ಏಕೆಂದರೆ ಪ್ರಕೃತಿ ಧರ್ಮದ ಪ್ರಕಾರ ಮಕ್ಕಳು ಇರುವಷ್ಟು ಕಾಲ ಪಾಲಕರು ಇರುವುದಿಲ್ಲ. ತಾವೇ ಇಲ್ಲದ ಜಗತ್ತಿನಲ್ಲಿ ಬದುಕಬೇಕಾದ ಮಕ್ಕಳ ಮೇಲೆ ತಮ್ಮ ಆಯ್ಕೆಯನ್ನು ಪಾಲಕರು ಹಾಕಬಾರದು. ಜವಾಬ್ದಾರಿ ಮಕ್ಕಳದ್ದಾಗಿರಬೇಕು. ಆಗ ಪಾಲಕರ ಅವಲಂಬನೆಯಿಂದ ಮಕ್ಕಳು ಸ್ವತಂತ್ರರಾಗುತ್ತಾರೆ.

ಆಸಕ್ತಿಯೂ ಮುಖ್ಯ

ವಿದ್ಯಾರ್ಥಿಗಳು ತಾವು ಮುಂದೆ ಏನಾಗಬೇಕು ಎಂದು ನಿರ್ಧರಿಸಿರುತ್ತಾರೋ, ಅದೇ ಕೋರ್ಸ್ ಆಯ್ಕೆಗೆ ಇರಬೇಕಾದ ಒಂದು ಮಾನದಂಡ. ಆದರೆ ಕೆಲವೊಂದು ಸಂದರ್ಭದಲ್ಲಿ ವಿದ್ಯಾರ್ಥಿಗಳು ತಾವು ಮುಂದೆ ಏನಾಗಬೇಕು ಎಂದುಕೊಳ್ಳುವುದು ಭಾವನಾತ್ಮಕವಿರುತ್ತದೆ. ನಿರ್ಧಾರಕ್ಕೆ ವೈಚಾರಿಕ ಸ್ಪಷ್ಟತೆ ಇಲ್ಲ. ಉದಾಹರಣೆಗೆ ವಿದ್ಯಾರ್ಥಿ ತಾನು ಡಾಕ್ಟರ್ ಆಗಬೇಕು ಎಂದುಕೊಳ್ಳುತ್ತಾನೆ/ಳೆ. ಆದರೆ ಡಾಕ್ಟರ್ ಆಗಲು ಏನನ್ನು, ಎಷ್ಟು ವರ್ಷ ಓದಬೇಕು ಎಂಬ ಕಲ್ಪನೆಯೇ ಇರುವುದಿಲ್ಲ. ಈ ರೀತಿ ಮಾಡಿಕೊಳ್ಳುವ ಆಯ್ಕೆಗಳು ಕೋರ್ಸ್ ಅನ್ನು ಆರಿಸಿಕೊಳ್ಳಲು ಇರುವ ಮಾನದಂಡವಾಗುವುದಿಲ್ಲ. ಇಂಥದ್ದನ್ನು ಓದಿದರೆ, ಇಂಥ ವೃತ್ತಿಗೆ ಸೇರಬಹುದು ಎಂಬ ಸ್ಪಷ್ಟತೆಯೊಂದಿಗೆ ಕೋರ್ಸ್ ಆಯ್ಕೆ ಮಾಡಿಕೊಂಡಿದ್ದರೆ ಆಗ ಓದಿನ ಆಸಕ್ತಿಯೂ ಮಾನದಂಡವಾಗಿರುತ್ತದೆ.

ಕಲಿಕಾ ವಿಷಯ

ಕಲಿಕಾ ವಿಷಯದ ಮೇಲೆ ಮೂರು ಕಾರಣಗಳಿಂದ ಆಸಕ್ತಿ ಇಲ್ಲವಾಗುತ್ತದೆ.

1 ಬೋಧಿಸುವ ಅಧ್ಯಾಪಕರ ಬೋಧನಾ ಕೌಶಲದ ಕೊರತೆಯ ಕಾರಣದಿಂದ. ಈ ಕಾರಣದಿಂದ ಕಲಿಕಾ ವಿಷಯದ ಮೇಲೆ ಆಸಕ್ತಿ ಹೊರಟು ಹೋಗಿದ್ದರೆ ಯಾವ ವೃತ್ತಿಯ ಬಗ್ಗೆ ಆಸಕ್ತಿ ಇದೆಯೊ ಅದಕ್ಕೆ ಸೂಕ್ತವಾದ ಕೋರ್ಸ್ ಅನ್ನು ಆಯ್ಕೆ ಮಾಡಿಕೊಳ್ಳಿ. ವಿದ್ಯಾಸಂಸ್ಥೆಯ ಸನ್ನಿವೇಶ ಮತ್ತು ಬೋಧಕರು ಬದಲಾದಾಗ ಕಲಿಕಾ ವಿಷಯವೂ ಆಸಕ್ತಿದಾಯಕವಾಗುತ್ತದೆ.

2 ಕಲಿಕಾ ವಿಷಯದಲ್ಲಿ ವಿದ್ಯಾರ್ಥಿಗಳು ಗಂಭೀರವಾಗಿ ತೊಡಗಿಕೊಳ್ಳದೆ ಇರುವುದರಿಂದಲೂ ಬಯಸಿದ ವೃತ್ತಿಗೆ ಪೂರಕವಾದ ವಿಷಯದ ಕಲಿಕೆಗೆ ಆಸಕ್ತಿ ಇಲ್ಲವಾಗುತ್ತದೆ. ಈ ವಿಷಯ ಕಷ್ಟ ಎನಿಸುತ್ತದೆ. ಎಸ್ಸೆಸ್ಸೆಲ್ಸಿ ಹಂತದಲ್ಲಿ ಹುಡುಗತನದ ಪ್ರವೃತ್ತಿ ಇರುವುದರಿಂದ ವಿಷಯವನ್ನು ಲಘುವಾಗಿ ತೆಗೆದುಕೊಂಡದ್ದರ ಪರಿಣಾಮವಾಗಿ ವಿಷಯ ಕಷ್ಟ ಎನಿಸುವುದು ಇದೆ. ಇದು ಕಾರಣವಾಗಿದ್ದಾಗಲೂ ಬಯಸಿದ ವೃತ್ತಿಗೆ ಪೂರಕವಾದ ಕಲಿಕಾ ವಿಷಯದ ಕೋರ್ಸ್ ಅನ್ನೇ ತೆಗೆದುಕೊಳ್ಳಬೇಕು. ವಿಷಯದಲ್ಲಿ ಗಂಭೀರವಾಗಿ ತೊಡಗಿಕೊಂಡಂತೆಲ್ಲ ಕಲಿಕಾ ಕಷ್ಟಗಳು ನಿವಾರಣೆಯಾಗುತ್ತವೆ.

3 ವಿದ್ಯಾರ್ಥಿಯ ವ್ಯಕ್ತಿತ್ವವೇ ನಿರ್ದಿಷ್ಟ ಕಲಿಕಾ ವಿಷಯಕ್ಕೆ ಹೊಂದಾಣಿಕೆಯಾಗದೆ 'ಕಷ್ಟ' ಎನಿಸುವುದು. ಕೆಲವೊಮ್ಮೆ ಗಣಿತ, ವಿಜ್ಞಾನ ಶಾಖೆಗಳು ಸುಲಭವಾಗುವವರಿಗೆ ಮಾನವಿಕಗಳು (Humanities) ಮತ್ತು ಭಾಷಿಕಗಳು (Languages) ಕಷ್ಟವಾಗುವುದು, ಮಾನವಿಕಗಳು ಮತ್ತು ಭಾಷಿಕಗಳು ಸುಲಭವಾಗುವವರಿಗೆ ವಿಜ್ಞಾನ ಮತ್ತು ಗಣಿತಗಳು ಕಷ್ಟವಾಗುವುದು ಇರುತ್ತದೆ. ಇದು ವ್ಯಕ್ತಿತ್ವದ ಲಕ್ಷಣ. ಇಂತಹ ಸಂದರ್ಭದಲ್ಲಿ ವೃತ್ತಿಯ ಆಯ್ಕೆಯನ್ನೇ ಬದಲಿಸಿಕೊಳ್ಳಬೇಕು. ಇಲ್ಲದಿದ್ದರೆ ಮಾನವಿಕಗಳನ್ನು ತೆಗೆದುಕೊಂಡು ಶೇ 95 ಅಂಕ ಪಡೆಯಬಲ್ಲವನು, ವಿಜ್ಞಾನ ತೆಗೆದುಕೊಂಡು ಶೇ 38 ಅಂಕ ಪಡೆದಂತಾಗುವ ಪರಿಸ್ಥಿತಿ ಬರುತ್ತದೆ. ಯಶಸ್ಸು ಸಿಗುವುದು ಕೋರ್ಸ್ ಅಥವಾ ನಿರ್ದಿಷ್ಟ ವೃತ್ತಿಯಿಂದಾಗಿ ಅಲ್ಲ. ಕೋರ್ಸ್ ಮತ್ತು ವೃತ್ತಿಯನ್ನು ಅತ್ಯುತ್ತಮವಾಗಿಯೇ ನಿರ್ವಹಿಸಿದಾಗ. ಆದ್ದರಿಂದ ಯಾವುದನ್ನು ಅತ್ಯುತ್ತಮವಾಗಿಯೇ ನಿರ್ವಹಿಸಲು ಆಗುತ್ತದೆಯೋ ಅದನ್ನೆ ಆರಿಸಿಕೊಳ್ಳಬೇಕು.

ವ್ಯಕ್ತಿತ್ವದ ಪ್ರವೃತ್ತಿ ಮತ್ತು ಆಸಕ್ತಿ

ಆಸಕ್ತಿಯ ಹಿಂದೆ ಇನ್ನೆರಡು ಅಂಶಗಳಿವೆ. ಕೆಲವರಿಗೆ ತಾವು ಬಯಸಿದ ವೃತ್ತಿಯ ಆಸಕ್ತಿ ಇರುತ್ತದೆ. ಆದರೆ ಆ ವೃತ್ತಿಗಾಗಿ ಓದಬೇಕಾದ ವಿಷಯಗಳ ಬಗ್ಗೆ ಆಸಕ್ತಿ ಇರುವುದಿಲ್ಲ. ಇನ್ನು ಕೆಲವರಿಗೆ ಕಲಿಕಾ ವಿಷಯಗಳ ಬಗ್ಗೆ ಆಸಕ್ತಿ ಇರುತ್ತದೆ. ಅದರಿಂದ ಸಿಗುವ ವೃತ್ತಿಯ ಬಗ್ಗೆ ಆಸಕ್ತಿ ಇರುವುದಿಲ್ಲ.

ನಿಮಗೆ ಯಾವುದು ಸೂಕ್ತ ಎಂದು ಕಂಡು ಹಿಡಿಯಲು ಯಾರೂ ಬೇಡ. ನೀವೇ ಸಾಕು. ಕಲಿಕಾ ವಿಷಯದ ಬಗ್ಗೆ ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯ ಹಾಗೂ ನಿಮ್ಮ ಆಕಾಂಕ್ಷೆಯ ಬಗ್ಗೆ ನೀವೇ ಯೋಚಿಸಿ. ಯಾವುದು ಸೂಕ್ತ ಎಂದು ನಿಮಗೇ ಹೊಳೆಯುತ್ತದೆ. ಜೊತೆಗೆ, ಅವಶ್ಯವಾಗಿ ಹಿರಿಯರ ಸಲಹೆ ಪಡೆಯಿರಿ. ಆದರೆ ಒಮ್ಮೆ ಮಾಡಿದ ಆಯ್ಕೆಯ ಬಗ್ಗೆ ನಂತರ ಸರಿಯೋ ತಪ್ಪೋ ಎನಿಸಬಾರದು. ಅದರಲ್ಲೆ ಮುಂದುವರಿಯಬೇಕು. ಆಗ ಯಶಸ್ಸು ಸಾಧ್ಯ.

ಆಕಾಶದಲ್ಲಿನ ವಿಸ್ಮಯ ನೋಡೋಣ ಬನ್ನಿ

ಎಚ್.ಎಸ್.ಟಿ.ಸ್ವಾಮಿ

ಬಾಹ್ಯಾಕಾಶ ಯಾವಾಗಲೂ ಆಶ್ಚರ್ಯದ ಆಗರ. ನಮಗೆ ಕಾಣುವ ಹಗಲಿನ ಆಕಾಶಕ್ಕೆ ಸೂರ್ಯನೊಬ್ಬನೇ ಅಧಿಪತಿ. ಇನ್ನು ರಾತ್ರಿ ವೇಳೆ ನಕ್ಷತ್ರಗಳು, ಗ್ರಹಗಳು, ಉಲ್ಕೆಗಳು, ಗೆಲಾಕ್ಸಿಗಳು, ನೆಬ್ಯುಲಾಗಳು, ಕೃತಕ ಉಪಗ್ರಹಗಳದ್ದೇ ಸಾಮ್ರಾಜ್ಯ. ಬರಿಗಣ್ಣಿಗೆ ಕಾಣುವ ನಕ್ಷತ್ರಗಳ ನೋಟವಂತೂ ಕಣ್ಣುಗಳು ಮತ್ತು ಮನಸ್ಸಿಗೆ ಮುದನೀಡುತ್ತವೆ.

ಒಮ್ಮೊಮ್ಮೆ ನಸುಕಿನ ವೇಳೆ ಆಕಾಶದಲ್ಲಿ ನಮ್ಮನ್ನು ಅಚ್ಚರಿಗೊಳಿಸುವ ವಿದ್ಯಮಾನಗಳು ನಡೆಯುತ್ತಿರುತ್ತವೆ. ಅಂಥ ಅಪರೂಪದ ಘಟನೆಯೊಂದು ಕಳೆದ ಒಂದು ವಾರದಿಂದ ನೀಲಾಕಾಶದಲ್ಲಿ ನಡೆಯುತ್ತಿದೆ.

ಬಹಳ ವರ್ಷಗಳ ನಂತರ ಸೌರವ್ಯೂಹದ 8 ಗ್ರಹಗಳಲ್ಲಿ (ಭೂಮಿಯನ್ನು ಬಿಟ್ಟು), ನಾಲ್ಕು ಗ್ರಹಗಳು ಬರಿಗಣ್ಣಿಗೆ ಕಾಣುತ್ತಿವೆ. ಮುಂಜಾನೆ 5 ಗಂಟೆಯ ಸುಮಾರಿಗೆ ದಿಗಂತದಿಂದ ಅತ್ಯಂತ ದೊಡ್ಡಗ್ರಹ ಗುರು, ನಂತರ ಶುಕ್ರಗ್ರಹ, ಪಕ್ಕದಲ್ಲಿ ಎಳೆಯ ಚಂದಿರ, ತುಸು ಮೇಲೆ ಕೆಂಬಣ್ಣದ ಮಂಗಳಗ್ರಹ ಹಾಗೂ ನಯನ ಮನೋಹರವಾದ ಶನಿ ಗ್ರಹಗಳು ಏಕರೇಖೆಯಲ್ಲಿ ಮೆರವಣಿಗೆ ಹೊರಟಂತೆ ಗೋಚರಿಸುತ್ತಿವೆ. ಇದೇ ಆ ವಿಶೇಷ ವಿದ್ಯಮಾನ.

ಏಪ್ರಿಲ್ 2ರಿಂದಲೇ ಈ ಗ್ರಹಗಳು ಬರಿಗಣ್ಣಿಗೆ ಕಾಣುತ್ತಿದ್ದವು. ಏಪ್ರಿಲ್ 24 ರಿಂದ 30ರವರೆಗೆ ಇನ್ನಷ್ಟು ಸ್ಪಷ್ಟವಾಗಿ ಕಾಣುತ್ತಿದ್ದವು. ದೃಷ್ಟಿ ಚುರುಕಾಗಿದ್ದವರಿಗೆ ಎತ್ತರದ ಪ್ರದೇಶದಿಂದ ಬುಧ ಗ್ರಹವನ್ನೂ ನೋಡುವ ಅವಕಾಶವಿತ್ತು. ಬೆಳಕು ಹೆಚ್ಚಾದಂತೆ ಈ ಗ್ರಹಗಳು ಕಾಣುತ್ತಿರಲಿಲ್ಲ. ಸೂರ್ಯನ ಪ್ರಕಾಶದಲ್ಲಿ ಶನಿಗ್ರಹ ಮತ್ತು ಮಂಗಳ ಗ್ರಹಗಳು ಮಸುಕಾಗುತ್ತವೆ.

ಮೇ 2 ರ ನಂತರವೂ ಈ ಗ್ರಹಗಳನ್ನು ಬರಿಗಣ್ಣಿನಲ್ಲಿ ನೋಡಬಹುದು. ರಾತ್ರಿ 2 ರಿಂದ ನಸುಕಿನ 4 ಗಂಟೆ ಸಮಯದಲ್ಲಿ ಈ ಗ್ರಹಗಳು ಕಾಣುತ್ತವೆ. ಬೈನಾಕ್ಯುಲರ್ ಇಲ್ಲವೇ ಅಧಿಕ ಸಾಮರ್ಥ್ಯದ ದೂರದರ್ಶಕವಿದ್ದರೆ (ಮೋಡಗಳಿಲ್ಲದ ವಾತಾವರಣವಿದ್ದರೆ) ಗುರುಗ್ರಹದ ನಾಲ್ಕು ಉಪ ಗ್ರಹಗಳಾದ ಐಯೋ, ಕ್ಯಾಲಿಸ್ಟೊ, ಯುರೋಪಾ ಮತ್ತು ಗ್ಯಾನಿಮೇಡ್‌ಗಳನ್ನೂ ನೋಡಿ ಆನಂದಿಸಬಹುದು. ಈ ರೀತಿಯ ಗ್ರಹಗಳ ಮೆರವಣಿಗೆ ಪ್ರತಿ 19 ವರ್ಷಗಳಿಗೊಮ್ಮೆ ನಡೆಯುತ್ತದೆ.

ರಾತ್ರಿಯ ಮತ್ತು ನಸುಕಿನ ಆಕಾಶವೀಕ್ಷಣೆ ನಿಜಕ್ಕೂ ಮನಸ್ಸಿಗೆ ಮುದನೀಡುತ್ತದೆ. ನೀವೂ ನೋಡಿ, ಮಕ್ಕಳಿಗೂ ತೋರಿಸುವ ಮೂಲಕ ವೈಜ್ಞಾನಿಕ ಪ್ರಜ್ಞೆ ರೂಪಿಸಿಕೊಳ್ಳಿ.



ಏಪ್ರಿಲ್ 27ರಂದು ಬಾನಂಗಳದಲ್ಲಿ ಬರಿಗಣ್ಣಿಗೆ ಕಂಡ ಗ್ರಹಗಳು ಕಂಡಿದ್ದು ಹೀಗೆ...

ಪಿಯುಸಿ (ವಿಜ್ಞಾನ) ನಂತರ ಮುಂದೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್
EducationalExpertManagementCareerConsultant

1. ನಾನು ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಚೆನ್ನಾಗಿ ಬರೆದಿದ್ದೇನೆ ಎಂಬ ನಂಬಿಕೆ ಇದೆ. ಮುಂದೆ ಪಿಯುಸಿ ವಿಜ್ಞಾನ (ಪಿಸಿಎಂಬಿ) ಆಯ್ಕೆಮಾಡಿಕೊಳ್ಳುತ್ತೇನೆ. ಪಿಯುಸಿ ನಂತರದ ಕೋರ್ಸ್ ಅವಕಾಶಗಳ ಬಗ್ಗೆ ತಿಳಿಸಿಕೊಡಿ.

ವಿವೇಕ್ ವೈಭವ್ ಎ, ಊರು ತಿಳಿಸಿಲ್ಲ

ನಿಮಗೆ ಆಸಕ್ತಿಯಿರುವ, ಇಷ್ಟವಿರುವ, ಸ್ವಾಭಾವಿಕ ಪ್ರತಿಭೆಯಿರುವ ವೃತ್ತಿಯನ್ನು ಆಯ್ಕೆ ಮಾಡಿಕೊಂಡು, ಅದಕ್ಕೆ ಅನುಗುಣವಾಗಿ ಕೋರ್ಸ್ ಮಾಡಬೇಕು. ಹಾಗಾಗಿ, ವೃತ್ತಿ ಯೋಜನೆಯನ್ನು ಮಾಡದೆ ಕೋರ್ಸ್ ಆಯ್ಕೆ ಸಮಂಜಸವಲ್ಲ. ಪಿಯುಸಿ ನಂತರ ನೀವು ಮಾಡಬಹುದಾದ ಕೆಲವು ಪ್ರಮುಖ ಕೋರ್ಸ್‌ಗಳೆಂದರೆ ಎಂಬಿಬಿಎಸ್, ಬಿಇ/ಬಿಟೆಕ್, ಬಿಎಸ್‌ಸಿ (ವಿಜ್ಞಾನ, ಕೃಷಿ ಸಂಬಂಧಿತ, ಬಯೋಟೆಕ್, ಪ್ಯಾರಾ ಮೆಡಿಕಲ್, ಫ್ಯಾಷನ್ ಡಿಸೈನ್, ಫೋರೆನ್ಸಿಕ್ ಇತ್ಯಾದಿ), ಬಿವಿಎಸ್‌ಸಿ, ಬಿಬಿಎ, ಸಿಎ, ಎಸಿಎಸ್ ಸೇರಿದಂತೆ ವೈವಿಧ್ಯಮಯ ಕೋರ್ಸ್ ಆಯ್ಕೆಗಳಿವೆ. ಪಿಯುಸಿ ನಂತರದ ಕೋರ್ಸ್ ಆಯ್ಕೆಗಳ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:

https://www.youtube.com/c/

2. ನಾನು ಕಳೆದ ಅಕ್ಟೋಬರ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪೂರ್ಣಗೊಳಿಸಿರುವೆ. ಈಗ, ನನಗೆ ಖಾಸಗಿ ಕಂಪನಿಗಳಲ್ಲಿ ಅವಕಾಶ ಸಿಕ್ಕರೂ ಉದ್ಯೋಗಕ್ಕೆ ಸೇರಲು ಇಷ್ಟವಿಲ್ಲ. ಏಕೆಂದರೆ, ನಾನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿರುವೆ. ನನ್ನ ಈ ನಿರ್ಧಾರ ಸರಿಯೇ ಅಥವಾ ತಪ್ಪೇ?

ವೇಣುಗೋಪಾಲ ಬಿ, ಊರು ತಿಳಿಸಿಲ್ಲ

ಇತ್ತೀಚಿನ ವರ್ಷಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸುವವರ ಸಂಖ್ಯೆ ಹೆಚ್ಚಾಗುತ್ತಿದ್ದು ಪೈಪೋಟಿ ತೀಕ್ಷ್ಮವಾಗಿದೆ ಹಾಗೂ ಕೆಲವು ಪ್ರತಿಷ್ಠಿತ ಸ್ಪರ್ಧಾತ್ಮಕ ಪರೀಕ್ಷೆಗಳ ಯಶಸ್ಸಿಗೆ ಏಕಾಗ್ರತೆ, ಸಮಯದ ನಿರ್ವಹಣೆ ಮತ್ತು ನಿರಂತರ ಪರಿಶ್ರಮದ ಅಗತ್ಯವಿದ್ದು, ಉದ್ಯೋಗದಲ್ಲಿದ್ದರೆ ನಿಭಾಯಿಸುವುದು ಕಷ್ಟವಾಗಬಹುದು.

ನೀವು ತಯಾರಾಗುತ್ತಿರುವ ಸ್ಪರ್ಧಾತ್ಮಕ ಪರೀಕ್ಷೆಗಳ ಹಂತಗಳು, ಮಾದರಿ, ಪಠ್ಯಕ್ರಮ, ಪ್ರಶ್ನೆಪತ್ರಿಕೆಗಳ ಸ್ವರೂಪ, ಅಧ್ಯಯನದ ಪುಸ್ತಕಗಳ ಪಟ್ಟಿ, ಗುಂಪು ಚರ್ಚೆ, ವೈಯಕ್ತಿಕ ಸಂದರ್ಶನ ಇತ್ಯಾದಿಗಳನ್ನು ಅರಿತು ನಿಮ್ಮ ಸಾಮರ್ಥ್ಯ, ದೌರ್ಬಲ್ಯಗಳನ್ನು ಗುರುತಿಸಿ, ಸೂಕ್ತವಾದ ಕಾರ್ಯತಂತ್ರವನ್ನು ರೂಪಿಸಬೇಕು. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ನಿಮಗಿರುವ ಅವಕಾಶಗಳು, ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು, ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವುದು ಒಳ್ಳೆಯದು.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಒತ್ತಡ ತಣಿಸುವ ಬಣ್ಣಗಳು...

> ಚಿತ್ರ ಬರೆಯುವುದು ಪುಟಾಣಿ ಮಕ್ಕಳಿಗಷ್ಟೇ ಸಂಬಂಧಿಸಿಲ್ಲ. ಹದಿವಯಸ್ಸಿನ ಪ್ರೌಢಶಾಲೆ, ಕಾಲೇಜು ಮಕ್ಕಳೂ ಬಣ್ಣಗಳೊಂದಿಗೆ ಚಿತ್ರ ಬರೆಯುವ ಹವ್ಯಾಸ ರೂಢಿಸಿಕೊಳ್ಳಬಹುದು. ಇದರಿಂದ ಮಾನಸಿಕ ಒತ್ತಡ ನಿವಾರಣೆಯಾಗುತ್ತದೆ. ಅಧ್ಯಯನ ಕಾರ್ಯವೂ ಚುರುಕಾಗುತ್ತದೆ.

ಲಕ್ಷ್ಮಿ

ಬಣ್ಣಗಳ ಬಗ್ಗೆ ಎಷ್ಟೊಂದು ಮೋಹವಿರುತ್ತದೆ ನಮಗೆ. ಲಕ್ಷೋಪಲಕ್ಷ ಬಣ್ಣಗಳನ್ನು ಬಿಂಬಿಸುವ ಪ್ರಕೃತಿಗಿಂತ ಬಣ್ಣಮಯವಾದ ಸಂಗತಿ ಮತ್ತೊಂದು ಇರಲಾರದೇನೋ. ಹಬ್ಬ, ಉತ್ಸವಗಳ ಸಂಭ್ರಮಗಳೆಂದರೆ ಬಣ್ಣ ಬಣ್ಣದ ಬಟ್ಟೆಗಳು, ಬಣ್ಣದ ಹೂವುಗಳು ನಮಗೆ ಬೇಕು. ವಿದ್ಯಾರ್ಥಿ ದೆಸೆಯಲ್ಲಿ ಬಣ್ಣಗಳಿಗೆ ಒಂದಿಷ್ಟು ಹೆಚ್ಚು ಆದ್ಯತೆ. ಪರೀಕ್ಷೆಗಳಿಗೆ ಓದಿಕೊಳ್ಳುವ ಸಮಯದಲ್ಲಿ, ನಿರಂತರ ತರಗತಿಗಳಿದ್ದಾಗ, ಅಸೈನ್‌ಮೆಂಟ್‌ಗಳಿದ್ದಾಗಲೂ ಈ ಬಣ್ಣಗಳು ವಿದ್ಯಾರ್ಥಿಗಳಿಗೆ ಸಹಕರಿಸುತ್ತವೆ ಎಂದರೆ ನಂಬುತ್ತೀರ.

ಹೌದು. ಬಣ್ಣಗಳು ವಿದ್ಯಾರ್ಥಿಗಳ ಮನಸ್ಸಿನ ಮೇಲಿರುವ ಒತ್ತಡವನ್ನು ಕಡಿಮೆ ಮಾಡಬಲ್ಲವು. ಬಣ್ಣಗಳನ್ನು ಬಳಸಿ ಚಿತ್ರಗಳನ್ನು ಬರೆಯುವ ಪ್ರಕ್ರಿಯೆಯನ್ನು ಮಿದುಳು ಒಂದು ಸಂತೋಷದ ಚಟುವಟಿಕೆಯನ್ನಾಗಿ ಸ್ವೀಕರಿಸುತ್ತದೆ. ಈ ಕುರಿತು ಅನೇಕ ಪ್ರಯೋಗಗಳು ನಡೆದಿವೆ. ಬಣ್ಣಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಮಾಡಿದ ಬಳಿಕ ಓದಿದ ವಿಚಾರಗಳನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಂಡು ಬರೆದಿರುವುದುಂಟು. ಅಂದರೆ ಅವರ ಏಕಾಗ್ರತೆಯ ಸಾಮರ್ಥ್ಯ ವೃದ್ಧಿಯಾದಂತಿತ್ತು. ಹಾಗಾಗಿ ವಿದ್ಯಾರ್ಥಿಗಳು ಬಣ್ಣಗಾರಿಕೆಯನ್ನು ಲಘುವಿಚಾರವೆಂದು ತಿಳಿಯಬೇಕಾಗಿಲ್ಲ. ನಿಮ್ಮ ಕಲಿಕಾ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಲು ಬಣ್ಣಗಳ ಜೊತೆಗೆ ಗೆಳೆತನ ಸಂಪಾದಿಸಿದರ ಲಾಭವಾಗಬಹುದು. 'ನಾನೊಬ್ಬ ಸಂಶೋಧನಾ ವಿದ್ಯಾರ್ಥಿಯಾಗಿದ್ದುಕೊಂಡು, ಪುಟದಲ್ಲಿ ಕಲರಿಂಗ್ ಮಾಡಿದರೆ ಸಿಲ್ಲಿಯಾಗಿರಬಹುದು' ಎಂಬ ಕೀಳರಿಮೆ ಬೆಳೆಸಿಕೊಳ್ಳದೇ, ಅದರಿಂದಾಗುವ ಕಲಿಕಾ ಲಾಭವನ್ನು ವಿದ್ಯಾರ್ಥಿಗಳು ಗುರುತಿಸಬಹುದು.

ಬಣ್ಣದ ಚಿತ್ರಗಳನ್ನು ಬರೆಯುವಾಗ ಮನಸ್ಸಿನಲ್ಲಿರುವ ಆತಂಕ ಕಡಿಮೆಯಾಗುವುದಷ್ಟೇ ಅಲ್ಲ, ಹೊಸ ವಿಚಾರವನ್ನು ಗ್ರಹಿಸುವುದಕ್ಕೆ ಮನಸ್ಸು ಕುತೂಹಲಿಯಾಗಿ ಸಿದ್ಧವಾಗಿರುತ್ತದೆ ಕೂಡ. ಜೊತೆಗೆ ಸೃಜನಶೀಲವಾಗಿ ಯೋಚನೆ ಮಾಡಲು ಸನ್ನದ್ಧ ಸ್ಥಿತಿಯಲ್ಲಿರುತ್ತದೆ.

ಚಿತ್ರಗಳು ಕಲಿಕೆಯನ್ನು ಹೇಗೆ ಉದ್ದೀಪಿಸುತ್ತವೆ ಎಂಬುದನ್ನು ಮಂಗಳೂರಿನ ಸ್ವರೂಪ ಅಧ್ಯಯನ ಕೇಂದ್ರದ ನಿರ್ದೇಶಕ ಗೋಪಾಡ್ಕರ್ ಅವರು ತಮ್ಮ ವಿದ್ಯಾರ್ಥಿಗಳಿಗೆ ತಿಳಿಸಿಕೊಡುತ್ತಾರೆ. ಅವರ ಪರಿಕಲ್ಪನೆಯ ಸ್ವರೂಪ ಅಧ್ಯಯನ ಕೇಂದ್ರದಲ್ಲಿ ವಿದ್ಯಾರ್ಥಿಗಳು ಚಿತ್ರಗಳನ್ನು ಆಧರಿಸಿಯೇ ಪ್ರಶ್ನೆಗಳಿಗೆ ಉತ್ತರಗಳನ್ನು ಸಿದ್ಧಪಡಿಸುತ್ತಾರೆ. 'ಅಕ್ಷರಗಳ ಮೂಲಕ ನೋಟ್ಸ್ ಮಾಡಿಕೊಳ್ಳುವುದಕ್ಕೆ ಬದಲಾಗಿ, ವಿದ್ಯಾರ್ಥಿಗಳು ಚಿತ್ರವೊಂದನ್ನು ರಚಿಸಿ, ಅದರ ಆಧಾರದಲ್ಲಿ ವಿಚಾರಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುತ್ತಾರೆ. ಈ ಪ್ರಕ್ರಿಯೆಯಲ್ಲಿ ಹಾಡುಗಳೂ ಬಣ್ಣಗಳೂ ಸೇರಿರುವುದರಿಂದ ಕಲಿಕೆಯು ಸುಲಭವಾಗುತ್ತದೆ. ಅಷ್ಟೇ ಅಲ್ಲ ವಿದ್ಯಾರ್ಥಿಗಳು ಖುಷಿಯಿಂದ ಕಲಿಯುತ್ತಾರೆ' ಎಂದು ಅವರು ಹೇಳುತ್ತಾರೆ.

ಅಂದರೆ ಶಿಶುವಿಹಾರಕ್ಕೆ ಹೋಗುತ್ತ, ಪ್ರಾಥಮಿಕ ತರಗತಿಗಳಲ್ಲಿ ಕಲಿಯುತ್ತ ಇರುವಾಗ, ಬಿಳಿ ಹಾಳೆಗಳ ಮೇಲೆ ಚಿತ್ರ ಬರೆಯುತ್ತ, ಅವುಗಳಿಗೆ ಬಣ್ಣ ತುಂಬುತ್ತ, ಕೈಯೆಲ್ಲಾ ರಂಗು ರಂಗಾಗಿಸಿಕೊಳ್ಳುತ್ತಾರೆ. ಆದರೆ ದೊಡ್ಡವರಾಗುತ್ತ ಅವರು ಅವುಗಳತ್ತ ಗಮನ ಹರಿಸುವುದನ್ನು ಕಡಿಮೆ ಮಾಡುತ್ತಾರೆ. ಪಾಠಗಳು, ಪ್ರಾಜೆಕ್ಟ್‌ಗಳು, ಪ್ರಶ್ನೋತ್ತರಗಳು, ರೆಕಾರ್ಡ್‌ಗಳು ಎಂಬುದಾಗಿ ಅಂಕಗಳ ಲೆಕ್ಕಾಚಾರಗಳಲ್ಲಿ ಮುಳುಗಿ ಹೋಗುತ್ತಾರೆ. ಗಂಭೀರವದನರಾಗಿಬಿಡುತ್ತಾರೆ.

ಆದ್ದರಿಂದ ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಬಣ್ಣದ ಚಿತ್ರಗಳನ್ನು ಬರೆಯುವ ತರಗತಿಗಳಿಗೆ ಸೇರಿಸಿಕೊಳ್ಳುವಂತೆ ಶಿಕ್ಷಣ ತಜ್ಞರು ಮತ್ತು ಮನಶ್ಶಾಸ್ತ್ರಜ್ಞರು ಸಲಹೆ ಮಾಡುತ್ತಿದ್ದಾರೆ. ತರಗತಿಯಲ್ಲಿ ಚಿತ್ರಕಲೆಯನ್ನು ಪಠ್ಯವನ್ನಾಗಿ ಬೋಧಿಸದೇ ಇದ್ದರೂ, ಅದನ್ನು ಹವ್ಯಾಸವನ್ನಾಗಿ ಮಕ್ಕಳು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವಷ್ಟರ ಮಟ್ಟಿಗೆ ಅವಕಾಶವನ್ನು ಕೊಡಬೇಕು.

ಚಿತ್ರ ಬರೆಯುವುದೇನಿದ್ದರೂ ಪುಟಾಣಿ ಮಕ್ಕಳಿಗೆ ಸಂಬಂಧಿಸಿದ ವಿಷಯ ಎಂಬ ಗ್ರಹಿಕೆ ನಮ್ಮಲ್ಲಿದೆ. ಪುಟ್ಟ ಮಕ್ಕಳಿಗಷ್ಟೇ ಬಣ್ಣದ ಪೆನ್ಸಿಲ್ ಗಿಫ್ಟ್ ಕೊಡುತ್ತಾರೆ. ಆದರೆ ದೊಡ್ಡವರೂ ಈ ಚಿತ್ರಗಳು ಮತ್ತು ಬಣ್ಣಗಳನ್ನು ಬಳಸಿ ಮನಸ್ಸನ್ನು ಹಗುರಾಗಿಸಿಕೊಳ್ಳಬಹುದು. ಹೆಚ್ಚಿನ ಅಧ್ಯಯನಕ್ಕೆ ತಮ್ಮ ಮನಸ್ಸನ್ನು ಸಿದ್ಧಮಾಡಿಕೊಳ್ಳಬಹುದು.

ಒಂದು ಪುಟದಲ್ಲಿ ಸುಖಾಸುಮ್ಮನೇ ಬಣ್ಣಗಳನ್ನು ತುಂಬುತ್ತಾ ಸಾಗುವುದು ಕೂಡ ಖುಷಿಕೊಡುವ ವಿಷಯ. ಬಣ್ಣಗಳ ಸಂಯೋಜನೆ ಹೇಗಿರಬೇಕು ಎಂದು ಕಲ್ಪಿಸುವುದು, ಹೊಸ ಹೊಸ ವಿನ್ಯಾಸಗಳ ಸಾಧ್ಯತೆಗಳನ್ನು ಅನ್ವೇಷಿಸುವುದು- ಮನಸ್ಸನ್ನು ಅರಳಿಸುವ ಪ್ರಕ್ರಿಯೆಯೇ ಆಗಿದೆ. ಆದ್ದರಿಂದ ಬಣ್ಣಗಳ ಜೊತೆಗಿನ ಆಟವು ನಿರ್ದಿಷ್ಟವಾಗಿ ಚಿತ್ರಕಲೆಯೇ ಆಗಬೇಕೆಂದೇನೂ ಇಲ್ಲ. ಆದರೆ ಸುಮ್ಮನೇ ಬಣ್ಣ ಬಳಿಯುತ್ತ ಕುಳಿತುಕೊಳ್ಳುವುದು ಬೋರ್ ಎನಿಸಬಹುದು. ಚಿತ್ರಗಳ ಔಟ್‌ಲೈನ್‌ಗಳಿರುವ ಪುಸ್ತಕಗಳು ಈ ಬಣ್ಣಗಾರಿಕೆಗೆ ಸಹಕಾರಿ ಆಗಬಹುದು. ಆದರೆ ಚಿತ್ರಕಲೆಯು ಇನ್ನಷ್ಟು ರಚನಾತ್ಮಕವಾಗಿರಬಹುದು ಎನಿಸುತ್ತದೆ.

ದೊಡ್ಡ ತರಗತಿಗಳಿಗೆ ತೆರಳುತ್ತಿದ್ದಂತೆಯೇ ಮಕ್ಕಳ ಮನಸ್ಸಿನಲ್ಲಿ ಒತ್ತಡ ಸೃಷ್ಟಿಯಾಗಲಾರಂಭಿಸುತ್ತದೆ. ಎಂಟನೇ ತರಗತಿಯಲ್ಲಿ ಚೆನ್ನಾಗಿ ಅಂಕಗಳನ್ನು ತೆಗೆದರೆ, ಹತ್ತನೇ ತರಗತಿಯ ಪ್ರಮುಖ ಘಟ್ಟಕ್ಕೆ ಒಂದು ಪೀಠಿಕೆಯಂತೆ ಒಂಬತ್ತನೇ ತರಗತಿಯನ್ನು ಪರಿಗಣಿಸಲಾಗುತ್ತದೆ. ಹಾಗಾಗಿ ಪ್ರೌಢಶಾಲಾ ತರಗತಿಗಳಲ್ಲಂತೂ ಮಕ್ಕಳ ಮನಸ್ಸಿನ ಮೇಲೆ ಒತ್ತಡ ಸೃಷ್ಟಿಯಾಗುವುದು ಸಹಜ. ಅಂತಹ ಸಂದರ್ಭಗಳಲ್ಲಿ ಈ ಬಣ್ಣದ ಸಹವಾಸ ಮಾಡುವುದರಿಂದ ತುಸು ಹೊತ್ತು ವಿಶ್ರಾಂತಿ ಪಡೆಯಬಹುದು.

ಬಣ್ಣಗಾರಿಕೆಯು ಮಕ್ಕಳ ಮನಸ್ಸಿನ ಒತ್ತಡವನ್ನು ನಿವಾರಿಸಬಲ್ಲುದಾದರೆ, ದೊಡ್ಡವರ ಮನಸ್ಸನ್ನೂ ಹಗುರಾಗಿಸುವುದು ಸಾಧ್ಯವಿಲ್ಲವೇ? ಖಂಡಿತಾ ಸಾಧ್ಯವಿದೆ. ದೊಡ್ಡವರಿಗಾಗಿಯೇ ಕಲರಿಂಗ್ ಬುಕ್‌ಗಳು ಇಂದು ಮಾರುಕಟ್ಟೆಯಲ್ಲಿ ಲಭ್ಯವಿವೆ. ಕಚೇರಿಗಳಲ್ಲಿ ನಿರಂತರ ಮೀಟಿಂಗ್‌ಗಳಲ್ಲಿ ಭಾಗವಹಿಸಿ, ಪ್ಲಾನಿಂಗ್ ಸೆಷನ್ ಗಳನ್ನು ನಿಭಾಯಿಸಿ, 'ಉಸ್ಸಪ್ಪಾ' ಎಂದು ಕುಳಿತುಕೊಂಡಾಗ ಟೇಬಲ್ ಮೇಲೆ ಕಲರಿಂಗ್ ಪ್ಯಾಡ್ ಕಾಣಿಸಿದರೆ ಒಂದಷ್ಟು ಹೊತ್ತು ಅದರೊಡನೆ ಆಟವಾಡುವುದು ಒಳ್ಳೆಯದು ಎಂದು ಮನಶ್ಶಾಸ್ತ್ರಜ್ಞರು ಸಲಹೆ ಮಾಡುವುದುಂಟು.





ವಿದ್ಯಾರ್ಥಿ ವೇತನ ಕೈಪಿಡಿ

ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ

2022ನೇ ಸಾಲಿನ ನೀಟ್ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳಿಸಿ ಎಂಬಿಬಿಎಸ್‌ನಲ್ಲಿ ಸರ್ಕಾರಿ ಸೀಟು ಗಳಿಸಿದ ಕುರುಬ ಸಮಾಜದ ವಿದ್ಯಾರ್ಥಿಗಳು ಈ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬಹುದು.

ಅರ್ಹತೆ: ದ್ವಿತೀಯ ಪಿಯುಸಿ ಹಾಗೂ ನೀಟ್ ಪರೀಕ್ಷೆಯ ಅಂಕಗಳನ್ನು ಆಧರಿಸಿ ವಿದ್ಯಾರ್ಥಿವೇತನ ನೀಡಲಾಗುತ್ತದೆ. ಕರ್ನಾಟಕ ಮೂಲದವರು ವಿದ್ಯಾರ್ಥಿವೇತನಕ್ಕೆ ಅರ್ಹರು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮೇ 7, 2022

ಹೆಚ್ಚಿನ ಮಾಹಿತಿಗೆ: ಬೆಂಗಳೂರು ಡಯಾಬಿಟಿಸ್ ಸೆಂಟರ್, ಬಿಡಿಸಿ, ಎಚ್‌ಆರ್‌ಬಿಆರ್, ನಂ.426, 4ನೇ ಅಡ್ಡರಸ್ತೆ, ಎಚ್‌ಆರ್‌ಬಿಆರ್, ಕಲ್ಯಾಣನಗರ, ಬೆಂಗಳೂರು. ಮೊ: 9141137382.

ಅರ್ಜಿ ಭರ್ತಿ ಮಾಡಲು https://bit.ly/3vOdzr6 ಈ ಲಿಂಕ್ ನೋಡಿ

ಆಕ್ಸ್‌ಫರ್ಡ್ ಅಂಡ್ ಕೇಂಬ್ರಿಜ್ ಸೊಸೈಟಿ ಆಫ್ ಇಂಡಿಯಾ ಸ್ಕಾಲರ್‌ಶಿಪ್, ಯುಕೆ 2022

ವಿವರ: ಆಕ್ಸ್‌ಫರ್ಡ್ ಅಂಡ್ ಕೇಂಬ್ರಿಜ್ ಸೊಸೈಟಿ ಆಫ್ ಇಂಡಿಯಾ ಸ್ಕಾಲರ್‌ಶಿಪ್ (ಓಸಿಎಸ್‌ಐ), ಯುಕೆ 2022, ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ಸೊಸೈಟಿ ಆಫ್ ಇಂಡಿಯಾ (ಓಸಿಎಸ್‌ಐ) ದಿಂದ ಯುಎಸ್ ಮತ್ತು ಯುಕೆಯಲ್ಲಿ ಪದವಿಪೂರ್ವ / ದ್ವಿತೀಯ ಪದವಿಪೂರ್ವ / ಪದವಿ ಮತ್ತು ಸಂಶೋಧನಾ ಅಧ್ಯಯನಗಳಿಗೆ ಅರ್ಜಿ ಸಲ್ಲಿಸುವ ಭಾರತೀಯ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿವೇತನವಾಗಿದೆ.

ಅರ್ಹತೆ: ಈ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿದ ವರ್ಷದ ಸೆಪ್ಟೆಂಬರ್ 1ಕ್ಕೆ ಅನುಗುಣವಾಗಿ 30 ವರ್ಷ ವಯಸ್ಸಾಗಿರಬೇಕು. ಕೇಂಬ್ರಿಜ್ ವಿಶ್ವವಿದ್ಯಾಲಯ ಅಥವಾ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ನಿಯಾನುಸಾರ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿ ಆಯ್ಕೆಯಾದ ವಿದ್ಯಾರ್ಥಿಗಳು ಈ ವಿದ್ಯಾರ್ಥವೇತನಕ್ಕೆ ಅರ್ಹರು.

ಆರ್ಥಿಕ ನೆರವು: ₹ 2 ಲಕ್ಷದವರೆಗೆ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮೇ 15, 2022

ಅರ್ಜಿ ಸಲ್ಲಿಕೆ ವಿಧಾನ: ಇಮೇಲ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/OCS7



❦ ಸುಭಾಷಿತ ❦
ಯಾರನ್ನಾದರೂ ಸೋಲಿಸುವುದು ತುಂಬಾ ಸುಲಭ, ಆದರೆ ಯಾರದಾದರೂ ಮನಸ್ಸನ್ನು ಗೆಲ್ಲುವುದು ತುಂಬಾ ಕಷ್ಟ.
-ಎ.ಪಿ.ಜೆ.ಅಬ್ದುಲ್ ಕಲಾಂ

ಜಿಗ್ನೇಶ್ ಮೇವಾನಿ ಬಂಧನ ಪ್ರಕರಣ ಟೀಕಾಕಾರರ ಬಾಯಿ ಮುಚ್ಚಿಸುವ ಯತ್ನ

ಗುಜರಾತಿನ ಪಕ್ಷೇತರ ಶಾಸಕ ಜಿಗ್ನೇಶ್ ಮೇವಾನಿ ಅವರನ್ನು ಅಸ್ಸಾಂ ಪೊಲೀಸರು ಈಚೆಗೆ ಬಂಧಿಸಿದ್ದರು. ಕೇಂದ್ರ ಸರ್ಕಾರದ ಟೀಕಾಕಾರರ ವಿರುದ್ಧ ಹಗೆ ತೀರಿಸಿಕೊಳ್ಳುವ ರಾಜಕಾರಣಕ್ಕೆ ಇದೊಂದು ಹೊಸ ನಿದರ್ಶನ. ಪ್ರಧಾನಿ ನರೇಂದ್ರ ಮೋದಿ ಅವರ ಕುರಿತಾಗಿ ಕಟುವಾಗಿ ಒಂದು ಟ್ವೀಟ್ ಮಾಡಿದ್ದ ಆರೋಪದ ಅಡಿಯಲ್ಲಿ ಮೇವಾನಿ ಅವರನ್ನು ಬಂಧಿಸಲಾಗಿತ್ತು. ಕೊಕ್ರಜಾರ್‌ನ ನ್ಯಾಯಾಲಯವೊಂದು ಈ ಪ್ರಕರಣದಲ್ಲಿ ಮೇವಾನಿ ಅವರಿಗೆ ಜಾಮೀನು ಮಂಜೂರು ಮಾಡಿದ ತಕ್ಷಣದಲ್ಲಿ, ಅವರನ್ನು ಇನ್ನೊಂದು ಪ್ರಕರಣದ ಅಡಿಯಲ್ಲಿ ಪೊಲೀಸರು ಬಂಧಿಸಿದ್ದರು. ಈ ಪ್ರಕರಣವು ಪಕ್ಕದ ಬಾರ್ಪೆಟಾ ಜಿಲ್ಲೆಯಲ್ಲಿ ದಾಖಲಾಗಿದೆ. ಪೊಲೀಸ್ ಸಿಬ್ಬಂದಿ ಮೇಲೆ ಮೇವಾನಿ ಹಲ್ಲೆ ನಡೆಸಿದರು, ಅವರ ಜೊತೆ ಅನುಚಿತವಾಗಿ ನಡೆದುಕೊಂಡರು ಎಂಬ ಆರೋಪವನ್ನು ಅವರ ಮೇಲೆ ಹೊರಿಸಿ ಬಂಧಿಸಲಾಗಿತ್ತು. ಮೊದಲಿಗೆ ಬಂಧಿಸಿದ್ದ ಪ್ರಕರಣವು ಒಂದು ಟ್ವೀಟ್ ಕುರಿತಾದದ್ದು. ಅದರಲ್ಲಿ ಮೇವಾನಿ ಅವರು ಮೋದಿ ಅವರನ್ನು 'ಗೋಡ್ಸೆ ಆರಾಧಕ' ಎಂದು ಕರೆದಿದ್ದರು, ಕೋಮು ಘರ್ಷಣೆಗೆ ಸಾಕ್ಷಿಯಾದ ಗುಜರಾತ್‌ನ ಕೆಲವು ಪ್ರದೇಶಗಳಲ್ಲಿ ಶಾಂತಿ ಮರಳುವಂತೆ ನೋಡಿಕೊಳ್ಳಬೇಕು ಎಂದು ಪ್ರಧಾನಿಯವರನ್ನು ಆಗ್ರಹಿಸಿದ್ದರು ಎಂದು ವರದಿಯಾಗಿದೆ. ಮೇವಾನಿ ಅವರ ಟ್ವೀಟ್ ಮೋದಿ ಅವರ ವಿಚಾರವಾಗಿ ಕಟುವಾದ ಮಾತುಗಳನ್ನು ಆಡಿದೆ ಎಂಬುದು ನಿಜ. ಆದರೆ, ಅದು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸುವಂಥದ್ದಾಗಿರಲಿಲ್ಲ. ಉದ್ರೇಕಕಾರಿ ಭಾಷಣ, ಶಾಂತಿಭಂಗ, ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವುದು, ಪಿತೂರಿ ಹಾಗೂ ಕಂಪ್ಯೂಟರ್ ಹ್ಯಾಕಿಂಗ್‌ಗೆ ಸಂಬಂಧಿಸಿದಂತೆ ಭಾರತೀಯ ದಂಡ ಸಂಹಿತೆ (ಐಪಿಸಿ) ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.



ಮೇವಾನಿ ಅವರನ್ನು ಎರಡು ಬಾರಿ ಬಂಧಿಸಿದ ವಿದ್ಯಮಾನವು ಎಲ್ಲಿಯೂ ಯಾರೂ ಸುರಕ್ಷಿತ ಅಲ್ಲ ಎಂಬ ಸಂದೇಶವನ್ನು ರವಾನಿಸುತ್ತಿದೆ

ಮೇವಾನಿ ಅವರ ವಿರುದ್ಧ ಕೈಗೊಂಡ ಕ್ರಮಗಳಲ್ಲಿ ಬಹಳ ವಿಚಿತ್ರವಾದ ಹಾಗೂ ವಿವರಣೆಗಳಿಗೆ ನಿಲುಕದ ಆಯಾಮಗಳು ಇವೆ. ಅಸ್ಸಾಂನ ಕೊಕ್ರಜಾರ್ ಜಿಲ್ಲೆಯ ಬಿಜೆಪಿ ನಾಯಕರೊಬ್ಬರ ದೂರು ಆಧರಿಸಿ ಅಸ್ಸಾಂ ಪೊಲೀಸರು ಮೇವಾನಿ ಅವರನ್ನು ಗುಜರಾತ್‌ನಲ್ಲಿ ಬಂಧಿಸಿದರು. ಆ ಪ್ರಕರಣದಲ್ಲಿ ಜಾಮೀನು ಸಿಕ್ಕ ತಕ್ಷಣದಲ್ಲಿ ಮೇವಾನಿ ಅವರನ್ನು ಇನ್ನೊಂದು ಪ್ರಕರಣದ ಅಡಿಯಲ್ಲಿ ಪಕ್ಕದ ಜಿಲ್ಲೆಯಲ್ಲಿ ಬಂಧಿಸಲಾಯಿತು. ಮೇವಾನಿ ಅವರ ಟ್ವೀಟ್‌ಗೆ ಸಂಬಂಧಿಸಿದಂತೆ ಗುಜರಾತ್‌ನಲ್ಲಿ ದೂರು ದಾಖಲಾಗಿರುವ ಅಥವಾ ಗುಜರಾತ್ ಪೊಲೀಸರು ಮೇವಾನಿ ಅವರ ವಿರುದ್ಧ ಕ್ರಮ ಜರುಗಿಸಿದ ವರದಿಗಳು ಇಲ್ಲ. ಬದಲಿಗೆ, ಗುಜರಾತ್‌ನಿಂದ ದೂರದಲ್ಲಿ ಇರುವ ರಾಜ್ಯವೊಂದರಲ್ಲಿ ಅವರ ವಿರುದ್ಧ ದೂರು ದಾಖಲಾಯಿತು. ಮೇವಾನಿ ಟ್ವೀಟ್ ತಮ್ಮ ರಾಜ್ಯದ ಶಾಂತಿಗೆ ಭಂಗ ತರಬಹುದು ಎಂದು ಅಲ್ಲಿನ ಬಿಜೆಪಿ ಮುಖಂಡರೊಬ್ಬರಿಗೆ ಅನ್ನಿಸಿತು. ಆದರೆ, ಮೇವಾನಿ ಟ್ವೀಟ್‌ನಲ್ಲಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಯಾವ ಅಂಶವೂ ಇರಲಿಲ್ಲ. ಸರ್ಕಾರದ ಟೀಕಾಕಾರ ಆಗಿರುವ ಮೇವಾನಿ ಅವರನ್ನು ಕಿರುಕುಳಕ್ಕೆ ಗುರಿಪಡಿಸುವ ಉದ್ದೇಶದಿಂದ ಮಾತ್ರವೇ ಅವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ, ಬಂಧಿಸಲಾಯಿತು ಎಂದು ಅರ್ಥ ಮಾಡಿಕೊಳ್ಳಬಹುದು. ಒಪ್ಪಲು ಸಾಧ್ಯವೇ ಇಲ್ಲದ ಹಾಗೂ ಸಮರ್ಥನೀಯವಲ್ಲದ ರೀತಿಯಲ್ಲಿ ಮೇವಾನಿ ಅವರನ್ನು ಬಂಧಿಸಲಾಗಿತ್ತು.

ಪ್ರಭುತ್ವವು ಹೇಗೆ ಮನಸೋಇಚ್ಛೆ ವರ್ತಿಸುತ್ತದೆ, ನಿಯಮಗಳು ಮತ್ತು ಕಾನೂನನ್ನು ಹೇಗೆ ಉಲ್ಲಂಘಿಸುತ್ತದೆ, ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲದ ಆರೋಪಗಳನ್ನು ಹೇಗೆ ವ್ಯಕ್ತಿಯೊಬ್ಬನ ವಿರುದ್ಧ ಹೊರಿಸುತ್ತದೆ ಎನ್ನುವುದನ್ನು ಮೇವಾನಿ ಪ್ರಕರಣ ತೋರಿಸುತ್ತಿದೆ. ಇಷ್ಟೂ ಕೆಲಸವನ್ನು ಯಾವ ಲಜ್ಜೆಯೂ ಇಲ್ಲದೆ, ತಮ್ಮನ್ನು ಯಾರಾದರೂ ಪ್ರಶ್ನಿಸಬಹುದು ಎಂಬ ಭಯವೂ ಇಲ್ಲದೆ ಮಾಡಲಾಗಿದೆ. ಪ್ರಭುತ್ವಕ್ಕೆ ಇಷ್ಟವಾಗದ ರೀತಿಯಲ್ಲಿ ಟ್ವೀಟ್ ಮಾಡಿದರೆ, ದೇಶದ ಯಾವುದೇ ರಾಜ್ಯದ ಪೊಲೀಸರು, ಯಾರನ್ನೇ ಬೇಕಾದರೂ ಯಾರದ್ದೋ ದೂರು ಆಧರಿಸಿ ಬಂಧಿಸಬಹುದು ಎಂಬುದನ್ನೂ ಈ ಪ್ರಕರಣವು ತೋರಿಸುತ್ತಿದೆ. ಟ್ವೀಟ್‌ಗೆ ಸಂಬಂಧಿಸಿದ ಪ್ರಕರಣದಲ್ಲಿ ಜಾಮೀನು ದೊರೆತ ನಂತರದಲ್ಲಿ ಮೇವಾನಿ ಅವರನ್ನು ಇನ್ನೊಂದು ಪ್ರಕರಣದಲ್ಲಿ ಪೊಲೀಸರು ಬಂಧಿಸಿದ ರೀತಿಯು, ಮೇವಾನಿ ಅವರನ್ನು ಹೇಗಾದರೂ ಮಾಡಿ ತಮ್ಮ ವಶದಲ್ಲಿ ಇರಿಸಿಕೊಳ್ಳಬೇಕು ಎಂದು ಪೊಲೀಸರು ಬಯಸಿದ್ದಿದ್ದನ್ನು ತೋರಿಸುತ್ತಿದೆ. ಈಗ ಈ ಪ್ರಕರಣದಲ್ಲಿಯೂ ಮೇವಾನಿ ಅವರಿಗೆ ಜಾಮೀನು ಸಿಕ್ಕಿದೆ. ಇದು 'ಕಟ್ಟುಕತೆಯ ಪ್ರಕರಣ' ಎಂದು ಪೊಲೀಸರ ವಿರುದ್ಧ ಕೋರ್ಟ್ ಆಕ್ರೋಶ ವ್ಯಕ್ತಪಡಿಸಿದೆ. ಕಷ್ಟಪಟ್ಟು ಗಳಿಸಿದ ಪ್ರಜಾತಂತ್ರ ವ್ಯವಸ್ಥೆಯನ್ನು ಪೊಲೀಸ್ ರಾಜ್ಯವನ್ನಾಗಿಸುವುದು ಕಲ್ಪಿಸಿಕೊಳ್ಳಲಿಕ್ಕೂ ಸಾಧ್ಯವಿಲ್ಲದ್ದು ಎಂದು ತೀಕ್ಷ್ಣವಾಗಿ ಹೇಳಿದೆ. ಹೀಗಿದ್ದರೂ, ಮೇವಾನಿ ಅವರನ್ನು ಎರಡು ಬಾರಿ ಬಂಧಿಸಿದ ವಿದ್ಯಮಾನವು ಎಲ್ಲಿಯೂ ಯಾರೂ ಸುರಕ್ಷಿತ ಅಲ್ಲ ಎಂಬ ಸಂದೇಶವನ್ನು ರವಾನಿಸುತ್ತಿದೆ. ಸರ್ಕಾರವು ತೆರೆಯ ಮೇಲೆ ಕಾಣಿಸಿಕೊಳ್ಳದೆಯೇ ನಾಗರಿಕರ ಹಕ್ಕುಗಳನ್ನು ಹತ್ತಿಕ್ಕಬಹುದು, ಪರೋಕ್ಷವಾಗಿ ಇಲ್ಲಿ ಇರುವುದು ರಾಜಕೀಯ ಮಾತ್ರ ಎನ್ನುವುದಕ್ಕೆ ಇಡೀ ಪ್ರಕರಣ ಒಂದು ನಿದರ್ಶನವಾಗಿ ನಿಲ್ಲುತ್ತದೆ.

ದೇಶವನ್ನು ಆರ್ಥಿಕ ಆಘಾತದಿಂದ ಪಾರು ಮಾಡಬೇಕಿರುವ ಅತಿದೊಡ್ಡ ಸವಾಲು ಅವರ ಮುಂದಿದೆ

ಅತಂತ್ರ ಪಾಕ್: ಶಾಹಬಾಝ್ ಆಸರೆಯೇ?



ಸೀಮೋಲ್ಲಂಘನ
ಸುಧೀಂದ್ರ ಬುಧ್ಯ

ಪಾಕಿಸ್ತಾನದಲ್ಲಿ ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಷರೀಫ್, ಭುಟ್ಟೊ ಮತ್ತು ಸೇನೆ ಎಂಬ ತ್ರಿಕೋನ ಬಿಂದುಗಳ ಮಧ್ಯೆ ಇದ್ದ ಪಾಕಿಸ್ತಾನದ ಅಧಿಕಾರ ಕೇಂದ್ರವನ್ನು ಆ ತ್ರಿಕೋನದಿಂದ ಆಚೆ ಎಳೆದು ಅಧಿಕಾರಕ್ಕೆ ಬಂದಿದ್ದ ಇಮ್ರಾನ್ ಖಾನ್ ಅವರು ಅವಧಿ ಮುಗಿಸದೇ ಅಧಿಕಾರ ಕೇಂದ್ರದಿಂದ ಹೊರನಡೆದಿದ್ದಾಗಿದೆ. ಆರ್ಥಿಕವಾಗಿ ಕುಗ್ಗಿರುವ, ಮುಸ್ಲಿಂ ಜಗತ್ತಿಗೆ ಬೇಡವಾದ, ಅಮೆರಿಕದ ಅಸಡ್ಡೆ ನೋಟಕ್ಕೆ ಗುರಿಯಾಗಿರುವ ಪಾಕಿಸ್ತಾನದ ಚುಕ್ಕಾಣಿ ಮತ್ತೊಮ್ಮೆ ಷರೀಫ್ ಕುಟುಂಬದ ಕೈಗೆ ಬಂದಿದೆ.

ಪಾಕಿಸ್ತಾನದ ವಿಷಯದಲ್ಲಿ ಅಮೆರಿಕ ಮತ್ತು ಆರ್ಮಿಯ ಮರ್ಜಿಗೆ ಬೀಳದೆ ಯಾವುದೇ ರಾಜಕೀಯ ಪಕ್ಷ ಅಧಿಕಾರ ನಡೆಸಲು ಸಾಧ್ಯವಿಲ್ಲ. ಷರೀಫ್ ಕುಟುಂಬಕ್ಕೆ ಈ ಸತ್ಯ ಬಹುಬೇಗ ಅರ್ಥವಾಗಿತ್ತು. ತಮ್ಮ ಉದ್ಯಮ ವಿಸ್ತರಣೆಗೆ ಇದ್ದ ತೊಡಕುಗಳನ್ನು ರಾಜಕೀಯವಾಗಿ ನಿವಾರಿಸಿಕೊಳ್ಳಲು ಷರೀಫ್ ಕುಟುಂಬವು ನವಾಜ್ ಷರೀಫ್ ಅವರನ್ನು ರಾಜಕೀಯಕ್ಕೆ ಕಳುಹಿಸಿತ್ತು. 1988ರಲ್ಲಿ ನವಾಜ್ ಷರೀಫ್ ಪಾಕಿಸ್ತಾನದ ಪಂಜಾಬ್ ವಿಧಾನಸಭೆ ಪ್ರವೇಶಿಸಿದರು. ನಂತರ ಮುಖ್ಯಮಂತ್ರಿಯಾದರು. 'ಪಾಕಿಸ್ತಾನದ ಕಾನೂನು ವ್ಯವಸ್ಥೆಯನ್ನು ಷರಿಯಾದ ಅನ್ವಯ ಮರುರೂಪಿಸುತ್ತೇನೆ, ಇಸ್ಲಾಂ ಆಶಯಗಳನ್ನು ಶಿಕ್ಷಣ ಮತ್ತು ಆರ್ಥಿಕ ರಂಗದಲ್ಲಿ ತರುತ್ತೇನೆ' ಎಂಬುವು ಅವರ ಆಶ್ವಾಸನೆಗಳಾಗಿದ್ದವು. ಸೇನೆಯ ಉನ್ನತ ಅಧಿಕಾರಿಗಳಿಗೆ ದುಬಾರಿ ಕಾರುಗಳ ಉಡುಗೊರೆ ನೀಡಿ ಅವರನ್ನು ತಮ್ಮತ್ತ ಸೆಳೆದುಕೊಳ್ಳಲು ನವಾಜ್ ಪ್ರಯತ್ನಿಸಿದರು. ಅಮೆರಿಕದ ಪ್ರೀತಿಗೆ ಪಾತ್ರರಾಗುವಂತೆ ನಡೆದುಕೊಂಡರು. ಪಾಕಿಸ್ತಾನದ ಪ್ರಧಾನಿಯಾಗುವುದು ಅವರಿಗೆ ಸುಲಭವಾಯಿತು. ಇದೇವೇಳೆ ಸಹೋದರನ ಹಾದಿಯನ್ನೇ ಹಿಡಿದ ಶಾಹಬಾಝ್ ಷರೀಫ್ ರಾಜಕೀಯವಾಗಿ ಮುನ್ನೆಲೆಗೆ ಬಂದರು. ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಮುಖ್ಯಮಂತ್ರಿಯಾದರು.

ನವಾಜ್ ಷರೀಫ್ ಅವರಿಗೆ ಪ್ರಧಾನಿಯಾಗಿ ಆ ಹುದ್ದೆಯಲ್ಲಿ ಕೂತು ಕಾರ್ಯನಿರ್ವಹಿಸುವುದು ಕಠಿಣವಾಗತೊಡಗಿತು. ಪಾಕಿಸ್ತಾನದ ಗುಪ್ತಚರ ಇಲಾಖೆಯ ಮುಖ್ಯಸ್ಥರ ಆಯ್ಕೆ ವಿಷಯದಲ್ಲಿ ನವಾಜ್ ಷರೀಫ್ ಮತ್ತು ಸೇನೆಯ ನಡುವೆ ಭಿನ್ನಾಭಿಪ್ರಾಯ ಮೊಳೆಯಿತು. ಈ ಕಂದಕ ಹಿರಿದಾಗಿ ನವಾಜ್ ಷರೀಫ್ ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕಾಯಿತು. ನಂತರ ಮತ್ತೊಮ್ಮೆ ಅವರು ಅಧಿಕಾರ ಕೇಂದ್ರಕ್ಕೆ ಬಂದಾಗಲೂ ಈ ವಿಷಯವೇ ಅವರ ಹುದ್ದೆಯನ್ನು ಅಲುಗಾಡಿಸಿತ್ತು.

1998ರಲ್ಲಿ ತಮಗೆ ತೊಡಕಾಗಿದ್ದ ಸೇನಾ ವರಿಷ್ಠರನ್ನು ಬದಲಿಸಿ, ಪರ್ವೇಜ್ ಮುಷರಫ್ ಅವರನ್ನು ಸೇನೆಯ ವರಿಷ್ಠರನ್ನಾಗಿ ನವಾಜ್ ನೇಮಿಸಿದರು. ಆದರೆ ನವಾಜ್ ಷರೀಫರ ವಿರುದ್ಧವೇ ಮುಷರಫ್ ತಿರುಗಿಬಿದ್ದರು. ಆಡಳಿತವನ್ನು ತೆಕ್ಕೆಗೆ ತೆಗೆದುಕೊಂಡು ಷರೀಫ್ ಸಹೋದರರನ್ನು ಗಡಿಪಾರು ಮಾಡಿದರು. ಮುಖ್ಯ ಹುದ್ದೆಗಳನ್ನು ಅಲಂಕರಿಸಿದ್ದರೂ ನವಾಜ್ ಮತ್ತು ಶಾಹಬಾಝ್ ಪಾಕಿಸ್ತಾನ ತೊರೆದು ಸೌದಿ ಅರೇಬಿಯಾದಲ್ಲಿ ಆಶ್ರಯ ಪಡೆಯಬೇಕಾಯಿತು.

10 ವರ್ಷಗಳ ಅಜ್ಞಾತವಾಸದ ಬಳಿಕ ಪಾಕಿಸ್ತಾನಕ್ಕೆ ಮರಳಿದ ನವಾಜ್ ಮತ್ತೊಮ್ಮೆ ಪ್ರಧಾನಿಯಾದರು. ಆದರೆ ಆಡಳಿತದ ವ್ಯಾಪಕ ಭ್ರಷ್ಟಾಚಾರ ಅವರನ್ನು ಕಟಕಟೆಯಲ್ಲಿ ನಿಲ್ಲಿಸಿತು. ಇತ್ತ ಶಾಹಬಾಝ್ 2008ರ ಚುನಾವಣೆಯಲ್ಲಿ ಸ್ಪರ್ಧಿಸಿ ಮತ್ತೊಮ್ಮೆ ಪಂಜಾಬ್ ಮುಖ್ಯಮಂತ್ರಿಯಾದರು. ನವಾಜ್ ತೆರೆಮರೆಗೆ ಸರಿಯುವ ಹೊತ್ತಿಗೆ ರಾಷ್ಟ್ರ ಮಟ್ಟದಲ್ಲಿ ಇಮ್ರಾನ್ ಖಾನ್ ಮುಖ್ಯಭೂಮಿಕೆಗೆ ಬಂದರು. ತಾನು ಕಟ್ಟಾ ಇಸ್ಲಾಮ್ ಅನುಯಾಯಿ ಎಂಬಂತೆ ಬಿಂಬಿಸಿಕೊಂಡರು. ಅವಕಾಶವಾದಿ ರಾಜಕಾರಣದ ಎಲ್ಲ ಪಟ್ಟುಗಳೂ ಅವರಿಗೆ ತಿಳಿದಿದ್ದವು. ಪಾಕಿಸ್ತಾನದ ದುಃಸ್ಥಿತಿಗೆ ಏನು ಕಾರಣ ಎಂದು ವಿಶ್ಲೇಷಿಸುವಾಗ, ಸೇನೆಯ ರಾಜಕೀಯ ಹಸ್ತಕ್ಷೇಪ ಕಾರಣ ಎಂದು ನೆಪಮಾತ್ರಕ್ಕೂ ಅವರು ಹೇಳಲಿಲ್ಲ. ಅಮೆರಿಕವನ್ನು ಮೆಚ್ಚಿಸುವ ಮಾತನ್ನು ಆಡಿದರು. ಪ್ರಧಾನಿ ಪಟ್ಟ ಇಮ್ರಾನ್ ಕೈಗೆಟುಕಿತು. ಆದರೆ ಅವರು ಬಯಸಿದ ಬದಲಾವಣೆ ಸಾಧ್ಯವಾಗಲಿಲ್ಲ. ಆರ್ಥಿಕತೆ ಮತ್ತಷ್ಟು ಕೃಶಗೊಂಡಿತು. ಬೆಲೆ ಏರಿಕೆಯ ಸಮಸ್ಯೆ ಜನರನ್ನು ಹಿಪ್ಪೆ ಮಾಡಿತು. ಅಮೆರಿಕದ ದಕ್ಷಿಣ ಏಷ್ಯಾ ನೀತಿಯಲ್ಲಿ ಪಾಕಿಸ್ತಾನಕ್ಕೆ ಪ್ರಾಮುಖ್ಯತೆ ಇಲ್ಲವಾಯಿತು. ರಷ್ಯಾ ಮತ್ತು ಚೀನಾದೊಂದಿಗೆ ನಿಕಟ ಸಂಬಂಧ ಸಾಧಿಸಲು ಇಮ್ರಾನ್ ಪ್ರಯತ್ನಿಸಿದರು. ಆದರೆ ಲಾಭವಾಗಲಿಲ್ಲ. ಐಎಸ್‌ಐ ಮುಖ್ಯಸ್ಥರ ನೇಮಕಾತಿ ಪ್ರಕ್ರಿಯೆಯಲ್ಲಿ ಸೇನೆಯನ್ನು ನಿರ್ಲಕ್ಷಿಸಿದ್ದು ನೆಪವಾಗಿ, ಅವರನ್ನು ಪದಚ್ಯುತಿಗೊಳಿಸುವ ಪ್ರಯತ್ನ ಆರಂಭವಾಯಿತು. ಅವಿಶ್ವಾಸ ಗೊತ್ತುವಳಿಯು ಹುದ್ದೆ ಕಸಿಯಿತು.

ಹಾಗಂತ ನೂತನ ಪ್ರಧಾನಿ ಶಾಹಬಾಝ್ ಷರೀಫರ ಹಾದಿ ಸುಗಮವೇ? ಅವರಿಗೆ ಅಧಿಕಾರದಲ್ಲಿ ಉಳಿಯಲು ಏನು ಮಾಡಬೇಕು ಎಂಬುದು ತಿಳಿದಿದೆ. ಆಡಳಿತದ ಅನುಭವವಿದೆ. ಆದರೆ ಸಮಸ್ಯೆಗಳ ಬುಗುಟೆಗಳನ್ನು ದಾಟಿಯೇ ಅವರು ನಡೆಯಬೇಕಿದೆ. ಆಂತರಿಕ ರಾಜಕೀಯ ಮತ್ತು ವಿದೇಶಾಂಗ ನೀತಿಯ ಕುರಿತು ಶಾಹಬಾಝ್ ಸ್ಪಷ್ಟ ನಿಲುವು ತಳೆಯಬೇಕಿದೆ. ಸದ್ಯದ ಮಟ್ಟಿಗೆ ಸರ್ಕಾರಕ್ಕೆ ಬೆಂಬಲ ನೀಡಿರುವ ಭುಟ್ಟೊ-ಜರ್ದಾರಿಗಳ ಪಿಪಿಪಿ ಪಕ್ಷ ಮುಂದಿನ ಚುನಾವಣೆಯಲ್ಲಿ ಶಾಹಬಾಝ್ ಷರೀಫ್ ನೇತೃತ್ವದ ಪಿಎಂಎಲ್(ಎನ್) ಪಕ್ಷವನ್ನು ನೇರವಾಗಿ ಎದುರಿಸಬೇಕಾಗುತ್ತದೆ. ಹಾಗಾಗಿ ಶಾಹಬಾಝ್ ನೇತೃತ್ವದ ಸರ್ಕಾರಕ್ಕೆ ಎಷ್ಟರಮಟ್ಟಿಗಿನ ಸಹಕಾರ ಸಿಗುತ್ತದೆ ಎಂದು ಕಾದು ನೋಡಬೇಕು.



ಶಾಹಬಾಝ್ ಎದುರಿಗಿರುವ ದೊಡ್ಡ ಸವಾಲು ಆರ್ಥಿಕತೆಯದ್ದು. ಪಾಕಿಸ್ತಾನ ತೀವ್ರ ಆರ್ಥಿಕ ಹಿಂಜರಿಕೆ ಅನುಭವಿಸುತ್ತಿದೆ. ಅತಿ ದೊಡ್ಡ ಸಾಲಗಾರ ರಾಷ್ಟ್ರವಾಗಿ ಮಾರ್ಪಟ್ಟಿದೆ. ವಿದೇಶಿ ವಿನಿಮಯದ ದಾಸ್ತಾನು ಬರಿದಾಗುತ್ತಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್), ವಿಶ್ವಬ್ಯಾಂಕ್, ಅಮೆರಿಕ ಮತ್ತು ಚೀನಾದಿಂದ ಬರುತ್ತಿರುವ ಪಾರು ಕಾಣಿಕೆಯು ಪಾಕಿಸ್ತಾನದ ಆರ್ಥಿಕತೆಯನ್ನು ಹಿಡಿದು ನಿಲ್ಲಿಸಿದೆ. ಐಎಂಎಫ್ ಜೊತೆಗೆ ಮಾತುಕತೆ ನಡೆಸಿ ಹೆಚ್ಚಿನ ಆರ್ಥಿಕ ನೆರವು ಪಡೆಯಲು ಸಾಧ್ಯವಾದರೆ ಮಾತ್ರ ಹಣದುಬ್ಬರ ನಿರ್ವಹಿಸಲು ಸಾಧ್ಯ. ವರ್ಷದ ಆಸುಪಾಸಿನಲ್ಲಿ ಮುಂದಿನ ಚುನಾವಣೆ ಇರುವುದರಿಂದ, ಜನಪ್ರಿಯ ಯೋಜನೆ ಮತ್ತು ಕಠಿಣ ಆರ್ಥಿಕ ನೀತಿಯನ್ನು ಏಕಕಾಲದಲ್ಲಿ ನಿರ್ವಹಿಸುವುದು ಸುಲಭವಾಗಲಿಕ್ಕಿಲ್ಲ. ಇಮ್ರಾನ್ ತಾವು ಅಧಿಕಾರ ಕಳೆದುಕೊಳ್ಳಲು ಮುಖ್ಯ ಕಾರಣ ವಿದೇಶಿ ಶಕ್ತಿಗಳ ಕೈವಾಡ ಎಂದಿದ್ದರು. ಮುಖ್ಯವಾಗಿ, ಅಮೆರಿಕದ ತಾಳಕ್ಕೆ ಪ್ರತಿಪಕ್ಷದ ನಾಯಕರು ಹೆಜ್ಜೆ ಹಾಕುತ್ತಿದ್ದಾರೆ ಎಂದು ಆರೋಪಿಸಿದ್ದರು. ಈ ವಾದವನ್ನು ತನಿಖೆಯ ಮೂಲಕವೇ ಶಾಹಬಾಝ್ ತಳ್ಳಿಹಾಕಬೇಕಿದೆ.

ಇನ್ನು, ವಿದೇಶಾಂಗ ನೀತಿಯ ಕುರಿತು ನೋಡುವುದಾದರೆ, ಅಮೆರಿಕ, ಐರೋಪ್ಯ ಒಕ್ಕೂಟ ಮತ್ತು ಇಂಗ್ಲೆಂಡ್ ಜೊತೆಗೆ ಉತ್ತಮ ಬಾಂಧವ್ಯ ಹೊಂದುವುದಾಗಿ ಶಾಹಬಾಝ್ ಘೋಷಿಸಿದ್ದಾರೆ. ಆದರೆ ಹೇಗೆ ಎಂದು ವಿವರಿಸಿಲ್ಲ. ಇಸ್ಲಾಮಿಕ್ ರಾಷ್ಟ್ರಗಳು ಪಾಕಿಸ್ತಾನಕ್ಕೆ ಪ್ರಾಮುಖ್ಯತೆ ನೀಡುವುದನ್ನು ನಿಲ್ಲಿಸಿ ವರ್ಷಗಳು ಕಳೆದಿವೆ. ಅಬುಧಾಬಿಯಲ್ಲಿ ನಡೆದ ಐಒಸಿ ಸಮಾವೇಶದಲ್ಲಿ ಭಾರತ ಪಾಲ್ಗೊಂಡರೆ ತಾನು ಸಮಾವೇಶ ಬಹಿಷ್ಕರಿಸುವುದಾಗಿ ಪಾಕಿಸ್ತಾನ ಎಚ್ಚರಿಸಿತ್ತು. ಆದರೆ ಅರಬ್ ರಾಷ್ಟ್ರಗಳು ಪಾಕಿಸ್ತಾನದ ಮುನಿಸಿಗೆ ಸೊಪ್ಪುಹಾಕಲಿಲ್ಲ. ಪಾಕಿಸ್ತಾನವು ಇಸ್ಲಾಂ ರಾಷ್ಟ್ರಗಳ ಸಮಾವೇಶದಿಂದ ಹೊರಗುಳಿಯಿತು.

ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನ-ಮಾನವನ್ನು ಭಾರತ ಕೈಬಿಟ್ಟಾಗ, ಇಸ್ಲಾಮಿಕ್ ರಾಷ್ಟ್ರಗಳು ಪಾಕಿಸ್ತಾನದ ಬಗಲಿಗೆ ನಿಲ್ಲದೆ, ಅದು ಭಾರತದ ಆಂತರಿಕ ವಿಷಯ ಎಂದು ಸುಮ್ಮನಾಗಿದ್ದವು. ಹಾಗಾಗಿ ಶಾಹಬಾಝ್ ಇಸ್ಲಾಮಿಕ್ ರಾಷ್ಟ್ರಗಳನ್ನು ಒಲಿಸಿಕೊಳ್ಳುವ ದಿಸೆಯಲ್ಲಿ ಮೊದಲ ಹೆಜ್ಜೆಯಾಗಿ ಸೌದಿ ಅರೇಬಿಯಾಕ್ಕೆ ಭೇಟಿ ನೀಡಿದ್ದರು.

ಮುಖ್ಯವಾಗಿ ಭಾರತದೊಂದಿಗೆ ಶಾಂತಿ ಮಾತುಕತೆಗೆ ಸಿದ್ಧವಿರುವುದಾಗಿ ಶಾಹಬಾಝ್ ಹೇಳಿದ್ದಾರೆ. ರಷ್ಯಾ ಮತ್ತು ಉಕ್ರೇನ್ ಬಿಕ್ಕಟ್ಟು ಚಾಲ್ತಿಯಲ್ಲಿರುವ ಈ ಹಂತದಲ್ಲಿ ಭಾರತದ ಸಖ್ಯವನ್ನು ಚೀನಾ ಕೂಡ ಬಯಸುತ್ತಿದೆ. ಅಮೆರಿಕ ಇಲ್ಲವೇ ಚೀನಾದ ಬೆಂಬಲದ ಹೊರತಾಗಿ ಭಾರತದೊಂದಿಗೆ ಏಕಾಂಗಿಯಾಗಿ ಸೆಣಸುವ ಶಕ್ತಿ ಪಾಕಿಸ್ತಾನಕ್ಕೆ ಇಲ್ಲವಾದ್ದರಿಂದ ಶಾಂತಿಯ ಮಾತು ಅನಿವಾರ್ಯ. ಆದರೆ ಭಾರತದೊಂದಿಗಿನ ಯಾವುದೇ ಬೆಳವಣಿಗೆ ಅಲ್ಲಿನ ಚುನಾವಣೆಯ ಮೇಲೆ ಪರಿಣಾಮ ಬೀರುವುದರಿಂದ ಆ ಕುರಿತು ಆತುರದ ಹೆಜ್ಜೆಯನ್ನು ಷರೀಫ್ ಇಡುವುದು ಅನುಮಾನ.

ಒಟ್ಟಿನಲ್ಲಿ, ನಾಟಕೀಯ ಬೆಳವಣಿಗೆಗಳ ನಡುವೆ ಅಧಿಕಾರದ ಗದ್ದುಗೆ ಏರಿರುವ ಶಾಹಬಾಝ್ ಷರೀಫ್, ಭ್ರಷ್ಟ ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸಿ, ಆರ್ಥಿಕ ಆಘಾತದಿಂದ ಪಾಕಿಸ್ತಾನವನ್ನು ಪಾರುಮಾಡಿ ಶಹಬಾಸ್ ಎನ್ನಿಸಿಕೊಳ್ಳುವರೇ ಕಾದು ನೋಡಬೇಕು.

ಚುರುಮುರಿ



ಸರ್ವಂ ಹಿಂದಿಮಯಂ!

• ಸುಮಂಗಲಾ

'ಈಗ ನಾ ಹಿಂದಿ ಕಲಿತರೆ ವಳ್ಳೇದಾ ಅಥವಾ ಸಂಸ್ಕೃತ ಕಲಿತರೆ ವಳ್ಳೇದಾ?' ಬೆಕ್ಕಣ್ಣ ಭಾರಿ ಗೊಂದಲದಲ್ಲಿ ಕೇಳಿತು.

'ಮಂಗ್ಯಾನಂಥವನೇ... ಮದ್ಲು ಛಲೋತ್ನಾಗೆ ಕನ್ನಡ ಓದೂದು, ಬರೆಯೂದು ಕಲಿ. ನಿನಗೆದಕ್ಕೆ ಹಿಂದಿ, ಸಂಸ್ಕೃತ ಬೇಕು... ಆಮ್ಯಾಲ ಬೇಕಂದ್ರ ಇಂಗ್ಲಿಷು ಕಲಿ' ಎಂದೆ.

'ಅತ್ತ ಕಡೆ ದೇವಗನ್ ಅಣ್ಣಾರಿಂದ ಹಿಡಿದು ಇತ್ ಕಡೆ ನಮ್ಮ ಸೀಟಿ ರವಿಯಣ್ಣನ ವರೆಗೆ ಎಲ್ಲಾರೂ ಹಿಂದಿ ರಾಷ್ಟ್ರಭಾಷೆ ಅಂತಾರ. ಈಗ ನಮ್ಮ ಕಂಗನಾಕ್ಕ ನೋಡಿದ್ರ ಹಿಂದಿ ಯಾವಾಗಿದ್ರೂ ರಾಷ್ಟ್ರಭಾಷೆ, ಜೊತಿಗಿ ಸಂಸ್ಕೃತನೂ ರಾಷ್ಟ್ರಭಾಷೆ ಆಗಬಕು ಅಂದಾಳ'.

'ಯಾವ ರಾಷ್ಟ್ರದ ಭಾಷೆ ಅಂತ ಆಕಿಗಿ ಕೇಳಲೇ. ನಮ್ಮ ದೇಶದಾಗೆ ಯಾವುದೋ ಒಂದ್ ಊರಿನಾಗೆ ಮಂದಿ ಸಂಸ್ಕೃತ ಮಾತಾಡೂದು ಬಿಟ್ಟರೆ, ಬ್ಯಾರೆ ಎಲ್ಲೂ ಸಂಸ್ಕೃತ ಆಡುಭಾಷೆ ಅಲ್ಲ. ಆಕಿಗೆ ಸಂಸ್ಕೃತದಾಗೆ ಒಂದು ಡಯಲಾಗ್ ತಪ್ಪಿಲ್ಲದೆ ವದರಾಕೆ ಹೇಳು, ನೋಡೂಣು'.

'ಕಂಗನಾಕ್ಕ ಹೇಳ್ಯಾಳ. ಹಿಂದಿಗೆ ವಿರುದ್ಧ ಮಾತಾಡಿದರ ಕೇಂದ್ರ ಸರ್ಕಾರಕ್ಕೆ, ಸಂವಿಧಾನಕ್ಕೆ ವಿರುದ್ಧ ಮಾತಾಡಿದಂತೆ. ಎದಕ್ಕಂದ್ರ ಹಿಂದಿ ರಾಷ್ಟ್ರಭಾಷೆ ಅಂತ ಸಂವಿಧಾನದಾಗೆ ಬರದೈತಿ. ದೇಶದ ನೀತಿ, ನಿಯಮ, ಕಾನೂನು ಆಗೂದು ಡೆಲ್ಲಿವಳಗ, ಹಿಂದಿವಳಗ. ಹಂಗಾಗಿ ಹಿಂದಿ ವಿರುದ್ಧ ಮಾತಾಡಬಾರದು ಅಂತ ಆಕಿ ಹುಕುಂ ಹೊರಡಿಸ್ಯಾಳ'.

'ಆಕಿ ಯಾವ ದೊಣೆನಾಯಕಿ ಹುಕುಂ ಹೊರಡಿಸಾಕೆ? ಆಕಿ ಬೇಕಾದರ ತನ್ನ ತಾಯಿನುಡಿ ಬಿಟ್ಟು ಸಂಸ್ಕೃತದಾಗೆ ಮಾತಾಡಲಿ. ಉಳಿದವರ ಉಸಾಬರಿ ಆಕಿಗೆ ಎದಕ್ಕ? ಪೆಟ್ರೋಲು, ಗ್ಯಾಸ್ ತುಟ್ಟಿ, ಈಗ ಕಲ್ಲಿದ್ದಲೂ ಇಲ್ಲ, ವಿದ್ಯುತ್ ಕೊರತೆ, ಉತ್ತರದಾಗೆ ಬಿಸಿಗಾಳಿ... ಹಿಂತಾ ಸಾವಿರ ಸಮಸ್ಯೆಗೆ ಏನು ಮಾಡಬಕು ಅಂತ ಆ ನಟ-ನಟಿಯರಿಗೆ ಕೇಳಲೇ' ನಾನು ರೇಗಿದೆ.

'ಈ ದಿಲ್ಲಿಮಂದಿ ನೀತಿ, ನಿಯಮ ಎಲ್ಲಾನೂ ಹಿಂದಿವಳಗ ಬರೆದು, ಏನರ ಗೋಲ್‌ಮಾಲ್ ಮಾಡಿದ್ರ ನಮಗ ಗೊತ್ತಾಗೂದು ಹೆಂಗ? ಅದಕ್ಕಾರೂ ನಾವ್ ಹಿಂದಿ ಕಲಿಬೇಕು' ಎಂದು ಮತ್ತೊಂದು ವಿತಂಡವಾದ ಹೂಡಿತು.

ದಿನದ ಟ್ವೀಟ್

ಬೆಂಗಳೂರಿನಲ್ಲಿ ಮಳೆಯೆಂದರೆ...



ಬೆಂಗಳೂರಿನಲ್ಲಿ ಮಳೆ ಹಿತಾನುಭವ ನೀಡಿದರೂ ಬೆಸ್ಕಾಂ ಕೃಪೆಯಿಂದ ಮಳೆ ಅವಧಿಯು ಹಿಂಸಾತ್ಮಕ ಆಗಿರುತ್ತದೆ. ನಿನ್ನೆ ಒಂದು ಗಂಟೆಗೂ ಹೆಚ್ಚು ಕಾಲ ವಿದ್ಯುತ್ ಕಡಿತಗೊಂಡಿತ್ತು. ಇಂದು ಸಹ ಮಳೆಯಿಂದಾಗಿ ಒಂದು ಗಂಟೆಗೂ ಹೆಚ್ಚು ಕಾಲ ವಿದ್ಯುತ್ ಕಡಿತವಾಗಿದೆ. ಬೆಂಗಳೂರಿನಲ್ಲಿ ಮಳೆ ಎಂದರೆ, ಕತ್ತಲೆಯಲ್ಲಿ ಮನೆಯಲ್ಲಿ ಕುಳಿತುಕೊಳ್ಳುವುದು ಎಂದರ್ಥ.
ನಾವು ಪರ್ಯಾಯವನ್ನು ಹೊಂದುತ್ತೇವೆ ಎಂಬ ಭರವಸೆ ಇಡೋಣ.

ಅಭಿಜಿತ್ ದೇವ್, ಹವ್ಯಾಸಿ ವೆಬ್ ವಿನ್ಯಾಸಕ

ಕಿಡಿನುಡಿ



ವಾಣಿಜ್ಯ ಬಳಕೆಯ ಅನಿಲ ಸಿಲಿಂಡರ್ ಬೆಲೆಯನ್ನು ₹102.5ರಷ್ಟು ಹೆಚ್ಚಿಸುವ ಮೂಲಕ ಅದರ ಒಟ್ಟು ಬೆಲೆಯನ್ನು ₹2,355.5ಕ್ಕೆ ಏರಿಸಿ ಮೋದಿ ಅವರು ಮೇ ದಿನಾಚರಣೆಯಂದು ದುಡಿಯುವ ವರ್ಗಕ್ಕೆ ಶುಭಾಶಯ ಕೋರಿದ್ದಾರೆ! ಒಂದು ಕಪ್ ಚಹಾದಿಂದ ಹಿಡಿದು ಅನೇಕ ವಸ್ತುಗಳ ಬೆಲೆ ಏರಲಿದೆ. ಈಗಾಗಲೇ ತತ್ತರಗೊಳ್ಳುವಂತೆ ಮಾಡಿರುವ ಹಣದುಬ್ಬರದ ಸ್ಥಿತಿ ಮತ್ತಷ್ಟು ಹದಗೆಡಲಿದೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಕೇಂದ್ರೀಯ ಸೆಸ್/ಸರ್‌ಚಾರ್ಜ್‌ಗಳನ್ನು ವಾಪಸ್ ಪಡೆಯಿರಿ.

ಸೀತಾರಾಂ ಯೆಚೂರಿ, ಸಿಪಿಎಂ ನಾಯಕ

25 ವರ್ಷಗಳ ಹಿಂದೆ
ಶುಕ್ರವಾರ, 2-5-1997

• ಜೈಪಾಲ್ ಸೇರಿ 6 ಸಚಿವರ ಪ್ರಮಾಣ

ನವದೆಹಲಿ, ಮೇ 1– ಪ್ರಧಾನಿ ಐ.ಕೆ. ಗುಜ್ರಾಲ್ ಅವರು ತಮ್ಮ 11 ದಿನಗಳ ಕೇಂದ್ರ ಸಂಪುಟಕ್ಕೆ ಇಂದು ಹೊಸದಾಗಿ ಮೂವರು ಸಂಪುಟ ದರ್ಜೆ ಹಾಗೂ ಮೂವರು ರಾಜ್ಯ ಸಚಿವರನ್ನು ಸೇರಿಸಿಕೊಳ್ಳುವ ಮೂಲಕ ಮೊದಲ ಬಾರಿಗೆ ವಿಸ್ತರಣೆ ಮಾಡಿದರು.

ಜನತಾದಳದ ವಕ್ತಾರ ಎಸ್.ಜೈಪಾಲ ರೆಡ್ಡಿ ಅವರಿಗೆ ಜನತಾದಳದ ಕರ್ನಾಟಕ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರು ಹೊಂದಿದ್ದ ವಾರ್ತಾ ಮತ್ತು ಪ್ರಸಾರ ಖಾತೆ ನೀಡಲಾಗಿದ್ದು ಉಳಿದ ಸಚಿವರಿಗೆ ಅವರು ಹಿಂದಿನ ಸರ್ಕಾರದಲ್ಲಿ ಹೊಂದಿದ್ದ ಖಾತೆಗಳನ್ನೇ ನೀಡಲಾಗಿದೆ.

ಚಿದಂಬರಂ (ಹಣಕಾಸು), ಎಂ. ಅರುಣಾಚಲಂ (ಕಾರ್ಮಿಕ) ಅವರು ಸಂಪುಟ ದರ್ಜೆಯ ಇತರ ಸಚಿವರಾಗಿದ್ದಾರೆ.

• ಸುಬ್ರಹ್ಮಣ್ಯ ಮಠದ ವಿದ್ಯಾಭೂಷಣ ತೀರ್ಥ ಸ್ವಾಮೀಜಿ ವಿವಾಹ

ಮಂಡ್ಯ, ಮೇ 1– ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಕುಕ್ಕೆ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಭೂಷಣ ತೀರ್ಥ ಸ್ವಾಮೀಜಿ (43) ಅವರು ಬಳ್ಳಾರಿಯ ವೈದ್ಯರೊಬ್ಬರ ಮಗಳಾದ ರಮಾ ಕುಲಕರ್ಣಿ (24) ಎಂಬುವರನ್ನು ಮಳವಳ್ಳಿ ಸಮೀಪದ ಮಾರೇಹಳ್ಳಿ ಗ್ರಾಮದ ದೇವಸ್ಥಾನದಲ್ಲಿ ಶಾಸ್ತ್ರೋಕ್ತವಾಗಿ ಮದುವೆಯಾದರು.

ವಿದ್ಯಾಭೂಷಣ ಸ್ವಾಮೀಜಿ ಸಂಸಾರಿಯಾಗಲಿದ್ದಾರೆ ಎಂಬ ಸುದ್ದಿ ತುಂಬಾ ಸಮಯದಿಂದ ಹರಡಿತ್ತು. 15 ದಿನಗಳ ಹಿಂದೆ ಪೀಠತ್ಯಾಗ ಮಾಡಿದ್ದ ಇವರು, ತಮ್ಮ ಹೆಸರಿನಿಂದ ಶ್ರೀಯನ್ನು ತೆಗೆದುಹಾಕಿದ್ದರು ಎನ್ನಲಾಗಿದೆ. ಅವರ ತಾಯಿ ಮಂದಾಕಿನಿ ಸೇರಿ ಸುಮಾರು 40 ಜನ ಭಾಗವಹಿಸಿದ್ದರು.

50 ವರ್ಷಗಳ ಹಿಂದೆ
ಮಂಗಳವಾರ, 2-5-1972

• 'ವಂಶವೃಕ್ಷ'ದ ಗಿರೀಶ, ಕಾರಂತ್ ಶ್ರೇಷ್ಠ ನಿರ್ದೇಶಕರು

ನವದೆಹಲಿ, ಮೇ 1– 'ವಂಶವೃಕ್ಷ' ಕನ್ನಡ ಚಿತ್ರದ ನಿರ್ದೇಶಕರಾದ ಗಿರೀಶ ಕಾರ್ನಾಡ ಮತ್ತು ಬಿ.ವಿ.ಕಾರಂತ್ ಅವರು ಅತ್ಯುತ್ತಮ ನಿರ್ದೇಶಕರೆಂದು ಪರಿಗಣಿತರಾಗಿದ್ದಾರೆ.

'ವಂಶವೃಕ್ಷ'ಕ್ಕೆ ಪ್ರಾದೇಶಿಕ ಪ್ರಶಸ್ತಿ ದೊರೆತಿದೆ. ಚಲನಚಿತ್ರಗಳ ಹತ್ತೊಂಬತ್ತನೇ ರಾಷ್ಟ್ರೀಯ ಪ್ರಶಸ್ತಿಗಳನ್ನು ಇಂದು ಪ್ರಕಟಿಸಲಾಯಿತು. ಅಂತರರಾಷ್ಟ್ರೀಯ ಖ್ಯಾತಿ ಪಡೆದ ಸತ್ಯಜಿತ್ ರಾಯ್ ಅವರ ಬಂಗಾಳಿ ಕಥಾಚಿತ್ರ 'ಸೀಮಬದ್ಧ'ಕ್ಕೆ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ಕೊಡಲಾಗಿದೆ.

ಹಿಂದಿ ಕಥಾಚಿತ್ರ 'ಅನುಭವ್' ಎರಡನೇ ಅತ್ಯುತ್ತಮ ಚಿತ್ರವೆಂದು ಪರಿಗಣಿತವಾಗಿದೆ. ಕೆ.ಎ. ಅಬ್ಬಾಸ್ ಅವರ 'ಧೋಬೂಂದ್ ಪಾನಿ' ರಾಷ್ಟ್ರೈಕ್ಯದ ಕಥಾವಸ್ತುವಿಗಾಗಿ ಪ್ರಶಸ್ತಿ ಗಳಿಸಿದೆ.

ಸಂಗತ

ಸ್ಪೀಕರ್ ಮತ್ತು ಮರೆತುಹೋದ ಮೌಲ್ಯ

ಸಭಾಧ್ಯಕ್ಷ ಸ್ಥಾನಕ್ಕೆ ಹಾಗೂ ಅಧಿಕಾರ ತತ್ವಕ್ಕೆ ಬಹುಮುಖ್ಯವಾದ ಒಂದು ಪೂರ್ವ ಷರತ್ತಿದೆ. ವಿಧಾನಸಭಾಧ್ಯಕ್ಷ ಕಾಗೇರಿ ಅವರ ಹೇಳಿಕೆಯು ಈ ಷರತ್ತನ್ನೇ ಗಾಳಿಗೆ ತೂರಿದೆ

• ಪ್ರೊ. ಬಿ.ಕೆ.ಚಂದ್ರಶೇಖರ್

ನಮ್ಮ ದೇಶದ ಸಂಸತ್ ಹಾಗೂ ವಿಧಾನಸಭೆಗಳ ಅಧ್ಯಕ್ಷರ 'ಸ್ಥಾನ' ಎನ್ನುವುದು ಬ್ರಿಟನ್ನಿನ ಹೌಸ್ ಆಫ್ ಕಾಮನ್ಸ್‌ಗೆ (ಪಾರ್ಲಿಮೆಂಟ್) ಸಮಾನಾಂತರ ವ್ಯವಸ್ಥೆಯಾಗಿದೆ. ವಿಧಾನಸಭೆ ಎನ್ನುವ ಸಂಸ್ಥೆಯನ್ನು ಸಭಾಧ್ಯಕ್ಷರು ಪ್ರತಿನಿಧಿಸುತ್ತಾರಲ್ಲದೆ ಶಿಷ್ಟಾಚಾರದ ವಿಚಾರದಲ್ಲಿ ಅವರು ಅತ್ಯುನ್ನತ ಸ್ಥಾನವನ್ನು ಅಲಂಕರಿಸುತ್ತಾರೆ. ಆದರೆ, ಅವರ ಈ ವಿಶೇಷ ಸ್ಥಾನಮಾನಕ್ಕೆ ಹಾಗೂ ಅಧಿಕಾರ ತತ್ವಕ್ಕೆ ಬಹುಮುಖ್ಯವಾದ ಒಂದು ಪೂರ್ವ ಷರತ್ತಿದೆ. ಅದರಂತೆ, ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ವ್ಯಕ್ತಿ ಸದನದ ಸದಸ್ಯರ ನಡವಳಿಕೆಯನ್ನು ಸಮಚಿತ್ತದಿಂದ, ಯಾವುದೇ ಪಕ್ಷಪಾತವಿಲ್ಲದ ಧೋರಣೆಯಿಂದ ಗಮನಿಸಬೇಕು. ಆ ಮನೋಧರ್ಮದ ಮೂಲಕವೇ ಅವರು ಸದನವನ್ನು ನಿರ್ವಹಿಸಿ ಅಲ್ಲಿ ಶಿಸ್ತನ್ನು ಸ್ಥಾಪಿಸಬೇಕಾಗುತ್ತದೆ.

ಜನಸಾಮಾನ್ಯರ ಗ್ರಹಿಕೆಗೂ ಈ ನಿಷ್ಪಕ್ಷಪಾತವಾದ ಧೋರಣೆ ನಿಲುಕುತ್ತದೆ ಎನ್ನುವುದು ಬಹಳ ಮುಖ್ಯವಾದ ಅಂಶ. ಸಿಬಿಐ, ಜಾರಿ ನಿರ್ದೇಶನಾಲಯದಂತಹ ಶಾಸನಬದ್ಧ ಸಂಸ್ಥೆಗಳು, ರಾಜ್ಯಪಾಲರ ಕಚೇರಿಯಂತಹ ಸಾಂವಿಧಾನಿಕ ಸಂಸ್ಥೆಗಳಿಗೆ ಹೋಲಿಸಿದಲ್ಲಿ ಹಲವಾರು ವರ್ಷಗಳಿಂದ ಕರ್ನಾಟಕದ ಸಭಾಧ್ಯಕ್ಷರ ಸ್ಥಾನಮಾನ ಇನ್ನೂ ಅಪಾಯದ ಅಂಚಿಗೆ ತಲುಪದೇ ಉಳಿದಿದೆ ಎನ್ನುವುದು ಸಮಾಧಾನವೆನಿಸಿದರೂ ಅದರ ಪ್ರಸ್ತುತ ಹಾದಿಯ ಬಗ್ಗೆ ಆತಂಕವಾಗುವುದು ಸಹಜವೇ.

ಈಗಿನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಪಕ್ಷಪಾತವೂ ರಾಜಕೀಯಪ್ರೇರಿತವೂ ಆದ ಹೇಳಿಕೆ ಅವರ ಆ ಸ್ಥಾನದ ಘನತೆಗೆ ತೀವ್ರ ಧಕ್ಕೆಯನ್ನು ತಂದಿದೆ. ಕಾಗೇರಿ ಅವರು 'ನಮ್ಮ ಆರ್‌ಎಸ್‌ಎಸ್ ಮುಂದಿನ ದಿನಗಳಲ್ಲಿ ತನ್ನ ಪ್ರಬಲ ಅಸ್ತಿತ್ವವನ್ನು ಸ್ಥಾಪಿಸಲಿದೆ' ಎಂದು ಘಂಟಾಘೋಷವಾಗಿ ವಿಧಾನಸಭಾಧ್ಯಕ್ಷ ಪೀಠದಲ್ಲಿ ಕುಳಿತೇ ಹೇಳಿದ್ದಾರೆ. ಇಷ್ಟೇ ಸಾಲದೆಂಬಂತೆ, ಶಿಷ್ಟಾಚಾರ ಉಲ್ಲಂಘನೆಗಾಗಿ ಕ್ಷಮೆಯನ್ನು ನಿರೀಕ್ಷಿಸಿದ ಸಂದರ್ಭದಲ್ಲಿ ಅವರು ಅದಕ್ಕೆ ವಿರುದ್ಧವಾಗಿ ತಮ್ಮ ಹೇಳಿಕೆಯನ್ನೇ ಪ್ರಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಅವರನ್ನು ಸಭಾಧ್ಯಕ್ಷರನ್ನಾಗಿ ನೇಮಿಸಿದ ಬಿಜೆಪಿಯ ಬೆನ್ನೆಲುಬಾಗಿರುವ ಆರ್‌ಎಸ್‌ಎಸ್ ಕುರಿತಂತೆ ಕಾಗೇರಿ ಅವರ ಹೇಳಿಕೆ ಸ್ಪಷ್ಟವಾಗಿ ಪಕ್ಷಪಾತವೇ ವಿನಾ ಬೇರೇನೂ ಅಲ್ಲ. ಅವರ ಹೇಳಿಕೆಯು ಅವರ ಸ್ಥಾನದ ವ್ಯಕ್ತಿಯೊಬ್ಬರು ಘನ ಸದನದಲ್ಲಿ ನಿಷ್ಪಕ್ಷಪಾತವಾಗಿ ವ್ಯವಹರಿಸಬೇಕಾದ ಪ್ರಾಥಮಿಕ ಪೂರ್ವ ಷರತ್ತನ್ನೇ ಗಾಳಿಗೆ ತೂರಿದೆ.

ಆರ್‌ಎಸ್‌ಎಸ್ ಏನನ್ನು ಪ್ರತಿನಿಧಿಸುತ್ತದೆ? ಹಿಂದುತ್ವದ ಯೋಜನೆಯು ಆರ್‌ಎಸ್‌ಎಸ್ ವಂಶವಾಹಿನಿಯಲ್ಲಿಯೇ ಇದೆ. ಅದರ ಸಾಮಾಜಿಕ- ಧಾರ್ಮಿಕ ಸ್ವಭಾವದೊಂದಿಗೆ, ಹಿಂದುತ್ವದ ಪುನಶ್ಚೇತನದ ಮೂಲಭೂತ ಆಶಯವೂ ಅದಕ್ಕಿದೆ. 1925ರಲ್ಲಿ ಅದು ಅಸ್ತಿತ್ವಕ್ಕೆ ಬಂದ ಸಂದರ್ಭದಲ್ಲಿ ಆರ್‌ಎಸ್‌ಎಸ್, ಬ್ರಿಟಿಷರ ವಸಾಹತು ಮೌಲ್ಯಗಳ ವಿರುದ್ಧ ಪ್ರಚಾರ ಮಾಡುವ ಕೆಲಸವನ್ನಷ್ಟೇ ಮಾಡುತ್ತಿತ್ತು. ನಂತರದ ದಿನಗಳಲ್ಲಿ ಸಾವರ್ಕರ್ ತರ್ಕಗಳನ್ನು ಬಳಸಿಕೊಂಡು ಅದು ಇನ್ನಷ್ಟು ಮೊನಚಾದ ಕ್ರಿಯಾಯೋಜನೆಯನ್ನು ರೂಪಿಸಿಕೊಂಡಿತು. ಇಸ್ಲಾಂರಹಿತ ದೇಶವನ್ನು ಹೇಗೆ ರೂಪಿಸಬೇಕೆಂಬ ಆಲೋಚನೆ ಸಾವರ್ಕರ್ ಪ್ರತಿಪಾದಿಸಿದ್ದೇ ಆಗಿತ್ತು.

ಸೈದ್ಧಾಂತಿಕವಾಗಿ ಮತ್ತಷ್ಟು ಆಕರ್ಷಣೀಯ ಲೇಖಕರಾಗಿದ್ದ ಎಂ.ಎಸ್.ಗೋಲ್ವಾಲ್ಕರ್, ಒಂದು ದೇಶ ಎಂದರೆ ಭೌಗೋಳಿಕ, ಜನಾಂಗೀಯ, ಧಾರ್ಮಿಕ (ಹಿಂದುತ್ವ), ಸಾಂಸ್ಕೃತಿಕ ಹಾಗೂ ಭಾಷೆಗಳ (ಅಂದಿನ ಸಂದರ್ಭಕ್ಕೆ ಸಂಸ್ಕೃತ ಭಾಷೆ) ಏಕತೆ ಎನ್ನುತ್ತಾರೆ. 'ಈ ತತ್ವಗಳ ಆಚೆ ಇದ್ದವರು ರಾಷ್ಟ್ರೀಯ ಜೀವನದಿಂದಲೂ ಹೊರಗೆ ಉಳಿಯುವವರು' ಎಂದೇ ಅವರು ದಾಖಲಿಸಿದ್ದಾರೆ (ಹಿಟ್ಲರನ ಜರ್ಮನಿ, ಮುಸೋಲಿನಿಯ ಇಟಲಿ ಅವರಿಗೆ ಮಾದರಿಯಾಗಿದ್ದವು).



ಸಭಾಧ್ಯಕ್ಷ ಸ್ಥಾನದಲ್ಲಿ ಕುಳಿತಿರುವ ಕಾಗೇರಿ ಅವರು ಜಗತ್ತಿನಾದ್ಯಂತ ಶ್ಲಾಘನೀಯ ಎನಿಸಿಕೊಂಡಿರುವ ಭಾರತದ ಸಂವಿಧಾನ, ಅದರ ಪ್ರಸ್ತಾವನೆಯಲ್ಲಿ ವಿವರಿಸಿರುವ ಮೌಲ್ಯಗಳನ್ನು ಮರೆತೇ ಹೋಗಿದ್ದಾರೇನೋ ಎನ್ನುವ ಅನುಮಾನ ಮೂಡುತ್ತದೆ. ಜಾತ್ಯತೀತ, ಪ್ರಜಾಸತ್ತಾತ್ಮಕ ಗಣತಂತ್ರವನ್ನು ಪ್ರತಿಪಾದಿಸುವ ಸಂವಿಧಾನವು ಪ್ರತಿಯೊಬ್ಬ ಪ್ರಜೆಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಮಾನತೆಗಳನ್ನು, ಅವಕಾಶಗಳನ್ನು ಒದಗಿಸುತ್ತದೆ ಎನ್ನುವ ಮೂಲಭೂತ ತತ್ವವೂ ಅವರ ನೆನಪಿನಲ್ಲಿದ್ದ ಹಾಗಿಲ್ಲ. ನಮ್ಮ ಸಂವಿಧಾನದ ಪ್ರಸ್ತಾವನೆ, ಬಹಳ ಮುಖ್ಯವಾಗಿ 'ವ್ಯಕ್ತಿಯ ಘನತೆಗೆ ಧಕ್ಕೆಯಾಗದ ಭ್ರಾತೃತ್ವ'ವನ್ನು ಪ್ರತಿಪಾದಿಸುತ್ತದೆ ಎನ್ನುವುದನ್ನು ನಾವು ಗಮನಿಸಬೇಕು. ಸಂವಿಧಾನ ರಚನಾ ಸಮಿತಿಯು ವ್ಯಕ್ತಿಯ 'ಘನತೆ'ಯನ್ನು 'ದೇಶ'ದ ನಂತರ ಉಲ್ಲೇಖಿಸುವ ಸಲಹೆಯನ್ನು ಸಾರಾಸಗಟಾಗಿ ತಿರಸ್ಕರಿಸಿತ್ತು.

ಆರ್‌ಎಸ್‌ಎಸ್ ಹಾಗೂ ಹಿಂದೂ ಜಾಗರಣ ವೇದಿಕೆಯು ಈಗಾಗಲೇ ಸಂವಿಧಾನ ಹಾಗೂ ನೀತಿ ನಿಯಮಗಳನ್ನು ಅಂಚಿಗೆ ತಳ್ಳುವ ಪ್ರಯತ್ನದ ಮೂಲಕ ದ್ವೇಷ, ಭಯಗಳೆಂಬ ದ್ವಿಮುಖ ನೀತಿಗಳನ್ನು ದೇಶದೆಲ್ಲೆಡೆ ಬಿತ್ತುತ್ತಿವೆ. ಸಣ್ಣಪುಟ್ಟ ಕಾರಣಗಳಿಗೆ ಹಿಂಸೆಗಳನ್ನು ಪ್ರಚೋದಿಸುವುದು, ಧರ್ಮಸಂಸತ್ ಮತ್ತಿತರ ವೇದಿಕೆಗಳ ಮೂಲಕ ಪ್ರಚೋದಕ ಭಾಷಣಗಳನ್ನು ಆಯೋಜಿಸುವುದು ದಿನೇದಿನೇ ಹೆಚ್ಚಾಗುತ್ತಿವೆ. ಪ್ರಭುತ್ವದ ಬೆಂಬಲ, ಬಿಜೆಪಿಯೇತರ ಪಕ್ಷಗಳ ಚಿಂತಾಕ್ರಾಂತ ಸ್ಥಿತಿ ಮತ್ತು ಒಗ್ಗೂಡುವ ನಿರಾಸಕ್ತಿಯು ಆರ್‌ಎಸ್‌ಎಸ್‌ನ ಈ ಭರಾಟೆಯನ್ನು ಸದ್ಯಕ್ಕೆ ತಡೆಯುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ.

ಲೇಖಕ: ವಿಧಾನಪರಿಷತ್ತಿನ ಮಾಜಿ ಸಭಾಪತಿ

ವಾಚಕರ ವಾಣಿ

'ದೊಡ್ಡವರು' ಬಯಲಿಗೆ ಬರಲಿ

ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿ ಪ್ರಮುಖ ಆರೋಪಿಗಳು ಬಲೆಗೆ ಬೀಳುತ್ತಿದ್ದಂತೆಯೇ ಹೊಸ ಹೊಸ ಸಂಗತಿಗಳು ಬೆಳಕಿಗೆ ಬರುತ್ತಿವೆ. ಆರೋಪಿಗಳ ವಿಚಾರಣೆಯಿಂದ ಬಯಲಾಗಿರುವ 'ದೊಡ್ಡವರು' ಮತ್ತು 'ಹಿರಿಯ ಸರ್'ಗಳ ಪತ್ತೆಗೆ ಸಿಐಡಿ ಅಧಿಕಾರಿಗಳು ಮುಂದಾಗಿದ್ದಾರೆ ಎಂಬುದು (ಪ್ರ.ವಾ., ಮೇ 1) ಅಚ್ಚರಿಯ ಬೆಳವಣಿಗೆಯಾಗಿದೆ. ತನಿಖಾಧಿಕಾರಿಗಳ ಮುಂದೆ ಆರೋಪಿಗಳು 'ಹಿರಿಯ'ರ ಹೆಸರು ಬಾಯ್ಬಿಟ್ಟಿರುವ ಸಾಧ್ಯತೆ ಇದೆ. ನಿಷ್ಪಕ್ಷಪಾತ ತನಿಖೆ ನಡೆದರೆ ತನಿಖಾ ಸಂಸ್ಥೆ ಮತ್ತು ಅಧಿಕಾರಿಗಳ ಬಗ್ಗೆ ನಾಡಿನ ಜನರಲ್ಲಿ ವಿಶ್ವಾಸ ವೃದ್ಧಿಸುತ್ತದೆ. ಆದರೆ ಆಳುವವರು ಹಾಗೂ ಹಿರಿಯ ಅಧಿಕಾರಿಗಳ ಕೈಕೆಳಗೇ ಕರ್ತವ್ಯ ನಿರ್ವಹಿಸುವ ಸಿಐಡಿ ಅಧಿಕಾರಿಗಳಿಗೆ 'ದೊಡ್ಡವರು' ಎನಿಸಿಕೊಂಡವರನ್ನು ಪಾರದರ್ಶಕ ರೀತಿಯಲ್ಲಿ ಪತ್ತೆ ಮಾಡಿ ಅವರ ಮುಖವಾಡ ಬಯಲಿಗೆಳೆಯಲು ಸಾಧ್ಯವಾಗುತ್ತದೆಯೇ? ಜನರಲ್ಲಿ ಇರುವ ಇಂತಹ ಅನುಮಾನವನ್ನು ಪ್ರಾಮಾಣಿಕ ತನಿಖೆಯ ಮೂಲಕ ದೂರ ಮಾಡುವ ಕೆಲಸ ತನಿಖಾಧಿಕಾರಿಗಳಿಂದ ನಡೆಯಲಿ.

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗ

ಶಾಲೆ ಆರಂಭ: ಇರಲಿ ಎಚ್ಚರ

ಕೊರೊನಾ ನಾಲ್ಕನೇ ಅಲೆಯ ಆತಂಕದ ನಡುವೆಯೂ ನಿಗದಿಯಂತೆ ಇದೇ 16ರಿಂದ ರಾಜ್ಯದಲ್ಲಿ ಶಾಲೆಗಳನ್ನು ಆರಂಭಿಸುವುದಾಗಿ ಶಿಕ್ಷಣ ಇಲಾಖೆ ತಿಳಿಸಿದೆ. ವಿದ್ಯಾರ್ಥಿಗಳಿಗೆ ಕಲಿಕೆಯು ಎಷ್ಟು ಮುಖ್ಯವೋ ಆರೋಗ್ಯವೂ ಅಷ್ಟೇ ಮುಖ್ಯವಾದದ್ದು. ಮೂರನೇ ಅಲೆಯಲ್ಲಿ ಹೆಚ್ಚು ಸಾವು ನೋವು ಸಂಭವಿಸದೇ ಇದ್ದುದಕ್ಕೆ ಮುಖ್ಯ ಕಾರಣ ಲಸಿಕೆ. ಎರಡನೇ ಅಲೆಯಲ್ಲಿ ಪೆಟ್ಟು ತಿಂದ ಅನೇಕ ಕುಟುಂಬಗಳು ಮೂರನೇ ಅಲೆ ಬರುವಷ್ಟರೊಳಗೆ ಲಸಿಕೆ ಪಡೆದಿದ್ದವು. ಆ ಲಸಿಕೆಯ ಶಕ್ತಿ ಆರು ತಿಂಗಳವರೆಗೆ ಇತ್ತು. ಆದರೆ ಇದೀಗ ಎರಡನೇ ಡೋಸ್ ಪಡೆದವರಲ್ಲಿ ರೋಗನಿರೋಧಕ ಶಕ್ತಿ ಇರುತ್ತದೆ ಎಂದು ಹೇಳಲಾಗುವುದಿಲ್ಲ. ವಿಜ್ಞಾನಿಗಳ ಪ್ರಕಾರ, ಒಂದು ಲಸಿಕೆಯ ಪರಿಣಾಮ ಆರು ತಿಂಗಳಿಗಿಂತ ಹೆಚ್ಚಿಗೆ ಇರುವುದಿಲ್ಲ.

ಇಂತಹ ಸಮಯದಲ್ಲಿ ಎಲ್ಲರೂ ಮತ್ತೊಂದು ಡೋಸ್ ಲಸಿಕೆ ಪಡೆಯುವುದು ವಿಹಿತ. ಮುಖ್ಯವಾಗಿ, ಶಾಲೆಗಳು ಪ್ರಾರಂಭವಾಗುವುದಕ್ಕಿಂತ ಮುಂಚೆ ಮಕ್ಕಳಿಗೆ ಲಸಿಕೆ ಹಾಕಿ, ಕೋವಿಡ್ ನಿಯಮಗಳನ್ನು ಪಾಲಿಸುವ ಬಗ್ಗೆ ಮಕ್ಕಳಿಗೆ ತರಬೇತಿ ನೀಡಬೇಕಾದ ಅಗತ್ಯವಿದೆ. ಶಿಕ್ಷಕರು ಕೂಡ ಕೋವಿಡ್ ನಿಯಮ ಪಾಲನೆಗೆ ಹೆಚ್ಚಿನ ನಿಗಾ ವಹಿಸುವ ಮೂಲಕ ವಿದ್ಯಾರ್ಥಿಗಳ ಸುರಕ್ಷತೆಯತ್ತ ಗಮನಹರಿಸಬೇಕಿದೆ.

ಡಾ. ಮಹೇಶ್ ಮೂರ್ತಿ, ತುಮಕೂರು

ನಿಷ್ಠಾವಂತರಿಗೆ ನ್ಯಾಯ ದೊರಕಿಸಿ

ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಹಿನ್ನೆಲೆಯಲ್ಲಿ ಮರುಪರೀಕ್ಷೆ ನಡೆಸುವ ಸರ್ಕಾರದ ನಿರ್ಧಾರದಿಂದ, ನ್ಯಾಯಯುತವಾಗಿ ಆಯ್ಕೆಯಾದ ಪ್ರತಿಭಾವಂತ ಅಭ್ಯರ್ಥಿಗಳಿಗೆ ಖಂಡಿತ ಅನ್ಯಾಯವಾಗುತ್ತದೆ. ಮನೆಯ ಜವಾಬ್ದಾರಿ ಹೊರುವ ವಯಸ್ಸಿನಲ್ಲಿ ಸರ್ಕಾರಿ ಹುದ್ದೆಯ ಕನಸನ್ನು ಹೊತ್ತು, ಸ್ನೇಹಿತರ ಜತೆ ರೂಮ್‌ನಲ್ಲಿ ಇದ್ದುಕೊಂಡು, ಆರ್ಥಿಕ ಸಂಕಷ್ಟಗಳ ನಡುವೆಯೇ ಹಗಲು ರಾತ್ರಿ ಎನ್ನದೆ ಮೂರ್ನಾಲ್ಕು ವರ್ಷಗಳಿಂದ ಓದಿದವರಿದ್ದಾರೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಈ ಸಂಬಂಧ ಸುಮಾರು 10 ವರ್ಷಗಳಲ್ಲಿ ನಡೆಸಿರುವ ಪರೀಕ್ಷೆಗಳಲ್ಲೇ ಅತಿ ಕಷ್ಟವಾದ ಪೇಪರ್ ಇದಾಗಿದ್ದು, ಇದೊಂದು ಮಿನಿ ಯುಪಿಎಸ್‌ಸಿ ಪರೀಕ್ಷೆ ಎಂದೇ ನಾವು ಸ್ಪರ್ಧಾರ್ಥಿಗಳು ಮಾತನಾಡಿಕೊಂಡಿದ್ದೆವು. ಈಗ ಆಯ್ಕೆಯಾದವರಲ್ಲಿ ಐಎಎಸ್‌ಗೆ, ಕೆಎಎಸ್‌ಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳೇ ಹೆಚ್ಚಿನವರಾಗಿದ್ದಾರೆ.

ಅಂತಿಮ ಆಯ್ಕೆ ಪಟ್ಟಿಯಲ್ಲಿ ಹೆಸರು ಇದೆಯೆಂದು ಎಸ್‌ಡಿಎ, ಪಿ.ಸಿ.ಯಂತಹ ಅನೇಕ ಹುದ್ದೆಗಳಿಗೆ ಕೆಲವು ಅಭ್ಯರ್ಥಿಗಳು ರಾಜೀನಾಮೆ ನೀಡಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ಈ ರೀತಿ ನಿರ್ಧಾರ ಕೈಗೊಂಡರೆ ಅಭ್ಯರ್ಥಿಗಳು ತಮ್ಮ ಕನಸಿನ ಹುದ್ದೆಯೂ ಇಲ್ಲದೆ, ಇರುವ ಹುದ್ದೆಯನ್ನೂ ಕಳೆದುಕೊಂಡು ಕಣ್ಣೀರಿಡುವಂತಾಗಿದೆ. ಈಗಿನ ಸ್ಪರ್ಧಾತ್ಮಕ ಯುಗದಲ್ಲಿ ಒಮ್ಮೆ ಆಯ್ಕೆಯಾದವರು ಮತ್ತೆ ಆಯ್ಕೆಯಾಗುತ್ತಾರೆ ಎಂಬ ಖಾತರಿ ಇರುವುದಿಲ್ಲ. ವಯೋಮಿತಿ ಮೀರುತ್ತಿರುವವರ ಗತಿಯೇನು? ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕುವುದು ಎಷ್ಟು ಸರಿ? ಅಕ್ರಮದ ವಿರುದ್ಧ ಸಿಐಡಿ ತನಿಖೆಯನ್ನು ಚುರುಕುಗೊಳಿಸಲಿ. ಅಕ್ರಮ ಎಸಗಿದವರಿಗೆ ಶಿಕ್ಷೆ ಕೊಡಿಸುವುದರ ಜೊತೆಗೆ ನಿಷ್ಠಾವಂತ ಅಭ್ಯರ್ಥಿಗಳಿಗೆ ನ್ಯಾಯ ದೊರಕಿಸುವುದು ಸರ್ಕಾರದ ಕರ್ತವ್ಯ.

ಚೈತ್ರ ಬಸವರಾಜಪ್ಪ, ಜಾಲಿಕಟ್ಟೆ, ಚಿತ್ರದುರ್ಗ

ಕನ್ನಡದಲ್ಲೇ ತೀರ್ಪು: ಸಾಕಾರಗೊಳ್ಳಲಿ ಆಶಯ

ನ್ಯಾಯಾಲಯಗಳ ವ್ಯವಹಾರಗಳಲ್ಲಿ ಸ್ಥಳೀಯ ಭಾಷೆಗಳಿಗೆ ಆದ್ಯತೆ ನೀಡಬೇಕಿದೆ ಎಂದು ಹೇಳಿರುವ ಪ್ರಧಾನಿ ನರೇಂದ್ರ ಮೋದಿ ಅವರ ಸಲಹೆಯು ಸೂಕ್ತ ಹಾಗೂ ಸಕಾಲಿಕ. ದೆಹಲಿಯಲ್ಲಿ ಇತ್ತೀಚೆಗೆ ನಡೆದ ಮುಖ್ಯಮಂತ್ರಿಗಳು ಮತ್ತು ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳ ಜಂಟಿ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ, ನ್ಯಾಯಾಲಯಗಳಲ್ಲಿ ಸ್ಥಳೀಯ ಭಾಷೆಗಳನ್ನು ಬಳಸಿದರೆ, ಅದು ಸಾಮಾನ್ಯ ನಾಗರಿಕರ ವಿಶ್ವಾಸವನ್ನು ಹೆಚ್ಚಿಸುತ್ತದೆ ಎಂದು ಹೇಳಿದರು. ಇದು ಸಹ ಒಪ್ಪುವಂತಹ ವಿಚಾರವೇ ಸರಿ.

ನಮ್ಮ ರಾಜ್ಯದ ಅನೇಕ ನ್ಯಾಯಾಧೀಶರು ಕನ್ನಡದಲ್ಲೇ ತಮ್ಮ ತೀರ್ಪುಗಳನ್ನು ನೀಡುವ ಮೂಲಕ ಭಾಷೆಯ ಬಗ್ಗೆ ತಮಗಿರುವ ಬದ್ಧತೆ ಹಾಗೂ ಗೌರವವನ್ನು ಪ್ರದರ್ಶಿಸುತ್ತಿದ್ದಾರೆ. ನ್ಯಾಯಾಲಯದ ವ್ಯವಹಾರಗಳಲ್ಲಿಯೂ ಹೆಚ್ಚು ಹೆಚ್ಚು ಕನ್ನಡ ಬಳಕೆಯಾಗುತ್ತಿದೆ. ಆದರೂ ಕೆಲವು ನ್ಯಾಯಮೂರ್ತಿಗಳು ತಮ್ಮ ತೀರ್ಪುಗಳನ್ನು ಇಂಗ್ಲಿಷ್‌ನಲ್ಲಿಯೇ ನೀಡುತ್ತಿದ್ದಾರೆ. ಇದಕ್ಕೆ ಬೇರೆ ಬೇರೆ ಕಾರಣಗಳಿರಬಹುದು. ನಮ್ಮ ಸಂವಿಧಾನದಲ್ಲಿ ನ್ಯಾಯಾಲಯಗಳು ಸ್ಥಳೀಯ ಅಥವಾ ಇಂಗ್ಲಿಷ್ ಭಾಷೆಯಲ್ಲಿ ತೀರ್ಪು ನೀಡಲು ಅವಕಾಶವಿದೆ. ಆದರೆ, ನಮ್ಮ ಎಲ್ಲ ನ್ಯಾಯಮೂರ್ತಿಗಳೂ ಕನ್ನಡ ಭಾಷೆಯಲ್ಲಿಯೇ ತೀರ್ಪು ನೀಡುವಂತಹ ದಿನಗಳು ಬರಬೇಕು. ಕನ್ನಡ ಭಾಷೆ ನಮ್ಮ ತಾಯಿ ಮತ್ತು ನಮ್ಮ ಮಗು. ಈ ತಾಯಿಯನ್ನು ಗೌರವದಿಂದ ಕಾಣೋಣ. ಈ ಮಗುವನ್ನು ಪ್ರೀತಿಯಿಂದ ಬೆಳೆಸೋಣ.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಲೋಪವನ್ನು ಪತ್ತೆ ಮಾಡಿದ ರಾಷ್ಟ್ರೀಯ ಉತ್ಪಾದಕತೆ ಪರಿಷತ್ ● ರಿಪೋರ್ಟರ್ಸ್ ಕಲೆಕ್ಟಿವ್ ವರದಿ

ಹರಾಜು ವಿಧಾನದ ಲೋಪ ಗಿರಣಿಗಳಿಗೆ ಅಪಾರ ಲಾಭ

• ಶ್ರೀಗಿರೀಶ್ ಜಾಲಿಹಾಳ್

ಬಡ ಜನರು ಮತ್ತು ಸಶಸ್ತ್ರ ಪಡೆಗಳಿಗೆ ಧಾನ್ಯ ಒದಗಿಸುವುದಕ್ಕಾಗಿ ಕೇಂದ್ರ ಸರ್ಕಾರವು ನಡೆಸಿದ ₹14,600 ಕೋಟಿ ಮೊತ್ತದ ಹರಾಜಿನ ವಿಧಾನದಲ್ಲಿದ್ದ ಲೋಪದಿಂದಾಗಿ ಕೆಲವು ಗಿರಣಿಗಳಿಗೆ ಅಪಾರ ಲಾಭ ಆಗಿದೆ. ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ನೇತೃತ್ವದ ರಾಷ್ಟ್ರೀಯ ಉತ್ಪಾದಕತೆ ಪರಿಷತ್ ನಡೆಸಿದ ತನಿಖೆಯು ಇದನ್ನು ಪತ್ತೆ ಮಾಡಿದೆ.

ಧಾನ್ಯಗಳು ಮತ್ತು ಇತರ ವಸ್ತುಗಳ ದರವನ್ನು ಸ್ಥಿರವಾಗಿ ಇರಿಸುವುದರ ಮೇಲೆ ನಿಗಾ ಇರಿಸುವ ಸಮಿತಿಗೆ, ಪರಿಷತ್ ನಡೆಸಿದ ತನಿಖೆಯ ಪ್ರಾಥಮಿಕ ಮಾಹಿತಿಯನ್ನು 2021ರ ಅಕ್ಟೋಬರ್ 11ರಂದು ನೀಡಲಾಗಿದೆ. ಈ ವರದಿಯು ರಿಪೋರ್ಟರ್ಸ್ ಕಲೆಕ್ಟಿವ್‌ಗೆ ಲಭ್ಯವಾಗಿದೆ.

ಕಚ್ಚಾ ಧಾನ್ಯವನ್ನು ಸಂಸ್ಕರಿಸುವುದಕ್ಕಾಗಿ ಗಿರಣಿಗಳನ್ನು ಆಯ್ಕೆ ಮಾಡುವ ಹರಾಜು ವಿಧಾನವನ್ನು ಪರಿಷತ್ ಅಧ್ಯಯನ ನಡೆಸಿದೆ. ಪರಿಷತ್, ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿದೆ. ಈ ಹರಾಜಿನ ನಿಯಮಗಳಿಂದಾಗಿ, ಸರ್ಕಾರದ ಟನ್‌ಗಟ್ಟಲೆ ಧಾನ್ಯವು ಗಿರಣಿಗಳ ಪಾಲಾಗಿದೆ. ಬಡ ಜನರಿಗೆ ಕಳಪೆ ಗುಣಮಟ್ಟದ ಧಾನ್ಯ ಪೂರೈಸಲಾಗಿದ್ದು, ಉತ್ತಮ ಧಾನ್ಯವನ್ನು ಹೆಚ್ಚಿನ ದರಕ್ಕೆ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗಿದೆ.

ಕೇಂದ್ರ ಕೃಷಿ ಸಚಿವಾಲಯದ ಅಧೀನದಲ್ಲಿರುವ ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಒಕ್ಕೂಟವು (ನಾಫೆಡ್) ಹರಾಜು ವಿಧಾನವನ್ನು ಅಭಿವೃದ್ಧಿಪಡಿಸಿದೆ. ಆದರೆ, ಈ ವಿಧಾನವು ಗಿರಣಿಗಳಿಗೆ ಅನುಕೂಲ ಮಾಡಿಕೊಡುತ್ತಿದೆ. ಹಾಗಾಗಿ, ಈ ಹರಾಜು ಪ್ರಕ್ರಿಯೆಯನ್ನು ರದ್ದುಪಡಿಸಬೇಕು ಎಂದು ಪರಿಷತ್ ಶಿಫಾರಸು ಮಾಡಿದೆ. 2018ರಿಂದಲೇ ಈ ವಿಧಾನ ಜಾರಿಯಲ್ಲಿದೆ.



ಸರ್ಕಾರವು ಅನುಸರಿಸುತ್ತಿದ್ದ ಸಾಂಪ್ರದಾಯಿಕ ಹರಾಜು ಪದ್ಧತಿಯನ್ನು ಬದಲಾಯಿಸುವ ಮೂಲಕ ಟನ್‌ಗಟ್ಟಲೆ ಧಾನ್ಯವು ಗಿರಣಿಗಳ ಪಾಲಾಗುವಂತೆ ನಾಫೆಡ್ ಮಾಡಿದೆ ಎಂಬ ಬಗ್ಗೆ ಈ ಹಿಂದೆಯೇ ರಿಪೋರ್ಟರ್ಸ್ ಕಲೆಕ್ಟಿವ್ ವರದಿ ಪ್ರಕಟಿಸಿತ್ತು. ಪರಿಷತ್‌ನ ಶಿಫಾರಸನ್ನು ಮಾಹಿತಿ ಹಕ್ಕು ಕಾಯ್ದೆಯ ಮೂಲಕ ಅರ್ಜಿ ಹಾಕಿ ಪಡೆದುಕೊಳ್ಳಲಾಗಿದೆ. ಈ ಹಿಂದೆ ಮಾಡಿದ್ದ ವರದಿಯನ್ನು ಈ ಶಿಫಾರಸು ದೃಢಪಡಿಸಿದೆ.

2021ರ ಅಕ್ಟೋಬರ್‌ನಲ್ಲಿ ಪರಿಷತ್ ಹಂಚಿಕೊಂಡ ಮಾಹಿತಿಯನ್ನು ಸರ್ಕಾರವು ನಿರ್ಲಕ್ಷಿಸಿದೆ ಎಂಬುದರ ದಾಖಲೆಗಳೂ ಕೂಡ ಲಭ್ಯವಾಗಿವೆ. ನಂತರದ ಎರಡು ತಿಂಗಳಲ್ಲಿ 1,37,509 ಟನ್‌ಗಳಷ್ಟು ಧಾನ್ಯವನ್ನು, ಅದೇ ವಿಧಾನ ಬಳಸಿ ಹರಾಜು ಮಾಡಲಾಗಿದೆ. ಇದರ ಮೌಲ್ಯ ₹875.47 ಕೋಟಿ. ಕಲೆಕ್ಟಿವ್‌ನ ವರದಿಯು ಪ್ರಕಟವಾದ ಬಳಿಕ ಜನರಿಗೆ ವಿತರಿಸುವ ಧಾನ್ಯಗಳನ್ನು ಸಂಸ್ಕರಿಸುವುದನ್ನು ನಾಫೆಡ್ ಕೈಬಿಟ್ಟಿದೆ. ಬದಲಿಗೆ, ಕಚ್ಚಾ ಧಾನ್ಯಗಳನ್ನೇ ರಾಜ್ಯಗಳಿಗೆ ಪೂರೈಸಲು ಗ್ರಾಹಕ ವ್ಯವಹಾರಗಳ ಇಲಾಖೆಯು ಈ ಜನವರಿಯಲ್ಲಿ ನಿರ್ಧರಿಸಿತು.

ನಾಫೆಡ್, ಗ್ರಾಹಕ ವ್ಯವಹಾರಗಳ ಸಚಿವಾಲಯ ಮತ್ತು ಕೃಷಿ ಸಚಿವಾಲಯವು ನಮ್ಮ ಪ್ರಶ್ನೆಗಳಿಗೆ ಉತ್ತರಿಸಿಲ್ಲ.

ಕಾರ್ಯವಿಧಾನ: ತೊಗರಿ ಬೇಳೆ ಕೊರತೆಯಿಂದ ಹೊರಬರುವುದಕ್ಕಾಗಿ ರೈತರು ಹೆಚ್ಚು ಹೆಚ್ಚು ತೊಗರಿ ಬೇಳೆ ಬೆಳೆಯುವಂತೆ ಸರ್ಕಾರವು 2015ರಲ್ಲಿ ಪ್ರೋತ್ಸಾಹ ನೀಡಿತು. ಅದರ ಭಾಗವಾಗಿ, ರೈತರಿಂದ ಹೆಚ್ಚು ತೊಗರಿ ಬೇಳೆ ಖರೀದಿಸುವುದಾಗಿ ಭರವಸೆ ಕೊಟ್ಟಿತ್ತು. ಅದರ ಫಲವಾಗಿ, ಸರ್ಕಾರದ ಗೋದಾಮಿನಲ್ಲಿ ತೊಗರಿ ಬೇಳೆ ಸಂಗ್ರಹ ಹೆಚ್ಚಾಯಿತು. ಈ ತೊಗರಿ ಬೇಳೆಯನ್ನು ಮುಗಿಸುವುದಕ್ಕಾಗಿ, ವಿವಿಧ ಯೋಜನೆಗಳ ಅಡಿಯಲ್ಲಿ ಬೇಳೆ ವಿತರಣೆಯ ಪ್ರಸ್ತಾವನ್ನು ನಾಫೆಡ್ 2017ರಲ್ಲಿ ಸರ್ಕಾರದ ಮುಂದಿಟ್ಟಿತು. ತೊಗರಿ ಬೇಳೆಯನ್ನು ಸಂಸ್ಕರಿಸಿ, ರಾಜ್ಯಗಳಿಗೆ ಪೂರೈಸುವುದಕ್ಕಾಗಿ ಗಿರಣಿಗಳನ್ನು ಆಯ್ಕೆ ಮಾಡಲು ಹರಾಜು ವಿಧಾನವನ್ನು ನಾಫೆಡ್ ರೂಪಿಸಿತು.

2021ರ ಡಿಸೆಂಬರ್‌ನಲ್ಲಿ ಪ್ರಕಟವಾದ ವರದಿಯಲ್ಲಿ ಹೇಳಿದಂತೆ, ಕೆಲವು ಗಿರಣಿದಾರರಿಗೆ ಅನುಕೂಲವಾಗುವ ರೀತಿಯ, ಅಸಹಜವಾದ ಗುತ್ತಿಗೆ ವಿಧಾನವನ್ನು ನಾಫೆಡ್ ರೂಪಿಸಿತು.

Operational Issues in Buffer Management contd.

Dal Milling

- **Milling of pulses** through Dal millers on **OTR basis** does not appear to be justified as substantial quantity of the procured pulses are retained by Dal Millers in lieu of their milling services
- **Selection Procedure of Dal Millers** in States needs to be reviewed as at present only a few big Dal Millers are engaged in milling operation of NAFED pulses
- The present **lot size of 100 MT prohibits small Dal Millers** (MSME units) to participate in the Milling operations.
- There is no proper mechanism for **monitoring the quality of milled pulses** being supplied under welfare schemes.

ಒಟಿಆರ್ ದೋಷಪೂರಿತವಾಗಿದ್ದು, ಸಣ್ಣ ಗಿರಣಿಗಳಿಗೆ ಟೆಂಡರ್‌ನಲ್ಲಿ ಅವಕಾಶ ಸಿಗುತ್ತಿಲ್ಲ ಎಂಬುದನ್ನು ಉಲ್ಲೇಖಿಸಿರುವ ರಾಷ್ಟ್ರೀಯ ಉತ್ಪಾದಕತೆ ಪರಿಷತ್‌ನ ವರದಿಯ ಪ್ರತಿ

ಅತ್ಯಂತ ಕಡಿಮೆ ಶುಲ್ಕದ ಬಿಡ್ಡರ್‌ಗೆ ಹರಾಜು ಗುತ್ತಿಗೆ ನೀಡುವುದು ಸರ್ಕಾರದ ಪದ್ಧತಿ. ಆದರೆ, ನಾಫೆಡ್ ವಿಧಾನವನ್ನೇ ಬದಲಿಸಿತು. ಪಡೆದುಕೊಂಡ ಕಚ್ಚಾ ಧಾನ್ಯದಿಂದ ಅತಿ ಹೆಚ್ಚು ಸಂಸ್ಕರಿಸಿದ ಬೇಳೆಯನ್ನು ನೀಡುವುದಾಗಿ (ಒಟಿಆರ್) ಬಿಡ್ ಮಾಡಿದ ಗಿರಣಿಗೆ ಬೇಳೆ ಸಂಸ್ಕರಿಸುವ ಗುತ್ತಿಗೆ ನೀಡುವುದೇ ಈ ಹೊಸ ಪದ್ಧತಿ.

ಒಟಿಆರ್ ಅಂದರೆ, ಕಚ್ಚಾ ಬೇಳೆಕಾಳು ಮತ್ತು ಸಂಸ್ಕರಿತ ಬೇಳೆಕಾಳುಗಳ ನಡುವಿನ ಅನುಪಾತ.

ಉದಾಹರಣೆಗೆ, 100 ಕೆ.ಜಿ. ಕಚ್ಚಾ ಬೇಳೆಯಿಂದ 80 ಕೆ.ಜಿ. ಸಂಸ್ಕರಿಸಿದ ಬೇಳೆ ಮತ್ತು 10 ಕೆ.ಜಿ. ಹೊಟ್ಟು ಉಪ ಉತ್ಪನ್ನವಾಗಿ ಸಿಗುತ್ತದೆ ಎಂದು ಗಿರಣಿದಾರರು ಬಿಡ್‌ನಲ್ಲಿ ಹೇಳುತ್ತಾರೆ. ಅವರು ಸರ್ಕಾರಕ್ಕೆ 70 ಕೆ.ಜಿ. ಬೇಳೆಯನ್ನಷ್ಟೇ ಕೊಡುತ್ತಾರೆ. 10 ಕೆ.ಜಿ. ಬೇಳೆಯನ್ನು ಸಂಸ್ಕರಣೆ, ಸಾಗಾಟದ ವೆಚ್ಚ ಮತ್ತು ತಮ್ಮ ಲಾಭವಾಗಿ ಉಳಿಸಿಕೊಳ್ಳುತ್ತಾರೆ.

ಒಟಿಆರ್‌ನಲ್ಲಿ ಕನಿಷ್ಠ ಅನುಪಾತವನ್ನು ನಾಫೆಡ್ ನಿಗದಿ ಮಾಡಿಲ್ಲ. ಒಟಿಆರ್ ಕಡಿಮೆ ಆದಷ್ಟು ಗಿರಣಿದಾರರಿಗೆ ಲಾಭ ಹೆಚ್ಚು. ಗಿರಣಿದಾರರು ವಿಪರೀತ ಲಾಭ ಮಾಡಿಕೊಳ್ಳುವುದಕ್ಕೆ ತಡೆ ಒಡ್ಡುವಲ್ಲಿ ನಾಫೆಡ್ ವಿಫಲವಾಗಿದೆ.

ನಾಫೆಡ್‌ಗೆ ಈ ಬಗ್ಗೆ ಅರಿವೇ ಇರಲಿಲ್ಲ ಎಂದೇನೂ ಇಲ್ಲ. ಆಂಧ್ರ ಪ್ರದೇಶದಲ್ಲಿ ಅಕ್ಕಿ ಸಂಸ್ಕರಣೆಯಲ್ಲಿ ಒಟಿಆರ್ ಆಧಾರಿತ ಹರಾಜು ಪ್ರಕ್ರಿಯೆ ಅನುಸರಿಸಿದ್ದರ ವಿರುದ್ಧ ಮಹಾಲೇಖಪಾಲರು ಎಚ್ಚರಿಕೆ ನೀಡಿದ್ದರು. ಈ ಪ್ರಕರಣದಲ್ಲಿ ಗಿರಣಿದಾರರಿಂದ ಸರ್ಕಾರಕ್ಕೆ ₹1,195 ಕೋಟಿ ನಷ್ಟವಾಗಿದೆ ಎಂದು ಮಹಾಲೇಖಪಾಲರು ಹೇಳಿದ್ದರು. ಹೀಗಿದ್ದರೂ, ಹೊಸ ಹರಾಜು ವಿಧಾನವನ್ನು ರಾಷ್ಟ್ರ ಮಟ್ಟಕ್ಕೆ ನಾಫೆಡ್ ವಿಸ್ತರಿಸಿತು. ಕನಿಷ್ಠ ಒಟಿಆರ್ ನಿಗದಿ ಮಾಡಬೇಕು ಎಂಬುದನ್ನು ಮರೆಯಿತು.

ಹಗರಣ ಖಚಿತಪಡಿಸಿದ ಸರ್ಕಾರ: ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯ ಅಡಿಯಲ್ಲಿ ಬೇಳೆಕಾಳುಗಳನ್ನು ಪೂರೈಸಲು ಈ ಹರಾಜು ವಿಧಾನವನ್ನು ಅನುಸರಿಸಲಾಗಿದೆ.

2015ರಲ್ಲಿ ಶುರುವಾದ ಬೇಳೆಕಾಳುಗಳ ಬೆಲೆ ಸ್ಥಿರೀಕರಣ ನಿಧಿ ಯೋಜನೆ ಪರಿಣಾಮಕಾರಿಯಾಗಿದೆಯೇ ಎಂಬುದನ್ನು ಈ ಪರಿಷತ್ತು ಪರಿಶೀಲನೆ ನಡೆಸುತ್ತಿದೆ. 2016-17 ಹಾಗೂ 2019-20ರ ಅವಧಿಯಲ್ಲಿ ದೇಶದಲ್ಲಿ ಬೇಳೆಕಾಳುಗಳ ಬೆಲೆ ಹಾಗೂ ಅವುಗಳ ಬೇಡಿಕೆ ಬಗ್ಗೆ ಅಧ್ಯಯನ ನಡೆಸಿದ ಪರಿಷತ್ತು, ಒಟಿಆರ್ ಪದ್ಧತಿಯು ಗಿರಣಿ ಮಾಲೀಕರಿಗೆ ಹೆಚ್ಚು ಲಾಭದಾಯಕವಾಗಿದೆ ಎಂದು ತಿಳಿಸಿದೆ. ಈ ಪದ್ಧತಿಯಿಂದ ಗಿರಣಿ ಮಾಲೀಕರ ಬಳಿ ಸಾಕಷ್ಟು ಪ್ರಮಾಣದ ಧಾನ್ಯ ದಾಸ್ತಾನು ಉಳಿಯುತ್ತದೆ. ಗಿರಣಿ ಮಾಲೀಕರಿಗೆ ಇದಕ್ಕೆ ಅವಕಾಶ ನೀಡಿದ್ದರಿಂದ ಅವರು ಹೆಚ್ಚಿನ ಲಾಭ ಪಡೆಯುತ್ತಿದ್ದಾರೆ ಎಂದು ವರದಿ ತಿಳಿಸಿದೆ.

ಒಟಿಆರ್ ಪದ್ಧತಿಯನ್ನು ವಿರೋಧಿಸಿರುವ ಪರಿಷತ್ತು, ಬೇಳೆಕಾಳು ಸಂಸ್ಕರಣೆ ವೇಳೆ ದೊರೆಯುವ ಉಪಉತ್ಪನ್ನಗಳ ಮೊತ್ತವನ್ನು ಕಳೆದು, ಸಂಸ್ಕರಣೆಗೆ ತಗುಲಿದ ಶುಲ್ಕವನ್ನು ಗಿರಣಿಯವರಿಗೆ ಪಾವತಿಸಬೇಕು ಎಂದು ಶಿಫಾರಸು ಮಾಡಿದೆ. ಈಗ ಇರುವ ಒಟಿಆರ್ ಪದ್ಧತಿ ಪ್ರಕಾರ, ಗಿರಣಿಗಳು ನಮೂದಿಸುವ ಅನುಪಾತವನ್ನು ಆಂತರಿಕ ಸಮಿತಿ ಅನುಮೋದಿಸುತ್ತದೆ. ಆಂತರಿಕ ಸಮಿತಿಯ ಸಭೆಯ ವಿಚಾರಗಳನ್ನು ಗೋಪ್ಯವಾಗಿ ಇಡಲಾಗುತ್ತದೆ. ಆರ್‌ಟಿಐ ಮೂಲಕ ಈ ಸಭೆಯ ಮಾಹಿತಿಗಳನ್ನು ಪಡೆಯಲು ಯತ್ನಿಸಿದಾಗ, ಕೋರ್ಟ್ ಆದೇಶವನ್ನು ಮುಂದಿಟ್ಟು, ಮಾಹಿತಿ ನೀಡಲು ನಾಫೆಡ್ ನಿರಾಕರಿಸಿತು.

ದೊಡ್ಡ ದೊಡ್ಡ ಗಿರಣಿಗಳೇ ಆಯ್ಕೆಯಾಗುವ ರೀತಿಯಲ್ಲಿ ಹರಾಜು ಪ್ರಕ್ರಿಯೆಯನ್ನು ವಿನ್ಯಾಸ ಮಾಡಿರುವ ಅಂಶವನ್ನು ಪರಿಷತ್ ಗಮನಿಸಿದ್ದು, ಆಯ್ಕೆ ವಿಧಾನವನ್ನು ಪರಿಶೀಲನೆ ಮಾಡಬೇಕು ಎಂದಿದೆ. 'ಈಗ, ಕೆಲವೇ ಗಿರಣಿಯವರು ನಾಫೆಡ್ ನೀಡುವ ಬೇಳೆಕಾಳುಗಳನ್ನು ಸಂಸ್ಕರಣೆ ಮಾಡುತ್ತಿದ್ದು, ಸಣ್ಣ ಸಣ್ಣ ಗಿರಣಿಯವರಿಗೂ ಅವಕಾಶ ನೀಡಬೇಕು. ಈಗ 100 ಟನ್ ಸಾಮರ್ಥ್ಯದ ಗಿರಣಿಗಳಿಗೆ ಮಾತ್ರ ಅವಕಾಶವಿದ್ದು, ಎಂಎಸ್‌ಎಂಇ ವಲಯದ ಗಿರಣಿಯವರು ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತಿಲ್ಲ. ಸಂಸ್ಕರಣೆ ಸಾಮರ್ಥ್ಯವನ್ನು 25 ಟನ್‌ಗೆ ಇಳಿಸಿದರೆ ಸಣ್ಣ ವ್ಯಾಪಾರಿಗಳಿಗೆ ಅವಕಾಶ ಸಿಗುತ್ತದೆ' ಎಂದು ಪರಿಷತ್ ಹೇಳಿದೆ.

ದೇಶದಲ್ಲಿ 7,000 ಗಿರಣಿಗಳಿವೆ. ಆದರೆ ನೋಂದಾಯಿತ ಗಿರಣಿಗಳ ಸಂಖ್ಯೆ 320 ಎಂದು ದಾಖಲೆಗಳು ಹೇಳುತ್ತವೆ. ದೊಡ್ಡ ಗಿರಣಿಗಳಿಗೆ ಅವಕಾಶ ನೀಡುವ ಮೂಲಕ ನಾಫೆಡ್ ಸಾವಿರಾರು ಸಣ್ಣ ಗಿರಣಿ ಮಾಲೀಕರಿಗೆ ಅವಕಾಶದ ಬಾಗಿಲು ಮುಚ್ಚಿದೆ ಎಂದು ಆರೋಪಿಸಿದೆ.

ವರದಿಗಾರ ರಿಪೋರ್ಟರ್ಸ್ ಕಲೆಕ್ಟಿವ್‌ನ ಸದಸ್ಯ

ಈ ವರದಿಯ ಇಂಗ್ಲಿಷ್ ಅವತರಣಿಕೆಯು 'ದಿ ವೈರ್'ನಲ್ಲಿ ಪ್ರಕಟವಾಗಿದೆ

ಗ್ರಾಹಕ ವ್ಯವಹಾರಗಳ ಇಲಾಖೆಯ ಹೊಸ ಆದೇಶ

ರಾಜ್ಯಗಳಿಗೆ ಕಚ್ಚಾ ಧಾನ್ಯವನ್ನೇ ಪೂರೈಸುವಂತೆ ನಾಫೆಡ್‌ಗೆ ಸೂಚಿಸಿ ಕೇಂದ್ರದ ಗ್ರಾಹಕ ವ್ಯವಹಾರಗಳ ಇಲಾಖೆಯು 2022ರ ಫೆಬ್ರುವರಿ 11ರಂದು ಆದೇಶ ನೀಡಿದೆ. ಹಾಗಿದ್ದರೂ ಮೂರು ಮುಖ್ಯ ವಿಧಗಳಲ್ಲಿ ಒಟಿಆರ್ ಹರಾಜು ವಿಧಾನವನ್ನು ಮುಂದುವರಿಸುವ ಅವಕಾಶವನ್ನು ಹೊಸ ಆದೇಶದಲ್ಲಿಯೂ ಉಳಿಸಿಕೊಳ್ಳಲಾಗಿದೆ.

ಮೊದಲನೆಯದಾಗಿ, ಕಲ್ಯಾಣ ಯೋಜನೆಗಳ ಮೂಲಕ ಪೂರೈಸುವ ಧಾನ್ಯಗಳಿಗೆ ಮಾತ್ರ ಈ ಆದೇಶ ಅನ್ವಯವಾಗುತ್ತದೆ. ಸಶಸ್ತ್ರ ಪಡೆಗಳಿಗೆ ಕಳೆದ ನಾಲ್ಕು ವರ್ಷಗಳಲ್ಲಿ ₹580 ಕೋಟಿ ಮೌಲ್ಯದ ಸಂಸ್ಕರಿಸಿದ ಧಾನ್ಯವನ್ನು ನಾಫೆಡ್ ಪೂರೈಸಿದೆ. ಈ ಸಂಸ್ಕರಣೆಗೆ ಒಟಿಆರ್ ಆಧಾರಿತ ವಿಧಾನವನ್ನೇ ಅನುಸರಿಸಲಾಗಿದೆ. ಆದೇಶವು ಇದರ ಬಗ್ಗೆ ಮೌನವಾಗಿದೆ.

ಎರಡನೆಯದಾಗಿ, ಹರಾಜು ವಿಧಾನವನ್ನು ಆದೇಶವು ನಿಷೇಧಿಸಿಲ್ಲ. ಅಂದರೆ, ಕಚ್ಚಾ ಧಾನ್ಯಗಳನ್ನು ಪೂರೈಸಿದಾಗ ರಾಜ್ಯಗಳು ಇದೇ ವಿಧಾನವನ್ನು ಅನುಸರಿಸಲು ಅವಕಾಶ ಇದೆ.

ಕೊನೆಯದಾಗಿ, ಧಾನ್ಯಗಳ ಸಂಸ್ಕರಣೆಗೆ ನಾಫೆಡ್ ಈ ಹರಾಜು ವಿಧಾನ ಅನುಸರಿಸುವುದಕ್ಕೆ ಮಾತ್ರ ತಡೆ ಇದೆ. 2019-20ನೇ ವರ್ಷದಲ್ಲಿ ₹180 ಕೋಟಿ ಮೌಲ್ಯದ ಶೇಂಗಾ ಎಣ್ಣೆ ಮತ್ತು ₹52.78 ಕೋಟಿ ಮೌಲ್ಯದ ಸಾರವರ್ಧಿತ ಸಾಸಿವೆ ಎಣ್ಣೆಯನ್ನು ಸಂಸ್ಕರಿಸುವ ಗುತ್ತಿಗೆಯನ್ನು ಇದೇ ಹರಾಜು ವಿಧಾನ ಬಳಸಿ ನೀಡಲಾಗಿದೆ.



ಕಳಪೆ ಗುಣಮಟ್ಟ

ಸಾಂಕ್ರಾಮಿಕದ ಅವಧಿಯಲ್ಲಿ ಬಡವರ ಕಲ್ಯಾಣ ಯೋಜನೆಯಡಿ ನಾಫೆಡ್ ಪೂರೈಸಿದ್ದ ಬೇಳೆಕಾಳುಗಳು ತಿನ್ನಲು ಯೋಗ್ಯವಲ್ಲ ಎಂದು ಹಲವು ರಾಜ್ಯಗಳು ಆರೋಪ ಮಾಡಿದ್ದಕ್ಕೆ ಕಾರಣಗಳಿವೆ ಎಂದು ಪರಿಷತ್ತು ಹೇಳಿದೆ. ಈ ದೂರಿನ ಬಗ್ಗೆ ರಿಪೋರ್ಟರ್ಸ್ ಕಲೆಕ್ಟಿವ್ ಈ ಹಿಂದೆ ವಿಸ್ತೃತ ವರದಿ ಮಾಡಿತ್ತು. ಇದಾದ ಬಳಿಕ, ಕಳಪೆ ಧಾನ್ಯ ಪೂರೈಕೆಗೆ ಆಯಾ ಗಿರಣಿಯವರೇ ಹೊಣೆ ಎಂದು ನಾಫೆಡ್ ಹೊಣೆಗಾರಿಕೆಯನ್ನು ವರ್ಗಾಯಿಸಿತ್ತು.

ಖರೀದಿ ಹಾಗೂ ಪೂರೈಕೆ ಹಂತದಲ್ಲಿ ಧಾನ್ಯಗಳ ಗುಣಮಟ್ಟ ಪರೀಕ್ಷಿಸುವ ವಿಧಾನ ತೀರಾ ದುರ್ಬಲವಾಗಿದೆ ಎಂಬುದನ್ನು ಪರಿಷತ್ ತನ್ನ ಅಧ್ಯಯನ ವರದಿಯಲ್ಲಿ ಕಂಡುಕೊಂಡಿದೆ. ತರಬೇತಿ ಪಡೆಯದ ಹಾಗೂ ಸೂಕ್ತ ಸಾಧನಗಳನ್ನು ಹೊಂದಿರದ ಅಧಿಕಾರಿಗಳು ಗುಣಮಟ್ಟ ಪರೀಕ್ಷೆ ನಡೆಸಿದ್ದಾರೆ. ಕೃಷಿ ಇಲಾಖೆ ರೂಪಿಸಿದ ಮಾನದಂಡಗಳ ಪ್ರಕಾರ, ಯಾವ ಯಾವ ಗುಣಮಟ್ಟವನ್ನು ಕಾಯ್ದುಕೊಳ್ಳಲಾಗಿದೆ ಎಂದು ಗುರುತು ಮಾಡಬೇಕಿತ್ತು. ಆದರೆ ಅವರು ಹಲವು ಚೌಕಗಳನ್ನು ಖಾಲಿ ಬಿಟ್ಟಿದ್ದರು.

ಭಾರತ ಆಹಾರ ನಿಗಮದ (ಎಫ್‌ಸಿಐ) ಧಾನ್ಯಗಳನ್ನು ಹರಾಜು ಹಾಕುವ ವೇಳೆ, ಮೊದಲು ಖರೀದಿಸಿ ದಾಸ್ತಾನು ಮಾಡಲಾದ ಧಾನ್ಯಗಳನ್ನು ಮೊದಲಿಗೆ ಹರಾಜು ಹಾಕಲಾಗುತ್ತದೆ. ಹೀಗೆ ಮಾಡುವುದರಿಂದ ಉಗ್ರಾಣಗಳಲ್ಲಿ ಹಳೆಯ ದಾಸ್ತಾನು ಉಳಿದುಕೊಳ್ಳದಂತೆ ನೋಡಿಕೊಳ್ಳಲಾಗುತ್ತದೆ. ಆದರೆ ನಾಫೆಡ್ 'ಮೊದಲು ಬಂದ ಧಾನ್ಯ ಮೊದಲಿಗೆ ಪೂರೈಕೆ' ನಿಯಮವನ್ನು ಗಾಳಿಗೆ ತೂರಿತು.

'ಪಿಎಂಜಿಕೆಎವೈ ಅಡಿ, 'ಮೊದಲು ಬಂದ ಧಾನ್ಯ ಮೊದಲಿಗೆ ಪೂರೈಕೆ' ನಿಯಮವನ್ನು ಅನ್ವಯ ಮಾಡುವುದಿಲ್ಲ' ಎಂದು 2020ರ ಏಪ್ರಿಲ್‌ನಲ್ಲಿ ಗ್ರಾಹಕ ವ್ಯವಹಾರ ಇಲಾಖೆಗೆ ನಾಫೆಡ್ ತಿಳಿಸಿತ್ತು. ನಾಫೆಡ್ ಪ್ರಕಾರ, ಅಂತರ್ ಸಚಿವಾಲಯ ಕಾರ್ಯದರ್ಶಿಗಳ ಸಮಿತಿಯು ಈ ಶಿಫಾರಸು ಮಾಡಿತ್ತು. ನಾಫೆಡ್ ಈ ಹಿಂದೆ ಹಲವು ಬಾರಿ ಈ ನಿಯಮವನ್ನು ಉಲ್ಲಂಘಿಸಿರುವ ಅಂಶವನ್ನು ಪರಿಷತ್ತು ವರದಿಯಲ್ಲಿ ಉಲ್ಲೇಖಿಸಿದೆ.

ಧಾನ್ಯಗಳ ಬಳಕೆಗೆ ಸಾಮಾನ್ಯವಾಗಿ ಆರು ತಿಂಗಳು ಸಮಯವಿರುತ್ತದೆ. ಗೊತ್ತುಪಡಿಸಿದ ದಾಸ್ತಾನು ಕ್ರಮಗಳನ್ನು ತೆಗೆದುಕೊಂಡರೆ, ಇನ್ನೂ ಕೆಲವು ತಿಂಗಳು ಶೇಖರಿಸಿ ಇರಿಸಬಹುದು. ಆದರೆ, ಯಾವುದೇ ನಿರ್ವಹಣೆ ಇಲ್ಲದೇ 3 ವರ್ಷಕ್ಕಿಂತ ಹೆಚ್ಚು ಕಾಲ ಬೇಳೆಕಾಳುಗಳನ್ನು ಸಂಗ್ರಹಿಸಿರುವುದನ್ನು ಪರಿಷತ್ ಗಮನಿಸಿದೆ. ಇಂತಹ ಧಾನ್ಯಗಳನ್ನು ಹರಾಜು ಹಾಕುವಾಗ, ನಾಫೆಡ್ ಅವುಗಳ ಬಳಕೆಯ ಗುಣಮಟ್ಟದ ಬಗ್ಗೆ ಯಾವುದೇ ಗಮನ ಹರಿಸದಿರುವುದನ್ನು ಪರಿಷತ್ ಬೊಟ್ಟುಮಾಡಿದೆ.

> ನಮ್ಮಂತಹ ಕೆಲವರನ್ನು ಹರಾಜು ಪ್ರಕ್ರಿಯೆಯಿಂದ ಹೊರಗಿಡಲೆಂದೇ ನಾಫೆಡ್ ಹರಾಜು ನಿಯಮಗಳನ್ನು ವಿನ್ಯಾಸಗೊಳಿಸಿದೆ. ಉದಾಹರಣೆಗೆ, ಕಂಪನಿಯ ಕನಿಷ್ಠ ವಹಿವಾಟು ಇಷ್ಟಿರಬೇಕು, ಇಂತಹ ರಾಜ್ಯಗಳು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಬೇಕು ಎಂಬ ನಿಯಮಗಳನ್ನು ನಾಫೆಡ್ ರೂಪಿಸಿದೆ
>
> ಒಟಿಆರ್ ಹರಾಜಿನಲ್ಲಿ ಭಾಗವಹಿಸಿದ್ದ ಗಿರಣಿ ಮಾಲೀಕ

> ನಾಫೆಡ್‌ನ ಕೆಲವು ಟೆಂಡರ್‌ಗಳು ಎಲ್ಲರಿಗೂ ಮುಕ್ತವಾಗಿರುತ್ತವೆ. ಆದರೆ, ಅವುಗಳನ್ನು ಕೆಲವು ವ್ಯಕ್ತಿಗಳು ನಿಯಂತ್ರಿಸಿ, ತಮಗೆ ಬೇಕಾದವರಿಗೆ ಅನುಕೂಲ ಕಲ್ಪಿಸಲು ಷರತ್ತುಗಳನ್ನು ವಿಧಿಸುತ್ತಾರೆ. ಉದಾಹರಣೆಗೆ, ಕಳೆದ ವರ್ಷ ಎಪಿಒ (ಸೇನಾ ಖರೀದಿ) ಟೆಂಡರ್ ಕರೆದಿದ್ದರು. ಹಿಂದಿನ ಬಾರಿ ಎಪಿಒ ಟೆಂಡರ್‌ನಲ್ಲಿ ಭಾಗವಹಿಸಿದ್ದವರು ಮಾತ್ರ ಈ ಬಾರಿ ಭಾಗವಹಿಸಬೇಕು ಎಂಬ ಷರತ್ತು ರೂಪಿಸಿದ್ದರು. ಈ ನಿಯಮದಿಂದಾಗಿ ನನಗೆ ಟೆಂಡರ್‌ನಲ್ಲಿ ಭಾಗವಹಿಸಲು ಆಗಿಲಿಲ್ಲ. ಇದು ಸ್ಪರ್ಧೆಯನ್ನು ನಿರ್ಬಂಧಿಸಿದ್ದಲ್ಲದೇ, ಕಡಿಮೆ ಒಟಿಆರ್ ನಮೂದಿಸಲು ಅವಕಾಶ ಮಾಡಿಕೊಟ್ಟಿತು
>
> ಒಟಿಆರ್ ಹರಾಜಿನಲ್ಲಿ ಭಾಗವಹಿಸಿದ್ದ ವ್ಯಾಪಾರಿ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 109

ಪರಮೇಶ್ವರಿಯೇ ಸತಿ-ಪಾರ್ವತಿ

ಸೃಷ್ಟಿವರ್ಣನ – ಈ ಅಧ್ಯಾಯದಲ್ಲಿ ಬ್ರಹ್ಮನು ನಾರದನಿಗೆ 'ಪ್ರಾಣಿಗಳ ಕರ್ಮಾನುಗುಣವಾಗಿ, ಶಿವನ ಆಜ್ಞೆಯಂತೆ ಲೆಕ್ಕವಿಲ್ಲದಷ್ಟು ಜನ ಹುಟ್ಟಿದರು' ಎಂದು ಜಗತ್ತು ಸೃಷ್ಟಿಯಾದ ವಿವರ ತಿಳಿಸುತ್ತಾನೆ.

ದಕ್ಷನಿಗೆ ಕಲ್ಪಬೇಧದಿಂದ ಅರವತ್ತು ಹೆಣ್ಣುಮಕ್ಕಳು ಹುಟ್ಟಿದರು. ಅವರಲ್ಲಿ ಹತ್ತು ಮಂದಿಯನ್ನು ಧರ್ಮನಿಗೂ, ಇಪ್ಪತ್ತೇಳು ಮಂದಿಯನ್ನು ಚಂದ್ರನಿಗೆ, ಹದಿಮೂರು ಹೆಣ್ಣುಮಕ್ಕಳನ್ನೂ ಕಶ್ಯಪನಿಗೆ, ನಾಲ್ಕು ಕನ್ಯೆಯರನ್ನು ಅತಿಶಯ ರೂಪಶಾಲಿಯಾದ ಗರುಡನಿಗೆ ಮದುವೆಮಾಡಿಕೊಡುತ್ತಾನೆ. ಉಳಿದ ಆರು ಹೆಣ್ಣುಮಕ್ಕಳನ್ನು ಭೃಗು, ಅಂಗಿರಸ್ಸು, ಕೃಶಾಶ್ವ ಎಂಬುವರಿಗೆ ತಲಾ ಇಬ್ಬರಂತೆ ಮದುವೆಮಾಡಿಕೊಟ್ಟ. ಈ ನವದಂಪತಿಗಳಿಂದ ಚರಾಚರಾತ್ಮಕವಾದ ಸೃಷ್ಟಿಯು ನಡೆಯಿತು. ಅದರಲ್ಲು ಕಶ್ಯಪ ಪ್ರಜಾಪತಿ ಮತ್ತು ಆತನ ಹದಿಮೂರು ಪತ್ನಿಯರ ಸಂತತಿಯೇ ಮೂರುಲೋಕವನ್ನೂ ವ್ಯಾಪಿಸಿಬಿಟ್ಟಿತು.

ಇಹದಲ್ಲಿರುವ ಚರಾಚರಾತ್ಮಕನಾದ ಯಾವುದೊಂದು ವಸ್ತುವೂ ಇವರದಲ್ಲದೆ ಬೇರೆಯಲ್ಲ. ದೇವತೆಗಳೂ ಋಷಿಗಳೂ ದೈತ್ಯರೂ, ಮರಗಿಡಗಳೂ ಪಕ್ಷಿಗಳೂ ಬೆಟ್ಟಗುಡ್ಡಗಳೂ ಬಳ್ಳಿಗಳೆಲ್ಲವೂ ಕಶ್ಯಪ ಮುನಿ ಕೈ ಹಿಡಿದ ಆ ದಕ್ಷಪುತ್ರಿಯರಲ್ಲಿ ಹುಟ್ಟಿದರು. ಈ ರೀತಿ, ಪಾತಾಳದಿಂದ ಬ್ರಹ್ಮನಿವಾಸವಾದ ಸತ್ಯಲೋಕದವರೆಗೂ ಸಕಲ ಬ್ರಹ್ಮಾಂಡವೂ, ದಕ್ಷಕನ್ಯೆಯರ ಮಕ್ಕಳಿಂದ ತುಂಬಿಹೋಯಿತು. ಅಂದಿನಿಂದ ಇಂದಿನವರೆಗೂ ದಕ್ಷನ ಸಂತತಿಯವರಿಂದ ಚರಾಚರಾತ್ಮಕವಾದ ಈ ಪ್ರಪಂಚವು ಶೂನ್ಯವಾಗಿರುವುದನ್ನು ಕಂಡಿಲ್ಲ ಎನ್ನುತ್ತಾನೆ ಬ್ರಹ್ಮ.

ಶ್ರೀಹರಿಯು ಎಡಭಾಗದಲ್ಲು, ಬ್ರಹ್ಮ ಬಲಭಾಗದಲ್ಲು, ರುದ್ರನು ಹೃದಯದಲ್ಲಿರುವ ಆ ಪರಮಶಿವ ಮೂರು ಬಗೆಯಾಗಿ ಕಾಣಿಸುತ್ತಾನೆ. ಅವರೇ ಬ್ರಹ್ಮ, ವಿಷ್ಣು ಮತ್ತು ರುದ್ರ. ಈ ಮೂವರೂ ಗುಣಾತ್ಮಕರಾದರೆ, ಪರಬ್ರಹ್ಮಸ್ವರೂಪ ಮತ್ತು ನಾಶರಹಿತನಾದ ಪರಮಶಿವ ಯಾವಾಗಲೂ ನಿರ್ಗುಣ. ಗುಣಾತ್ಮಕರಾದ ವಿಷ್ಣುವು ಸತ್ವಗುಣವಾದರೆ, ಬ್ರಹ್ಮ ರಜೋಗುಣ. ರುದ್ರ ತಮೋಗುಣ. ಲೋಕವ್ಯವಹಾರದಿಂದ ಅವರಿಗೆ ಇಂಥ ಗುಣಗಳಿವೆ. ಆದರೆ ವಸ್ತುಸ್ಥಿತಿ ಬೇರೆ ಇದೆ. ವಿಷ್ಣು ಒಳಗೆ ತಮೋಮಯನಾಗಿ ಕಂಡರೂ, ಹೊರಗೆ ಸತ್ವಮಯನಾಗಿ ಕಾಣಿಸುತ್ತಾನೆ. ಬ್ರಹ್ಮ ಒಳಗೂ ಹೊರಗೂ ಕೇವಲ ರಜೋಮಯನೇ ಆಗಿರುತ್ತಾನೆ. ಅದರಂತೆಯೇ, ಸರಸ್ವತಿಯಲ್ಲಿ ರಜೋಗುಣ, ಸತೀದೇವಿಯಲ್ಲಿ ಸತ್ವಮಯ, ಲಕ್ಷ್ಮಿಯಲ್ಲಿ ತಮೋಗುಣವಿದೆ. ಈ ತ್ರಿದೇವಿಗಳ ಮೂಲಳಾದ ಪರಮೇಶ್ವರಿಯಾದ ಶಿವೆಯು ಪರಶಿವನಂತೆ ನಿರ್ಗುಣಳು.

ಶಿವನ ಶಾಸನದಂತೆ ಬ್ರಹ್ಮ ಸೃಷ್ಟಿಕಾರ್ಯವನ್ನು ನಿರ್ವಹಿಸುತ್ತಿರುವಾಗ, ಪರಶಿವನ ಮತ್ತೊಂದು ರೂಪವಾದ ರುದ್ರ ತನ್ನ ತ್ರಿಶೂಲಾಗ್ರದಲ್ಲಿಟ್ಟು ರಕ್ಷಿಸುತ್ತಿದ್ದ ಸತಿದೇವಿಯನ್ನು ದಕ್ಷನ ಮಗಳಾಗಿ ಜನಿಸುವಂತೆ ಮಾಡಿದ. ಶಿವೆಯೇ ಸತಿಯೆನಿಸಿ, ಶಂಕರನ ಅರ್ಧಾಂಗಿಯಾದಳು. ತಂದೆಯಾದ ದಕ್ಷನ ಯಜ್ಞದಲ್ಲಿ ಆಹುತಿಯಾದ ಸತಿ, ಮತ್ತೆ ಆ ದೇಹವನ್ನು ಸ್ವೀಕರಿಸದೆ ತನ್ನ ಮೂಲಸ್ಥಾನಕ್ಕೆ ತೆರಳಿದಳು. ದೇವತೆಗಳ ಪ್ರಾರ್ಥನೆಯ ಮೇರೆಗೆ ಆ ಶಿವೆಯೇ ಪರ್ವತರಾಜನ ಪುತ್ರಿಯಾಗಿ ಮತ್ತೆ ಅವತರಿಸಿ, ಶಿವನನ್ನೇ ಪತಿಯನ್ನಾಗಿ ಹೊಂದಿದಳು.

ಅವಳಿಗೆ ಕಾಳಿಕಾ, ಚಂಡಿಕಾ, ಭದ್ರಾ, ಚಾಮುಂಡಾ, ವಿಜಯಾ, ಜಯಾ, ಜಯಂತೀ, ಭದ್ರ ಕಾಳೀ, ದುರ್ಗಾ, ಭಗವತೀ, ಕಾಮಾಖ್ಯಾ, ಕಾಮದಾ, ಅಂಬಾ, ಮೃಡಾಣೀ, ಸರ್ವಮಂಗಳಾ ಮುಂತಾದ ಹಲವು ಹೆಸರುಗಳಿವೆ. ಭುಕ್ತಿಯನ್ನೂ ಮುಕ್ತಿಯನ್ನೂ ನೀಡುವ ಅವಳ ಹೆಸರುಗಳಲ್ಲಿ ಪಾರ್ವತೀ ಎಂಬ ಹೆಸರೇ ಹೆಚ್ಚು ಬಳಕೆ. ಸತ್ವ-ರಜಸ್-ತಮೋ ಗುಣಮಯರಾದ ಲಕ್ಷ್ಮಿ-ಸರಸ್ವತಿ-ಪಾರ್ವತಿ ಎಂಬ ಮೂವರು ದೇವಿಯರೂ, ಬ್ರಹ್ಮ ವಿಷ್ಣು ಮಹೇಶ್ವರರೊಂದಿಗೆ ಸೇರಿ ಸೃಷ್ಟಿಕಾರ್ಯವನ್ನು ಚೆನ್ನಾಗಿ ನಡೆಸಿದರು.

ಶಿವನೊಬ್ಬನೇ ಪರಬ್ರಹ್ಮ, ನಾವು ಮೂವರು ಪರಶಿವನ ರೂಪಗಳು. ಗುಣಭೇದದಿಂದ ಬ್ರಹ್ಮ, ವಿಷ್ಣು, ಮಹೇಶ್ವರ ಎನಿಸಿದ್ದೇವೆ. ಸ್ವತಂತ್ರನೂ ಪರಮಪುರುಷನೂ ಗುಣಾತೀತನೂ ಆದ ಪರಮಶಿವನು ಶಿವೆಯೊಡನೆ ಶಿವಲೋಕದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿರುವ. ಸಗುಣನಾಗಿದ್ದರೂ ರುದ್ರನು ಶಿವನ ಪೂರ್ಣಾವತಾರವಾದುದರಿಂದ ಆತನನ್ನು ಸಾಕ್ಷಾತ್ ಶಿವನೆಂದೇ ಭಾವಿಸಬೇಕು. ಐದು ಮುಖಗಳುಳ್ಳ ಮಹೇಶ್ವರ ಕೈಲಾಸದಲ್ಲಿ ವಾಸಿಸುತ್ತಾನೆ. ಬ್ರಹ್ಮಾಂಡವೆಲ್ಲವೂ ನಾಶವಾದರೂ ಕೈಲಾಸಕ್ಕೆ ನಾಶವೆಂಬುದೇ ಇಲ್ಲ - ಎಂದು ಬ್ರಹ್ಮ ಹೇಳುತ್ತಾನೆ. ಇಲ್ಲಿಗೆ ರುದ್ರಸಂಹಿತೆಯ ಮೊದಲ ಸೃಷ್ಟಿಖಂಡದಲ್ಲಿ ಸೃಷ್ಟಿವರ್ಣನ ಎಂಬ ಹದಿನಾರನೆಯ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಸೂರ್ಯ-ಕಮಲ

ಜಗದ ಸಂತಾಪ ಸಂತಸ ಸಂಭ್ರಮಂಗಳುಲಿ |
ಬಗಿದು ನರನೆದೆಯ, ಜೀವನ ಪಿಡಿದು ಕುಲುಕೆ ||
ಸೊಗಯಿಪುದು ಮನಸಿಗದು ಕವಿಕಲಾರಸಿಕರ್ಗೆ |
ಜಗ ಸೂರ್ಯ ನೀಂ ಕಮಲ - ಮಂಕುತಿಮ್ಮ
|| 618 ||

ಪದ-ಅರ್ಥ: ಸಂಭ್ರಮಂಗಳುಲಿ = ಸಂಭ್ರಮಂಗಳ + ಉಲಿ(ಧ್ವನಿ), ಬಗಿದು = ಸೀಳಿ, ನರನೆದೆಯ = ನರನ + ಎದೆಯ, ಕುಲುಕೆ = ಕುಲುಕಾಡಿಸಿದರೆ, ಸೊಗಯಿಪುದು = ಸೊಗಸೆನಿಸುವುದು.

ವಾಚ್ಯಾರ್ಥ: ಜಗತ್ತಿನ ಸಂತಾಪ, ಸಂತೋಷ, ಸಂಭ್ರಮಗಳ ಧ್ವನಿ, ಮನುಷ್ಯನ ಎದೆಯನ್ನು ಸೀಳಿ, ಜೀವವನ್ನು ಹಿಡಿದು ಕುಲುಕುತ್ತವೆ. ಅವು ಕವಿಗಳಿಗೆ, ಕಲಾವಿದರಿಗೆ, ರಸಿಕರಿಗೆ ಸೊಗಸೆನಿಸುತ್ತವೆ. ಜಗತ್ತು ಸೂರ್ಯನಾದರೆ, ನೀನು ಕಮಲ.

ವಿವರಣೆ: ವಾಲ್ಮೀಕಿ ಮಹರ್ಷಿಗಳು ತಮಸಾ ನದೀ ತೀರದಲ್ಲಿ ಕುಳಿತಾಗ, ಸಂತೋಷದಿಂದ ಹಾರಾಡುತ್ತಿದ್ದ ಕ್ರೌಂಚ ಪಕ್ಷಿಯ ಜೋಡಿಯನ್ನು ನೋಡುತ್ತಿದ್ದರು. ಆಗ ಬೇಡನೊಬ್ಬ ಬಾಣಹೂಡಿ ಅವುಗಳಲ್ಲಿ ಗಂಡು ಹಕ್ಕಿಯನ್ನು ಕೊಂದುಬಿಟ್ಟ. ಅದರ ಸಂಗಾತಿ ಹೆಣ್ಣು ಪಕ್ಷಿ ಸಂಕಟದಿಂದ ಗೋಳಿಡುತ್ತದೆ. ಈ ಹೃದಯವಿದ್ರಾವಕ ಘಟನೆಯನ್ನು ನೋಡಿ, ಕರುಣೆ, ದುಃಖ, ಕೋಪದಿಂದ ವಾಲ್ಮೀಕಿಗಳು ಬೇಡನನ್ನು ಶಪಿಸುತ್ತಾರೆ. ಅವರಿಗರಿವಿಲ್ಲದಂತೆ ಶ್ಲೋಕವೊಂದು ಹೊರಟಿತು.

ಮಾ ನಿಷಾದ ಪ್ರತಿಷ್ಠಾಂ ತ್ವಂ ಆಗಮಃ ಶಾಶ್ವತೀ ಸಮಾಃ |
ಯತ್ ಕ್ರೌಂಚಮಿಥುನಾದೇಕಂ ಅವಧೀಃ ಕಾಮಮೋಹಿತಮ್ ||

ಆ ಸಮಯಕ್ಕೆ ಬ್ರಹ್ಮದೇವ ಆಶ್ರಮಕ್ಕೆ ಬಂದು ಇದೇ ಶ್ಲೋಕರೂಪದಲ್ಲಿ ರಾಮಾಯಣ ಕಾವ್ಯ ರಚಿಸಲು ಹೇಳುತ್ತಾನೆ. ಮಹರ್ಷಿ ವಾಲ್ಮೀಕಿ 24,000 ಶ್ಲೋಕಗಳನ್ನೊಳಗೊಂಡ ರಾಮಾಯಣ ಮಹಾಕಾವ್ಯವನ್ನು ರಚಿಸಿದರು. ಪ್ರಪಂಚಕ್ಕೆ ಮೊದಲ ಮಹಾಕಾವ್ಯ ದೊರಕಿತು. ಇದು ಒಂದು ಘಟನೆಗೆ, ಸಿದ್ಧವಾದ ಮನಸ್ಸು ನೀಡಿದ ಫಲ.

ನಳ ದಮಯಂತಿಯರ ಕಥೆಯನ್ನು ಕೇಳಿ, ಅದರಿಂದ ಪ್ರಭಾವಿತರಾದ ರಾಜಾ ರವಿವರ್ಮರ ಚಿತ್ರ ಅಮರವಾದದ್ದು. ದಮಯಂತಿ, ತನ್ನ ಮುಂದೆ ಶಿಲಾಸ್ತಂಭದ ಮೇಲೆ ಕುಳಿತು ನಳನ ಸಮಾಚಾರವನ್ನು ತಿಳಿಸುತ್ತಿರುವ ಹಂಸೆಯನ್ನು ಏಕಾಗ್ರತೆಯಿಂದ ಕೇಳುವ ಚಿತ್ರ ಅದ್ಭುತ. ಅದರಂತೆ ಮಹಾಭಾರತದ ಕಥೆಯಿಂದ ಪ್ರೇರಿತರಾಗಿ ಎಸ್.ಎಂ.ಪಂಡಿತರು ರಚಿಸಿರುವ ಸಾಲು ಸಾಲು ವರ್ಣಚಿತ್ರಗಳು ಇಡೀ ಮಹಾಭಾರತವನ್ನು ನಮ್ಮ ಕಣ್ಣ ಮುಂದೆ ಕಟ್ಟುತ್ತವೆ. ತಮ್ಮ ಬದುಕಿನಲ್ಲಾದ ಪ್ರಸಂಗವೊಂದು ಕನಕದಾಸರ ಅತ್ಯಂತ ಮನಮೋಹಕವಾದ, ಆರ್ತವಾದ 'ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ' ಎಂಬ ಹಾಡಾಗಿ ಹರಿಯಿತು. ಮೇನಕೆ ಮತ್ತು ವಿಶ್ವಾಮಿತ್ರರ ಮಗಳು ಶಕುಂತಲೆ ದುಷ್ಯಂತನನ್ನು ಮದುವೆಯಾಗಿ ಭರತನನ್ನು ಪಡೆಯುವ ಕಥೆ ಕಾಳಿದಾಸನ ಮಹಾಪ್ರತಿಭೆಯನ್ನು ಕೆಣಕಿ 'ಅಭಿಜ್ಞಾನ ಶಾಕುಂತಲ' ನಾಟಕ ರಚನೆಗೆ ಕಾರಣವಾಯಿತು. ಆ ಶಾಕುಂತಲ ನಾಟಕದ ಒಂದು ಸಾಲು 'ಯಯಾತಿಗೆ ಶರ್ಮಿಷ್ಠೆ ಹೇಗೆ ಪ್ರಿಯಳಾಗಿದ್ದಳೋ, ನೀನೂ ಹಾಗೆಯೇ ನಿನ್ನ ಗಂಡನಿಗೆ ಪ್ರಿಯಳಾಗಿರು' ವಿ.ಎಸ್. ಖಾಂಡೇಕರ್ ಅವರಿಂದ 'ಯಯಾತಿ'ಯಂತಹ ಮಹೋನ್ನತ ಕೃತಿಯನ್ನು ರಚಿಸಲು ನೆಪವಾಯಿತು.

ಕಗ್ಗ ಆ ಮಾತನ್ನೇ ಹೇಳುತ್ತದೆ. ಜಗದ ಸಂತೋಷ, ತಾಪ, ಸಂಭ್ರಮಗಳು ಮನುಷ್ಯನ ಮನಸ್ಸನ್ನು ಕುಲುಕುವುದು ಮಾತ್ರವಲ್ಲ. ಸಾಹಿತ್ಯಕ್ಕೆ, ಸಂಗೀತಕ್ಕೆ, ಕಲೆಗೆ ಕಾರಣವಾಗಿ ಹೃದಯವನ್ನು ಅರಳಿಸುತ್ತವೆ. ಜಗತ್ತು ಸೂರ್ಯನಾದರೆ ಮನುಷ್ಯ ಕಮಲವಿದ್ದಂತೆ. ಕಮಲದ ಅರಳುವಿಕೆ, ಮುದುಡುವಿಕೆ ಸೂರ್ಯನ ಮೇಲೆ ಅವಲಂಬಿತವಾದದ್ದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಸೋಮವಾರ ಮೇ 2, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ದ್ವಿತೀಯ ಗಂ. 29-19 ನಕ್ಷತ್ರ: ಕೃತ್ತಿಕಾ ಗಂ. 24-34 ಯೋಗ: ಸೌಭಾಗ್ಯ ಗಂ. 15-37, ಕರಣ: ಬಾಲವ ಗಂ. 16-20, ಮೇಷ ಮಾಸದ 18 ನೇ ದಿನ. ರಾಹುಕಾಲ: ಬೆಳಿಗ್ಗೆ 07:30-09:00
ಸೂರ್ಯೋದಯ : 06-13 ಸೂರ್ಯಾಸ್ತ : 06-42 ಮುಸ್ಲಿಂ ದಿನಾಂಕ : 30 ರಂಜಾನ್
ಅದೃಷ್ಟ ಸಂಖ್ಯೆ : 4, 7

ಮೇಷ: ಮಾತು ಕಡಿಮೆ ಮಾಡಿ ಕೆಲಸದಲ್ಲಿ ಮಗ್ನರಾಗುವುದರಿಂದ ನಿಮ್ಮ ಕೆಲಸಗಳು ನೆಮ್ಮದಿಯಿಂದ ನಡೆಯುತ್ತವೆ. ಕಳೆದು ಹೋದ ವಸ್ತುಗಳನ್ನು ಹುಡುಕಲು ಸಮಯ ಉಪಯೋಗಿಸುವುದು ನಿಷ್ಪ್ರಯೋಜಕ.

ವೃಷಭ: ದಾಯಾದಿಗಳು ಕಲಹಗಳನ್ನು ಬಿಟ್ಟು ರಾಜಿ ಮಾಡಿಕೊಳ್ಳುವ ಮನೋಭಾವಕ್ಕೆ ಬಂದಾರು. ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಅನೇಕ ತರಹದ ಅವಕಾಶಗಳು ಒದಗಿ ಬರುತ್ತದೆ.

ಮಿಥುನ: ಕುಟುಂಬದಲ್ಲಿನ ನೂತನ ಶಿಶುವಿನ ಜನನ ಕುಟುಂಬದ ಸರ್ವರ ಸಂತೋಷಕ್ಕೆ ಕಾರಣವಾಗುತ್ತದೆ. ಅವಕಾಶಗಳನ್ನು ಜಾಣತನದಿಂದ ಉಪಯೋಗಿಸಿಕೊಂಡಲ್ಲಿ, ಜೀವನದಲ್ಲಿ ಸ್ಥಿರತೆ ಪ್ರಾಪ್ತಿಯಾಗುವುದು.

ಕರ್ಕಾಟಕ: ಉನ್ನತ ವಿದ್ಯಾಭ್ಯಾಸದ ಬಗ್ಗೆ ಚಿಂತನೆ ನಡೆಯುವುದು. ವಿರೋಧಿಗಳ ಅಥವಾ ಸಂಬಂಧಿಕರ ಟೀಕೆಗಳಿಗೆ ಕಿವಿಯೊಡ್ಡಿದರೆ, ಕೇವಲ ಸಮಯ ಮಾತ್ರ ಹಾಳಾಗುವುದು ತಿಳಿದಿರಲಿ.

ಸಿಂಹ: ಮಾತುಗಾರಿಕೆಯ ನಿಮ್ಮ ಅಭ್ಯಾಸದಿಂದ ಇತರರನ್ನು ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ. ಪೊಲೀಸ್ ಅಧಿಕಾರಿಗಳಿಗೆ ತುರ್ತು ಕೆಲಸ ಒದಗುವ ಸಾಧ್ಯತೆ. ಆರೋಗ್ಯದಲ್ಲಿ ಏರುಪೇರಾಗುವ ಲಕ್ಷಣ. ಆತಂಕಕ್ಕೆ ಒಳಗಾಗದಿರಿ.

ಕನ್ಯಾ: ಕೆಲಸದಲ್ಲಿ ಈ ದಿನ ವಿಘ್ನಗಳು ಎದುರಾದರೂ, ಅಪೇಕ್ಷಿತ ಫಲ ದೊರಕುವುದು. ಹೊಸದನ್ನು ಕಲಿಯುವುದಕ್ಕೆ ಬಹಳ ಉತ್ಸುಕರಾಗಿದ್ದೀರಿ. ಇತರರನ್ನು ನಂಬದಿರುವ ಪರಿಸ್ಥಿತಿ ಬರುವುದು.

ತುಲಾ: ನಿಮ್ಮ ಕೋಪದ ಮೇಲೆ ನಿಯಂತ್ರಣವನ್ನು ಸಾಧಿಸದಿದ್ದರೆ ಸಹೋದರರು ಮತ್ತು ಸ್ನೇಹಿತರು ಎದುರಾಳಿಗಳಾಗುವರು. ಸಾಧ್ಯವಾದ ಮಟ್ಟಿಗೆ ಶಾಂತವಾಗಿರಿ. ತೋಟದ ಬೆಳೆಗಳಿಂದ ಉತ್ತಮ ಆದಾಯವಿರುವುದು.

ವೃಶ್ಚಿಕ: ಕಮಿಶನ್ ಏಜೆಂಟ್‌ಗಳಿಗೆ ಮತ್ತು ಸರಕು ಸಾಗಾಣಿಕೆದಾರರಿಗೆ ಉತ್ತಮ ದಿನ. ಮಕ್ಕಳ ವಿಷಯದಲ್ಲಿ ಕಾಳಜಿಯನ್ನು ತೋರಿ ವ್ಯವಸ್ಥಿತವಾದ ತೀರ್ಮಾನವನ್ನು ತೆಗೆದುಕೊಂಡಲ್ಲಿ ಭವಿಷ್ಯ ಉತ್ತಮವಾಗುವುದು.

ಧನು: ತಾರ್ಕಿಕ ಹಾದಿಯಲ್ಲಿ ಬರುವ ಭಾವನಾತ್ಮಕ ಆಲೋಚನೆಗಳನ್ನು ಬದಿಗಿರಿಸಿ. ತಾರ್ಕಿಕ ಭಾವನೆಗಳ ಬದಲು ವಾಸ್ತವದತ್ತ ಗಮನ ಹರಿಸಲು ಇದು ಸೂಕ್ತವಾದ ಸಮಯ. ನಟನಾ ವೃತ್ತಿಯವರಿಗೆ ಖ್ಯಾತಿ ಹರಿದು ಬರಲಿದೆ.

ಮಕರ: ಗುರಿ ಸಾಧಿಸಲು ಕೆಲ ಹೊಸ ಬದಲಾವಣೆಗಳು ಅನಿವಾರ್ಯ ಎನಿಸಲಿದೆ. ಹಣಕಾಸಿನ ಸಂಸ್ಥೆಗೆ ಪಾಲುದಾರರಾಗುವ ಸಾಧ್ಯತೆ. ಟೆಕ್ಸ್‌ಟೈಲ್ ಉದ್ಯಮದವರಿಗೆ ರಫ್ತು ವ್ಯಾಪಾರಗಳಿಂದ ಲಾಭ.

ಕುಂಭ: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರಿಂದ ಬಂದಿರುವ ಸಲಹೆ ಸರಿಯಾದದ್ದಾಗಿದೆ. ವಿದ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣದಲ್ಲಿ ಉತ್ತಮವಾದ ಯಶಸ್ಸು.


ಮೀನ: ಜೀವನಶೈಲಿಯಲ್ಲಿ ಮಹತ್ತರ ಬದಲಾವಣೆ ತಂದುಕೊಳ್ಳುವ ಸನ್ನಿವೇಶ ಬರಲಿದೆ. ನಿರ್ದಿಷ್ಟ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು. ಸಾಂಸಾರಿಕ ವಿಚಾರಕ್ಕೆ ಸಂಬಂಧಿಸಿದಂತೆ ಆತುರದ ತೀರ್ಮಾನ ಸರಿಯಲ್ಲ.

ಪದಬಂಧ 4945

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬಟ್ಟೆಯ ಅಗಲವಿದು (2)
2.ದೊಡ್ಡ ಅಲೆ (3)
4.ತೆಳುವಾದ ಹೊಟ್ಟೆಯವಳು (4)
6.ಸಮ ಸೂಚಕ ಯಂತ್ರ (4)
8.ಪಾನಕ ಕುಡಿದು ತಯಾರಿಸಿದ ಅಡುಗೆ (2)
9.ಬಿಂಕದಿಂದ ಕಟ್ಟಿರುವ ತೆರ! (2)
10.ಹೂಳಿಟ್ಟ ನಿಧಿಯು ಕರದೊಳಗಿದೆ (4)
12.ನಡುವೆ ಕೈ ಇದ್ದಾಗ ನಡೆದ ಘಟನೆ! (4)
14.ಈತ ಸರಿಸಮನಾದವನು (3)
15.ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)

ಮೇಲಿಂದ ಕೆಳಕ್ಕೆ
1.ಅಗಲವಾದ ಹರಿವಾಣ (3)
2.ಆಳವಾದ ಗುಂಡಿಯಿದು (3)
3.ಲಂಗ ಧರಿಸಿದವಳು ನೀಡಿರುವ ಸಾಂಬಾರ ದ್ರವ್ಯ (3)
5.ಅತ್ತಿಂದಿತ್ತ ತೂಗಾಡುವ ವಸ್ತು (3)
7.ವಿಲಾಸಪ್ರಿಯನಿವನು (3)
8.ಪಾಲನ್ನು ಕೇಳುತ್ತಿರುವ ಪೋಷಕ! (3)
9.ಕೊನೆಗೆ ಬೆಲೆಯಿದ್ದಾಗಲೆ ಇದು ಸೊಗಸು (3)
11.ಅಸುರನನ್ನು ಹೀಗೂ ಕರೆವರು (3)
12.ಪ್ರತಿರೂಪವಿದು (3)
13.ಹೆದರಿಕೆಯಿಲ್ಲಿ ಉಲ್ಟಾ ಪಲ್ಟಾ ಆಗಿದೆ (3)



4944ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಿವೇಷ 3.ರಾಜಾರೋಷ
5.ಕರಡಿ 6.ಕೈತ್ಯಮಾ
7.ಗಣಪ 9.ನಲ್ಲತೆ
11.ರಾವುತ 12.ಉಗುಳು
13.ಪರಿಣತ 15.ತಿನ್ನಾಸಕ

ಮೇಲಿಂದ ಕೆಳಕ್ಕೆ:
1.ಪಗಡಿ 2.ಷರಾ
4.ಜಾಯಮಾನ 5.ಕರಗ
8.ಪರಾಯಣ 10.ತೆಗಳು
12.ಉದಕ 14.ತತಿ

ಸುಡೊಕು 5331

	1		3		8		2	
8		6		2		5		3
	5		4		6		7	
5			1		2		4	
	2	9						
6			8		9	2		5
	8		6		1		9	
7		2		8		3		1
	6		2		3		5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5330 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

ಚೀನಾ: ಮೇ ದಿನದ ಸಂಭ್ರಮ ಕಸಿದ ಕೋವಿಡ್

ಬೀಜಿಂಗ್ (ಎಪಿ): ಕೋವಿಡ್ ಉಲ್ಬಣದಿಂದಾಗಿ ಚೀನಾದ ಹಲವು ನಗರಗಳಲ್ಲಿ ವಿಧಿಸಿರುವ ಲಾಕ್‌ಡೌನ್ ಮತ್ತು ನಿರ್ಬಂಧ ಕ್ರಮಗಳು ಚೀನೀಯರ ಮೇ ರಜೆ ಮತ್ತು ಪ್ರವಾಸದ ಸಂಭ್ರಮವನ್ನು ಕಸಿದಿದೆ.

ಬುಧವಾರದವರೆಗೂ ಬೀಜಿಂಗ್‌ನಲ್ಲಿರುವ ಎಲ್ಲಾ ರೆಸ್ಟೋರೆಂಟ್‌ಗಳನ್ನು ಮುಚ್ಚಲು ಸೂಚಿಸಲಾಗಿದ್ದು, ಪಾರ್ಸಲ್ ಮತ್ತು ಹೋಂ ಡೆಲಿವರಿಗೆ ಮಾತ್ರ ಅವಕಾಶ ನೀಡಿದೆ. ಪ್ರಮುಖ ಪ್ರವಾಸಿ ತಾಣಗಳಲ್ಲಿ ಶೇ 50 ಮಿತಿಯಲ್ಲಿ ಅವಕಾಶ ನೀಡಲಾಗಿದೆ. ಯೂನಿವರ್ಸಲ್ ಸ್ಟುಡಿಯೊ ಥೀಂ ಪಾರ್ಕ್ ಅನ್ನು ತಾತ್ಕಲಿಕವಾಗಿ ಮುಚ್ಚಲಾಗಿದೆ.

ಮೇ ದಿನದ ಅಂಗವಾಗಿ ನೀಡಲಾದ ಐದು ದಿನಗಳ ರಜಾ ಅವಧಿ ಯಲ್ಲಿ 10 ಕೋಟಿ ಟ್ರಿಪ್‌ಗಳು ಆಗಬಹುದು ಎಂಬ ನಿರೀಕ್ಷೆ ಮಾಡಲಾಗಿತ್ತು. ಆದರೆ ಅತಿಯಾದ ನಿರ್ಬಂಧದಿಂದಾಗ ಈ ಟ್ರಿಪ್‌ಗಳಲ್ಲಿ ಶೇ 60ರಷ್ಟು ಕುಸಿತ ಕಾಣುವ ಸಾಧ್ಯತೆ ಇದೆ ಎಂದು ಸಾರಿಗೆ ಸಚಿವಾಲಯ ತಿಳಿಸಿದೆ. ಶಾಂಘೈನಲ್ಲಿ ಸಾವಿನ ಸಂಖ್ಯೆ 400ಕ್ಕೆ ಏರಿಕೆಯಾಗಿದೆ. 7,872 ಹೊಸ ಪ್ರಕರಣಗಳು ವರದಿಯಾಗಿವೆ.

ಇಟಲಿ, ಗ್ರೀಸ್‌ನಲ್ಲಿ ಕೋವಿಡ್ ನಿರ್ಬಂಧ ತೆರವು: ರೋಮ್ ವರದಿ: ಇಟಲಿ ಮತ್ತು ಗ್ರೀಸ್‌ನಲ್ಲಿ ಕೋವಿಡ್ ನಿರ್ಬಂಧಗಳನ್ನು ಭಾನುವಾರ ಸಡಿಲಿಕೆ ಮಾಡಲಾಗಿದ್ದು, ಬೇಸಿಗೆ ಪ್ರವಾಸ ಕಾಲದ ಬಳಿಕ ಹಂತ ಹಂತವಾಗಿ ಜನ ಜೀವನ ಸಹಜ ಸ್ಥಿತಿಗೆ ಮರಳುತ್ತಿದೆ.

3,324 ಹೊಸ ಪ್ರಕರಣ, 40 ಸಾವು

ನವದೆಹಲಿ (ಪಿಟಿಐ): ದೇಶದಲ್ಲಿ 3,324 ಹೊಸ ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, 40 ಸೋಂಕಿತರು ಮೃತಪಟ್ಟಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ19,092ಕ್ಕೆ ಏರಿಕೆಯಾಗಿದೆ. ದಿನನಿತ್ಯದ ಕೋವಿಡ್ ದೃಢ ಪ್ರಮಾಣ ಶೇ 0.71ರಷ್ಟಿದ್ದು, ಚೇತರಿಕೆ ಪ್ರಮಾಣ ಶೇ 98.74 ರಷ್ಟಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಸಿಐಎಗೆ ನಂದ ಮೂಲ್‌ಚಂದಾನಿ



ನ್ಯೂಯಾರ್ಕ್ (ಪಿಟಿಐ): ಅಮೆರಿಕದ ತನಿಖಾ ಸಂಸ್ಥೆ ಸೆಂಟ್ರಲ್ ಇಂಟಲಿಜೆನ್ಸ್ ಏಜೆನ್ಸಿಯ (ಸಿಐಎ) ಪ್ರಥಮ ಮುಖ್ಯ ತಾಂತ್ರಿಕ ಅಧಿಕಾರಿಯಾಗಿ (ಸಿಟಿಒ) ಭಾರತ ಮೂಲದ ನಂದ ಮೂಲ್‌ಚಂದಾನಿ ಅವರು ನೇಮಕವಾಗಿದ್ದಾರೆ.

ಮೂಲ್‌ಚಂದಾನಿ ಅವರು ಸಿಲಿಕಾನ್ ವ್ಯಾಲಿ ಮತ್ತು ದೇಶದ ಭದ್ರತಾ ಇಲಾಖೆಯಲ್ಲಿ 25ಕ್ಕೂ ಹೆಚ್ಚು ವರ್ಷಗಳ ಕಾಲ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ.

ಒಬ್ಲಿಕ್ಸ್, ಡೆಟರ್ಮಿನಾ, ಒಪನ್‌ಡಿಎನ್‌ಎಸ್ ಮತ್ತು ಸ್ಕೇಲ್‌ಎಕ್ಸ್ಟ್ರೀಮ್ ಸೇರಿದಂತೆ ಕೆಲವು ಸ್ಟಾರ್ಟಪ್‌ಗಳ ಸಂಸ್ಥಾಪಕರಾಗಿದ್ದ ನಂದ ಮೂಲ್‌ಚಂದಾನಿ ಅವರು ಈಗ ಸಂಸ್ಥೆಯ ಸಿಟಿಒ ಆಗಿ ನೇಮಕವಾಗಿದ್ದಾರೆ ಎಂದು ಸಿಐಎ ಭಾನುವಾರ ಟ್ವೀಟ್ ಮಾಡಿದೆ.

‘ಬಾಬರಿ ಮಸೀದಿ ಧ್ವಂಸ: ಶಿವಸೇನಾ ಇರಲಿಲ್ಲ’

ಮುಂಬೈ (ಪಿಟಿಐ): ಹಿಂದುತ್ವದ ವಿಚಾರದಲ್ಲಿ ಶಿವಸೇನಾ ಪಕ್ಷವನ್ನು ತೀವ್ರ ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ ನಾಯಕ ದೇವೇಂದ್ರ ಫಡಣವೀಸ್, ‘ಬಾಬರಿ ಮಸೀದಿ ಧ್ವಂಸವಾದಾಗ ನಾನು ಆ ಸ್ಥಳದಲ್ಲಿದ್ದೆ. ಆದರೆ ಶಿವಸೇನಾ ನಾಯಕರು ಯಾರೂ ಅಲ್ಲಿರಲಿಲ್ಲ’ ಎಂದು ಹೇಳಿದ್ದಾರೆ.

ಬಾಬರಿ ಮಸೀದಿಯನ್ನು ಕೆಡವಿದಾಗ ಬಿಜೆಪಿಯವರು ಎಲ್ಲಿದ್ದರು ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಕೇಳಿದ್ದರು.

ಭಾನುವಾರ ಇಲ್ಲಿ ನಡೆದ ರ‍್ಯಾಲಿಯಲ್ಲಿ ಉದ್ಧವ್ ಪ್ರಶ್ನೆಗೆ ಉತ್ತರಿಸುತ್ತಾ, ‘ಬಾಬರಿ ಮಸೀದಿಯನ್ನು ಕೆಡವಿದಾಗ ನಾವು ಎಲ್ಲಿ ಅವಿತುಕೊಂಡಿದ್ದೆವು ಎಂದು ಅವರು ಕೇಳಿದ್ದಾರೆ, ಮಸೀದಿಗಳಿಂದ ಧ್ವನಿವರ್ಧಕಗಳನ್ನು ತೆಗೆದುಹಾಕಿ ಎಂದಿದ್ದಕ್ಕೆ ಹೆದರಿಕೊಂಡಿದ್ದವರು ಈಗ ತಾವೇ ಬಾಬರಿ ಮಸೀದಿ ಧ್ವಂಸ ಮಾಡಿದ್ದು ಎಂದು ಹೇಳಿಕೊಳ್ಳುತ್ತಿದ್ದಾರೆ’ ಎಂದು ಟೀಕಿಸಿದರು.


4 ಕೋಟಿ ಮಹಿಳೆಯರಿಗೆ ಸ್ತನ ಕ್ಯಾನ್ಸರ್ ಪರೀಕ್ಷೆ

ಅಹಮದಾಬಾದ್(ಪಿಟಿಐ): ಕೇಂದ್ರ ಸರ್ಕಾರದ ಆಯುಷ್ಮಾನ್ ಭಾರತ್ ಯೋಜನೆಯಡಿ ದೇಶದಾದ್ಯಂತ 4.07 ಕೋಟಿಗಿಂತ ಹೆಚ್ಚು ಮಹಿಳೆಯರು ಸ್ತನ ಕ್ಯಾನ್ಸರ್ ಪರೀಕ್ಷೆ, 3.16 ಕೋಟಿ ಮಂದಿ ಕುತ್ತಿಗೆಯ ಕ್ಯಾನ್ಸರ್ ಪರೀಕ್ಷೆಗೊಳಪಟ್ಟಿದ್ದಾರೆ ಎಂದು ಕೇಂದ್ರದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಅವರು ಹೇಳಿದ್ದಾರೆ.

ಆರೋಗ್ಯ ಮತ್ತು ಫಾರ್ಮಾ ಉದ್ಯಮದಲ್ಲಿ ಸಬಲೀಕರಣದ ಉತ್ತುಂಗದ ಕುರಿತು ರಾಷ್ಟ್ರೀಯ ಸಮಾವೇಶದ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದ ಅವರು, 'ಕಳೆದ 2 ವರ್ಷಗಳಲ್ಲಿ 45 ಕೋಟಿಗಿಂತ ಹೆಚ್ಚು ಮಹಿಳೆಯರು ತಮ್ಮ ಪ್ರಾಥಮಿಕ ಆರೋಗ್ಯ ಚಿಕಿತ್ಸೆಗಾಗಿ ಆಯುಷ್ಮಾನ್ ಭಾರತ ಯೋಜನೆ ಅಡಿ ಆರಂಭಿಸಲಾದ ಆರೋಗ್ಯ ಮತ್ತು ಕ್ಷೇಮದ ಕೇಂದ್ರಗಳಿಗೆ ಭೇಟಿ ನೀಡಿದ್ದಾರೆ. ಆಯುಷ್ಮಾನ್ ಭಾರತ್ ಯೋಜನೆಯಡಿ ಮಹಿಳಾ ಫಲಾನುಭವಿಗಳ ಸಂಖ್ಯೆಯು ಔಷಧಶಾಸ್ತ್ರ ಮತ್ತು ಆರೋಗ್ಯ ರಕ್ಷಣೆಯಲ್ಲಿ ಮಹಿಳೆಯರ ಪಾತ್ರವನ್ನು ಹೆಚ್ಚಿಸಲು ಏಕೆ ಲಾಭದಾಯಕವಾಗಿದೆ ಎಂಬುದನ್ನು ತೋರಿಸುತ್ತದೆ’ ಎಂದು ಹೇಳಿದರು.

ರಂಜಾನ್: ಸಮಾನತೆಯ ಸಂದೇಶ

• ಚಾಂದ್ ಬಾಷ ಅರಸೀಕೆರೆ



ಈದ್ ಉಲ್ ಫಿತ್ರ್ ನಾಳೆ

ರಂಜಾನ್ ಎಂದರೆ ಅರೇಬಿಕ್ ಭಾಷೆಯಲ್ಲಿ ಅಲ್-ರಮದ್ ಅಥವಾ ರಮದ ಅರ್ಥಾತ್ ಶುಷ್ಕತೆ, ಶಾಖದ ತೀವ್ರತೆ ಅಥವಾ ದಿನಸಿಯ ದಾಸ್ತನಿನ ಕೊರತೆ ಎಂದು. ಕ್ರಿ.ಶ. 610ರಲ್ಲಿ ಜಿಬ್ರಾಯಿಲ್ ಎಂಬ ದೈವಚರರ ಮುಖೇನ ಪ್ರವಾದಿ ಮೊಹಮ್ಮದ್ (ಸ.ಅ)ರವರಿಗೆ ಪವಿತ್ರ ರಂಜಾನ್ ಮಾಸದ 27ನೇ ದಿನ, ಭಗವಂತನ ವಾಣಿಯು ಪವಿತ್ರ ಕುರಾನ್ ರೂಪದಲ್ಲಿ ಅವತೀರ್ಣಗೊಂಡ ಇಸ್ಲಾಂ ಧರ್ಮದ ಪುಣ್ಯದ ಒಂಬತ್ತನೇ ಮಾಸವೇ ರಂಜಾನ್ ತಿಂಗಳು. ಈ ಪವಿತ್ರ ತಿಂಗಳೆಲ್ಲ ಮುಸಲ್ಮಾನರು ಉಪವಾಸ, ಪ್ರಾರ್ಥನೆ, ದಾನ, ಧರ್ಮಗಳಿಗೆ ತಮ್ಮನ್ನು ಮೀಸಲಿಡುತ್ತಾರೆ. ಇದೇ ಪವಿತ್ರ ತಿಂಗಳನ್ನು ಲೈಲತುಲ್ ಖದ್ರ್ ಅಥವಾ ‘ಶಕ್ತಿಯುತ ರಾತ್ರಿ’ ಎಂದು ಕರೆಯಲು ಕಾರಣ ಆ ಪವಿತ್ರ ರಾತ್ರಿಯಲ್ಲೆ ಪವಿತ್ರ ಕುರಾನ್ ಅವತೀರ್ಣಗೊಂಡಿದ್ದರ ನಂಬಿಕೆ. ಉಪವಾಸವೆಂದರೆ ಬರೀ ದೈಹಿಕ ಹಸಿವು ಮಾತ್ರವಲ್ಲ, ಮಾನಸಿಕ ಹಸಿವನ್ನು ಹತೋಟಿಯಲ್ಲಿಡುವುದು ಅಷ್ಟೇ ಮುಖ್ಯ.

ಮಾನವನು ಆದಷ್ಟು ತನ್ನಲ್ಲಿರುವ ಕೆಟ್ಟತನಗಳನ್ನು ನಾಶಪಡಿಸಿ ಅವುಗಳು ಮತ್ತೆ ಹುಟ್ಟದಂತೆ ನಿಯಂತ್ರಿಸುವುದನ್ನು ಕಲಿಯಬೇಕು. ತಮ್ಮ ನಡತೆ, ನೋಟ, ಅಭ್ಯಾಸ, ಜೀವನ ಕ್ರಮ ಎಲ್ಲವನ್ನು ಸನ್ಮಾರ್ಗದ ಕಡೆಗೆ ಕೊಂಡೊಯ್ಯಬೇಕು. ಹಾಗೆಯೇ ಹಬ್ಬ ಮಾಡಲು ಆಗದ ಅಶಕ್ತರಿಗೆ ಫಿತ್ರದ ಮುಖೇನ ದಾನ ನೀಡಿ ಅವರು ಸಹ ಎಲ್ಲರಂತೆ ಹಬ್ಬ ಆಚರಿಸಲು ಸಹಕರಿಸಬೇಕು. ಇಸ್ಲಾಂ ಧರ್ಮದಲ್ಲಿ ಶ್ರೀಮಂತ, ಬಡವ ಎಂಬ ಭೇದವಿಲ್ಲ. ಭಗವಂತನ ಮುಂದೆ ಎಲ್ಲರೂ ಸಮಾನರು. ಶಕ್ತರು ಅಶಕ್ತರಿಗೆ ಸಹಕರಿಸಿ ಸಹಬಾಳ್ವೆ ನಡೆಸಬೇಕೆಂದು ಬೋಧಿಸುವುದೇ ಇಸ್ಲಾಂ ಧರ್ಮದ ಮೂಲತತ್ವ. ಆರ್ಥಿಕ ಸಮಾನತೆಯನ್ನು ಪ್ರತಿಯೊಬ್ಬರು ಪಾಲಿಬೇಕೆಂಬುದು ಇಸ್ಲಾಂ ಧರ್ಮದ ನಿಯಮ. ಪ್ರವಾದಿ(ಸ.ಅ)ರವರು ಹೇಳಿರುವುದು ‘ಈ ಸದ್ಕಾ ಎಂಬ ದಾನವು ಪಾಪದಂತೆ ಹರಡಿದ ಬೆಂಕಿಯನ್ನು ಆರಿಸಲು ಉಪಯೋಗಿಸಿದ ನೀರಿನಂತೆ’ ಅಂದಿದ್ದಾರೆ.

ರಂಜಾನ್ ಮಾಸದ ಕೊನೆಯ ಹತ್ತು ಮಹತ್ವದ ರಾತ್ರಿಗಳಲ್ಲಿ ಅನೇಕ ಬೇಡಿಕೆಗಳು ಈಡೇರುವುದೆಂಬ ನಂಬಿಕೆ. ಈ ರಾತ್ರಿಗಳಂದು ಸದ್ಕಾ, ಎಂದರೆ ಕೈಯಲ್ಲಾದ ದಾನವನ್ನು ಭಗವಂತನ ಮೇಲಿನ ಪ್ರೀತಿಯಿಂದ ನಿರ್ಗತಿಕರಿಗೆ ನೀಡುವುದು ಎಂದರ್ಥ. ಇಲ್ಲಿ ಮಾಡಿದ ಒಂದೊಂದು ಸತ್ಕಾರ್ಯವು 70 ಪುಣ್ಯಗಳಿಂದ ಗುಣಿಸಲ್ಪಡುತ್ತದೆ ಎಂಬ ನಂಬಿಕೆ. ಹಾಗೆ ಇಂದು ನಾವು ಮಾಡಿದ ಶುಭಕಾರ್ಯವು 83 ವರ್ಷಗಳ ಭಗವಂತನ ಪ್ರಾರ್ಥನೆಗೆ ಅಥವಾ ಆರಾಧನೆಗೆ ಸಮವೆಂದು ನಂಬಿಕೆ.

ಈ ಪವಿತ್ರ ಮಾಸದ 29ನೇ ಅಥವಾ 30ನೇ ದಿನ ಚಂದ್ರದರ್ಶನದೊಂದಿಗೆ ಆ ಪವಿತ್ರ ಮಾಸವು ಸಮಾಪ್ತಿಯಾದ ಸಂಭ್ರಮದಲ್ಲಿ ಕುತಬ್-ಎ-ರಂಜಾನ್ ಅಥವಾ ಈದುಲ್-ಫಿತ್ರ್ ಎಂದು ಆಚರಿಸಲಾಗುತ್ತದೆ. ಸಂಪೂರ್ಣ ತಿಂಗಳು ಆಚರಿಸಿದ ಉಪವಾಸ, ನಿರ್ಮಲ ಮನದ ಪ್ರಾರ್ಥನೆ, ಹಸಿದವರಿಗೆ ಊಟವಿತ್ತು, ನಿರ್ಗತಿಕರಿಗೆ ದಾನ ನೀಡಿ, ತಮ್ಮ ಕೈಯಲ್ಲಾದ ಸತ್ಕಾರ್ಯಗಳನ್ನು ಮಾಡಿದ ಆ ಪರಮ ಪಾವನ ತಿಂಗಳ ಸ್ಮರಣೆಯಲ್ಲಿ ಬದುಕಲುಳಿದ ದಿನಗಳಿಗೂ ಇಂತಹ ಶ್ರೇಯಸ್ಸನ್ನೇ ಅನುಗ್ರಹಿಸು ಎಂದು ಭಗವಂತನಲ್ಲಿ ಬೇಡುವ ಮಹಾನ್ ದಿನವೇ ಈದುಲ್ ಫಿತ್ರ್. ಈ ಪವಿತ್ರ ದಿನದಂದು ‘ಸರ್ವೇ ಜನಾಃ ಸುಖಿನೋ ಭವಂತುಃ’ ಎಂಬಂತೆ, ನಮ್ಮ ವಿಶ್ವದ ಎಲ್ಲಾ ಮಾನವರ ಆರೋಗ್ಯ, ಸುಖ, ಶಾಂತಿ, ಸೌಹಾರ್ದತೆಯ ಬದುಕಿಗಾಗಿ ವಿಶೇಷ ಸಾಮೂಹಿಕ ಪ್ರಾರ್ಥನೆಗಳು ಈದ್ಗಾ ಅಥವಾ ಮಸೀದಿಗಳಲ್ಲಿ ನಡೆಯುತ್ತವೆ.

ಅಮೆರಿಕ ಸಂಸತ್ ಸ್ಪೀಕರ್ ಕೀವ್‌ಗೆ ಭೇಟಿ, ಝೆಲೆನ್‌ಸ್ಕಿ ಜತೆಗೆ ಮಾತುಕತೆ

‘ಉಕ್ರೇನ್‌ಗೆ ದೃಢ ಬೆಂಬಲ’



ಕೀವ್ (ಎಪಿ): ‘ಉಕ್ರೇನ್ ಬೆಂಬಲಕ್ಕೆ ಅಮೆರಿಕ ದೃಢವಾಗಿ ನಿಂತಿರುವುದನ್ನು ಇಡೀ ಜಗತ್ತಿಗೆ ಸಾರಿಹೇಳಲು ಮತ್ತು ಸ್ಪಷ್ಟ ಸಂದೇಶ ರವಾನಿಸಲು ಕಾಂಗ್ರೆಸ್ ನಿಯೋಗವು ಕೀವ್‌ಗೆ ಭೇಟಿ ನೀಡಿದೆ’ ಎಂದು ಅಮೆರಿಕ ಸಂಸತ್ ಸ್ಪೀಕರ್ ನ್ಯಾನ್ಸಿ ಪೆಲೊಸಿ ಭಾನುವಾರ ತಿಳಿಸಿದರು.

ಪೆಲೊಸಿ ಅವರ ನೇತೃತ್ವದ ಕಾಂಗ್ರೆಸ್ ನಿಯೋಗ, ಪೋಲೆಂಡ್‌ಗೆ ಮಾತುಕತೆಗಾಗಿ ತೆರಳುವ ಮೊದಲು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರನ್ನು ಇಲ್ಲಿ ಭೇಟಿ ಮಾಡಿತು.

ಪೆಲೊಸಿ ಅವರು ‘ಸ್ವಾತಂತ್ರ್ಯದ ಹೋರಾಟ ಬೆಂಬಲಿಸಲು ಮತ್ತು ನಿಮಗೆ ಧನ್ಯವಾದ ಹೇಳಲು ಬಂದಿದ್ದೇವೆ. ನಿಮ್ಮ ಹೋರಾಟ ಎಲ್ಲರ ಹೋರಾಟವೂ ಆಗಿದೆ. ಇದು ತಾರ್ಕಿಕ ಅಂತ್ಯ ಕಾಣುವವರೆಗೂ ನಿಮ್ಮನ್ನು ಬೆಂಬಲಿಸುವುದು ನಮ್ಮ ಬದ್ಧತೆ’ ಎಂದು ಝೆಲೆನ್‌ಸ್ಕಿ ಅವರಿಗೆ ವಾಗ್ದಾನ ನೀಡಿದರು.

‘ನಾವು ರಷ್ಯಾ ವಿರುದ್ಧ ಗೆದ್ದೇ ಗೆಲ್ಲುತ್ತೇವೆ. ನಾವೆಲ್ಲರೂ ಒಗಟ್ಟಿನ ಗೆಲುವು ಸಾಧಿಸುತ್ತೇವೆ’ ಎಂದು ಝೆಲೆನ್‌ಸ್ಕಿ ವಿಶ್ವಾಸ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯೆಯಾಗಿ ಪೆಲೊಸಿ ಅವರು ‘ಜಯ ಸಾಧಿಸುವವರೆಗೂ ನಾವು ನಿಮ್ಮ ಬೆಂಬಲಕ್ಕಿರುತ್ತೇವೆ’ ಎಂದೂ ಭರವಸೆ ನೀಡಿದರು.

ನಾಗರಿಕರ ಸ್ಥಳಾಂತರ: ರಷ್ಯಾ ಪಡೆಗಳು ಮುತ್ತಿಗೆಹಾಕಿರುವ ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರದಿಂದ ಭಾನುವಾರ ಎಂಟು ಮಕ್ಕಳು ಸೇರಿ ನೂರಕ್ಕೂ ಹೆಚ್ಚು ನಾಗರಿಕರನ್ನು ಮಾನವೀಯ ಕಾರಿಡಾರ್ ಮೂಲಕ ಸ್ಥಳಾಂತರಿಸಲಾಗಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ಹೇಳಿರುವುದಾಗಿ ‘ಟಾಸ್’ ಸುದ್ದಿಸಂಸ್ಥೆ ವರದಿ ಮಾಡಿದೆ.

ಕದನ ವಿರಾಮದ ವೇಳೆ ಉಕ್ಕಿನ ಸ್ಥಾವರದಿಂದ ಶನಿವಾರ 20 ನಾಗರಿಕರನ್ನು ಸ್ಥಳಾಂತರಿಸಲಾಯಿತು ಎಂದು ಅಜೋವ್ ರೆಜಿಮೆಂಟ್ ಅಧಿಕಾರಿ ಹೇಳಿರುವುದಾಗಿ ಉಕ್ರೇನಿನ ‘ದಿ ಕೀವ್ ಇಂಡಿಪೆಂಡೆಂಟ್’ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಏಂಜೆಲಿನಾ ಜೋಲಿ ಭೇಟಿ: ವಿಶ್ವ ಸಂಸ್ಥೆಯ ಮಕ್ಕಳ ನಿರಾಶ್ರಿತ ಏಜೆನ್ಸಿಯ ರಾಯಭಾರಿ, ಹಾಲಿವುಡ್ ನಟಿ ಮತ್ತು ನಿರ್ಮಾಪಕಿ ಏಂಜೆಲಿನಾ ಜೋಲಿ ಅವರು ಲುವಿವ್ ನಗರಕ್ಕೆ ಶನಿವಾರ ಸಂಜೆ ಭೇಟಿ ನೀಡಿ, ನಿರಾಶ್ರಿತ ಮಕ್ಕಳ ಯೋಗಕ್ಷೇಮ ವಿಚಾರಿಸಿದರು.

ಲುವಿವ್ ರೈಲ್ವೆ ನಿಲ್ದಾಣದಲ್ಲಿ ನಿರಾಶ್ರಿತರು ಮತ್ತು ಸ್ವಯಂ ಸೇವಕರನ್ನು ಭೇಟಿಯಾದರು. ರಷ್ಯಾದ ದಾಳಿಯ ಭೀತಿ ಬಿಟ್ಟು, ನಟಿಯನ್ನು ಕಾಣಲು ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು.



ಉಕ್ರೇನಿನ ಯುದ್ಧಪೀಡಿತ ಲುವಿವ್ ನಗರದಲ್ಲಿ ಹಾಲಿವುಡ್ ನಟಿ ಏಂಜೆಲಿನಾ ಜೋಲಿ ನಿರಾಶ್ರಿತ ಮಕ್ಕಳೊಂದಿಗೆ ಸಮಯ ಕಳೆದರು (ಸ್ಥಳೀಯ ಗವರ್ನರ್ ಬಿಡುಗಡೆ ಮಾಡಿರುವ ಟ್ವಿಟರ್ ಚಿತ್ರ)

‘ಹೋರಾಟ ಬಿಡಿ: ರಷ್ಯಾಕ್ಕೆ ವಾಪಸಾಗಿ’

‘ರಷ್ಯಾದ ಪ್ರತಿ ಸೈನಿಕನಿಗೆ ಪ್ರಾಣ ಉಳಿಸಿಕೊಳ್ಳಲು ಇನ್ನೂ ಅವಕಾಶವಿದೆ. ನಮ್ಮ ನೆಲದಲ್ಲಿ ಸಾಯುವುದಕ್ಕಿಂತ, ಹೋರಾಟ ನಿಲ್ಲಿಸಿ, ರಷ್ಯಾಕ್ಕೆ ಹೋಗಿ ಬದುಕಿ’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ರಷ್ಯನ್ ಭಾಷೆಯಲ್ಲಿ ಶನಿವಾರ ತಡರಾತ್ರಿ ವಿಡಿಯೊ ಭಾಷಣ ಮಾಡಿರುವ ಅವರು, ‘ರಷ್ಯಾ ಕಮಾಂಡರ್‌ಗಳು ತಮ್ಮ ಸೈನಿಕರಿಗೆ ಸುಳ್ಳು ಹೇಳುತ್ತಿದ್ದಾರೆ. ಮುಂದಿನ ವಾರಗಳಲ್ಲಿ ಸಾವಿರಾರು ಸೈನಿಕರು ಹತರಾಗಲಿದ್ದಾರೆ. ಇದು ಸೇನಾ ಜನರಲ್‌ಗಳಿಗೂ ಗೊತ್ತಿದೆ. ಸೈನಿಕರ ಶವಗಳ ಸಂಗ್ರಹಕ್ಕೆ ರಷ್ಯಾ ಸೇನೆ ಹೆಚ್ಚುವರಿ ರೆಫ್ರಿಜರೇಟರ್ ಟ್ರಕ್‌ಗಳನ್ನು ಸಿದ್ಧಪಡಿಸುತ್ತಿದೆ’ ಎಂದು ಹೇಳಿದ್ದಾರೆ.

ಕ್ಷಿಪಣಿ ದಾಳಿ: ಒಡೆಸಾ ರನ್‌ವೇ ಧ್ವಂಸ

‘ಬಂದರು ನಗರ ಒಡೆಸಾದ ವಿಮಾನ ನಿಲ್ದಾಣದ ಮೇಲೆ ರಷ್ಯಾ ಶನಿವಾರ ಕ್ರಿಮಿಯಾದಿಂದ ಕ್ಷಿಪಣಿ ದಾಳಿ ನಡೆಸಿ, ರನ್‌ವೇ ನಾಶಪಡಿಸಿದೆ’ ಎಂದು ಉಕ್ರೇನ್ ಸೇನೆ ತಿಳಿಸಿದೆ.

ರಷ್ಯಾದ ಎಸ್-300 ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆಯಿಂದ ಉಕ್ರೇನಿನ ಎರಡು ಸುಖೋಯ್-24 ಯುದ್ಧ ವಿಮಾನಗಳು ಮತ್ತು ಉಕ್ರೇನಿನ ಶಸ್ತ್ರಕೋಠಿ ಹಾಗೂ ತೈಲ ಸಂಗ್ರಹಾಗಾರವನ್ನು ಭಾನುವಾರ ನಾಶಪಡಿಸಲಾಗಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ ಮೇಜರ್ ಜನರಲ್ ಐಗೋರ್ ಕೊನಶೆಂಕೊವ್ ಹೇಳಿದ್ದಾರೆ. ಉಕ್ರೇನ್ ಪಡೆಗಳಿಂದಲೂ ರಷ್ಯಾ ಗಡಿಯಲ್ಲಿ ಶೆಲ್ ದಾಳಿ ಮುಂದುವರಿದಿದೆ. ಕ್ಷಿಪಣಿ ದಾಳಿಗೆ ರಷ್ಯಾದ ಕ್ರಸ್ಕ್ ಪ್ರದೇಶದ ರೈಲ್ವೆ ಸೇತುವೆ ಧ್ವಂಸವಾಗಿರುವುದನ್ನು ಸ್ಥಳೀಯ ಗವರ್ನರ್ ಖಚಿತಪಡಿಸಿದ್ದಾರೆ.

ಹೆಚ್ಚಿದ ತಾಪ: ಆರೋಗ್ಯ ಸೌಲಭ್ಯ ಸಿದ್ಧತೆ ಪರಿಶೀಲನೆಗೆ ಸೂಚನೆ

ನವದೆಹಲಿ(ಪಿಟಿಐ): ದೇಶದಾದ್ಯಂತ ತಾಪ ಮತ್ತು ಬಿಸಿಗಾಳಿ ಭಾರಿ ಪ್ರಮಾಣದಲ್ಲಿ ಹೆಚ್ಚುತ್ತಿರುವ ಬೆನ್ನಲ್ಲೇ, ಆರೋಗ್ಯ ಸೌಲಭ್ಯದ ಬಗ್ಗೆ ಪರಿಶೀಲಿಸಿಕೊಳ್ಳುವಂತೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ.

ಈ ಸಂಬಂಧ ಶನಿವಾರ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿರುವ ಕೇಂದ್ರ ಆರೋಗ್ಯ ಇಲಾಖೆ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು, ತಾಪಕ್ಕೆ ಸಂಬಂಧಿಸಿದ ಕಾಯಿಲೆಗಳನ್ನು ಹೇಗೆ ನಿಯಂತ್ರಿಸಬೇಕು ಎಂಬ ಕುರಿತಾದ ರಾಷ್ಟ್ರೀಯ ಕಾರ್ಯ ಯೋಜನೆಯ ಮಾರ್ಗಸೂಚಿಗಳ ಮಾಹಿತಿಯನ್ನು ಜಿಲ್ಲೆಗಳ ಜೊತೆ ಹಂಚಿಕೊಳ್ಳುವಂತೆ ಸೂಚಿಸಿದ್ದಾರೆ.

ಒಂಟಿ ಹಿರಿಯ ನಾಗರಿಕರು, ಕಾಯಿಲೆ ಪೀಡಿತರ ಆರೋಗ್ಯದ ಮೇಲೆ ನಿಗಾ ವಹಿಸಬೇಕು. ಅಲ್ಲದೆ, ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಮಾತ್ರೆಗಳು, ಕುಡಿಯುವ ನೀರು ಮತ್ತು ಅತಿಹೆಚ್ಚು ತಾಪ ಇರುವ ಪ್ರದೇಶಗಳಲ್ಲಿ ಕೂಲಿಂಗ್ ಸಾಧನಗಳು ನಿರಂತರವಾಗಿ ಕಾರ್ಯ ನಿರ್ವಹಿಸುವಂತೆ ಮಾಡಲು ಕ್ರಮ ವಹಿಸುವಂತೆಯೂ ಸೂಚಿಸಲಾಗಿದೆ.

ಭಾನುವಾರ ರಾಜಸ್ತಾನದಲ್ಲಿ ತಾಪಮಾನ 47.1 ಡಿಗ್ರಿ ಸೆಲಿಯಸ್‌ಗೆ ತಲುಪಿತ್ತು.

‘ಏಕರೂಪ ನಾಗರಿಕ ಸಂಹಿತೆ ಬೇಕಿಲ್ಲ’

ಔರಂಗಾಬಾದ್, ಮಹಾರಾಷ್ಟ್ರ: ‘ಭಾರತಕ್ಕೆಈಗ ಏಕರೂಪ ನಾಗರಿಕತೆ ಸಂಹಿತೆಯ ಅಗತ್ಯವಿಲ್ಲ. ಭಾರತೀಯ ಕಾನೂನು ಆಯೋಗ ಸಹ ಇದು ಅಗತ್ಯ ವಿಲ್ಲವೆಂದು ಹೇಳುತ್ತದೆ’ ಎಂದು ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಹೇಳಿದರು.

ಸಂಸದ ಇಮ್ತಿಯಾಜ್ ಜಲೀಲ್ ಆಯೋಜಿಸಿದ್ದ ಇಫ್ತಿಯಾರ್ ಕೂಟಕ್ಕೆ ಆಗಮಿಸಿದ್ದ ಒವೈಸಿ ಅವರು, ಬಿಜೆಪಿಯು ತನ್ನ ಆಡಳಿತದ ರಾಜ್ಯಗಳಲ್ಲಿ ತನ್ನದೇ ಆದ ನಾಗರಿಕ ಸಂಹಿತೆಗಳನ್ನು ಜಾರಿಗೆ ತರುತ್ತಿರುವುದರ ಬಗ್ಗೆ ಪ್ರಶ್ನಿಸಿದರು.

ಗೋವಾ ರಾಜ್ಯದ ಬಗ್ಗೆ ಪ್ರಸ್ತಾಪಿಸಿದ ಅವರು,‘ದಂಪತಿಗೆ 30 ವರ್ಷವಾದ ನಂತರವೂ ಗಂಡು ಮಕ್ಕಳಾಗದಿದ್ದರೆ, ಹಿಂದೂ ಪುರುಷರು ಮರು ಮದುವೆ ಆಗಬಹುದು ಎಂದು ಗೋವಾ ನಾಗರಿಕ ಸಂಹಿತೆ ತಿಳಿಸುತ್ತದೆ. ಈ ಬಗ್ಗೆ ಬಿಜೆಪಿ ಏನು ಹೇಳುತ್ತದೆ? ಹಿಂದೂ ಅವಿಭಕ್ತ ಕುಟುಂಬಗಳಿಗೆ ತೆರಿಗೆಯಲ್ಲಿ ವಿನಾಯಿತಿ ನೀಡಲಾಗುತ್ತಿದೆ. ಆದರೆ ಈ ವಿನಾಯಿತಿ ಮುಸ್ಲಿಂ, ಸಿಖ್ ಹಾಗೂ ಕ್ರಿಶ್ಚಿಯನ್ ಸಮುದಾಯಗಳಿಗೆ ಏಕಿಲ್ಲ? ಹಾಗೆಯೇ ಸಂವಿಧಾನವು ಮೇಘಾಲಯ, ಮಿಜೋರಾಂ ಹಾಗೂ ನಾಗಾಲ್ಯಾಂಡ್‌ಗಳ ಸಂಸ್ಕೃತಿ ರಕ್ಷಿಸುವುದಾಗಿ ಹೇಳುತ್ತದೆ. ಇದು ಹಕ್ಕುಗಳ ಉಲ್ಲಂಘನೆ ಅಲ್ಲವೇ?’ ಎಂದರು.

‘ಭಾರತದೊಂದಿಗೆ ಯುರೋಪಿಯನ್ ಪಾಲುದಾರರ ಪಾತ್ರ ಮಹತ್ವದ್ದು’

ಮೋದಿ ಯುರೋಪ್ ಪ್ರವಾಸ ಇಂದಿನಿಂದ

ನವದೆಹಲಿ (ಪಿಟಿಐ): ‘ಯುರೋಪ್ ಹಲವು ಸವಾಲುಗಳನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಅಲ್ಲಿಗೆ ಪ್ರವಾಸ ಕೈಕೊಳ್ಳಲಾಗುತ್ತಿದೆ. ಯುರೋಪಿಯನ್ ಪಾಲುದಾರರೊಂದಿಗೆ ಸಹಕಾರವನ್ನು ಬಲಪಡಿಸುವ ಉದ್ದೇಶವನ್ನು ಪ್ರಸ್ತುತ ಭೇಟಿ ಹೊಂದಿದೆ’ ಎಂದು ಜರ್ಮನಿ, ಡೆನ್ಮಾರ್ಕ್ ಮತ್ತು ಫ್ರಾನ್ಸ್‌ಗೆ ಪ್ರವಾಸ ಕೈಗೊಳ್ಳಲಿರುವ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಸೋಮವಾರದಿಂದ ಅವರು ಪ್ರವಾಸ ಆರಂಭಿಸಲಿದ್ದಾರೆ. ಜರ್ಮನಿಯ ಚಾನ್ಸೆಲರ್ ಓಲಾಫ್ ಸ್ಕೋಲ್ಜ್ ಅವರ ಆಹ್ವಾನದ ಮೇರೆಗೆ ಮೇ 2 ರಂದು ಬರ್ಲಿನ್‌ಗೆ ಭೇಟಿ ನೀಡುವುದಾಗಿ ಹೇಳಿಕೆಯಲ್ಲಿ ಮೋದಿ ತಿಳಿಸಿದ್ದಾರೆ. ಡೆನ್ಮಾರ್ಕ್‌ನ ಕೋಪನ್‌ಹೇಗನ್‌ನಲ್ಲಿ ಮೇ 3-4 ರಂದು ನಡೆಯುವ ದ್ವಿಪಕ್ಷೀಯ ಮಾತುಕತೆಯಲ್ಲಿ ಹಾಗೂ ಭಾರತ--ನಾರ್ಡಿಕ್ ಎರಡನೇ ಶೃಂಗಸಭೆಯಲ್ಲಿ ಭಾಗವಹಿಸುವುದಾಗಿ ಹೇಳಿದ್ದಾರೆ.

ಭಾರತಕ್ಕೆ ಹಿಂತಿರುಗುವ ಸಂದರ್ಭದಲ್ಲಿ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರನ್ನು ಪ್ಯಾರಿಸ್‌ನಲ್ಲಿ ಭೇಟಿ ಮಾಡುವುದಾಗಿಯೂ ತಿಳಿಸಿದ್ದಾರೆ.

‘ಭಾರತದಲ್ಲಿ ಶಾಂತಿ ಮತ್ತು ಸಮೃದ್ಧಿಗಾಗಿ ಯುರೋಪಿಯನ್ ಪಾಲುಗಾರಿಕೆ ಪ್ರಮುಖವಾಗಿದೆ. ಈ ನಿಟ್ಟನಲ್ಲಿ ಯುರೋಪಿಯನ್ ಪಾಲುದಾರರೊಂದಿಗೆ ಸಹಕಾರವನ್ನು ಬಲಪಡಿಸುವುದು ಮುಖ್ಯ ಉದ್ದೇಶವಾಗಿದೆ’ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಭಾರತ ಮತ್ತು ಜರ್ಮನಿ ನಡುವಿನ ದೀರ್ಘಾವಧಿಯ ವಾಣಿಜ್ಯ ಸಂಬಂಧಗಳು ಕಾರ್ಯತಂತ್ರದ ಪಾಲುದಾರಿಕೆಯ ಆಧಾರ ಸ್ತಂಭಗಳಲ್ಲಿ ಒಂದಾಗಿವೆ. ಉದ್ಯಮ ಕ್ಷೇತ್ರವನ್ನು ಬಲಪಡಿಸುವ ನಿಟ್ಟನಲ್ಲಿ ಚಾನ್ಸೆಲರ್ ಸ್ಕೋಲ್ಜ್ ಅವರೊಟ್ಟಿಗೆ ವಾಣಿಜ್ಯ ಕ್ಷೇತ್ರದ ದುಂಡುಮೇಜಿನ ಸಭೆಯಲ್ಲಿ ಮಾತನಾಡ ಲಾಗುವುದು’ ಎಂದೂ ಮೋದಿ ಹೇಳಿದ್ದಾರೆ.

‘ಭಾರತ- ಡೆನ್ಮಾರ್ಕ್ ವ್ಯಾಪಾರ ಕ್ಷೇತ್ರ ಬಲಪಡಿಸುವ ಉದ್ದೇಶದಿಂದ ಅಲ್ಲಿಯೂ ವಾಣಿಜ್ಯ ಕ್ಷೇತ್ರದ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸುತ್ತೇನೆ. ಡೆನ್ಮಾರ್ಕ್‌ನಲ್ಲಿರುವ ಭಾರತೀಯ ಸಮುದಾಯದೊಂದಿಗೆ ಸಂವಹನ ನಡೆಸುತ್ತೇನೆ’ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ವರ್ಷದ ಮೊದಲ ವಿದೇಶ ಪ್ರವಾಸ ಕೈಗೊಂಡಿರುವ ಪ್ರಧಾನಿ ಮೋದಿ ಅವರು ಮೂರು ದಿನಗಳಲ್ಲಿ 25 ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

‘ಯುದ್ಧ ನಿಲ್ಲಿಸಿ: ಮಾತುಕತೆ ಆರಂಭಿಸಿ’

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿಯವರು ಯುರೋಪಿನ ಮೂರು ರಾಷ್ಟ್ರಗಳ ಪ್ರವಾಸ ಕೈಗೊಳ್ಳುತ್ತಿರುವ ಬೆನ್ನಲ್ಲೇ, ಭಾರತವು ಉಕ್ರೇನ್‌ನಲ್ಲಿ ಯುದ್ಧ ನಿಲ್ಲಿಸಿ, ಮಾತುಕತೆ ಮತ್ತು ರಾಜತಾಂತ್ರಿಕತೆ ಮೂಲಕ ಸಂಘರ್ಷ ಪರಿಹರಿಸಿಕೊಳ್ಳುವಂತೆ ಭಾನುವಾರ ಮತ್ತೊಮ್ಮೆ ಒತ್ತಾಯಿಸಿದೆ.

ಹೊಸದಾಗಿ ನೇಮಕವಾಗಿರುವ ವಿದೇಶಾಂಗ ಕಾರ್ಯದರ್ಶಿ ವಿನಯ್ ಮೋಹನ್ ಕ್ವಾತ್ರಾ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಉಕ್ರೇನ್ ಬಿಕ್ಕಟ್ಟಿನ ಬಗ್ಗೆ ಭಾರತದ ನಿಲುವು ಸಕಾರಾತ್ಮಕ ಆಯಾಮ ಹೊಂದಿದೆ. ಈ ಬಗ್ಗೆ ಯಾವುದೇ ಅನುಮಾನ ಬೇಡ’ ಎಂದು ಅವರು ಒತ್ತಿ ಹೇಳಿದರು.

‘ಉಕ್ರೇನ್ ಬಿಕ್ಕಟ್ಟಿನಿಂದಾದ ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಯು ಮೋದಿ ಅವರ ಪ್ರವಾಸದ ವೇಳೆ ಮಾತುಕತೆಯ ಭಾಗವಾಗಿರಲಿದೆ. ಉಕ್ರೇನ್ ಬಿಕ್ಕಟ್ಟು ಕುರಿತ ನಮ್ಮ ದೃಷ್ಟಿಕೋನಗಳನ್ನು ಈ ರಾಷ್ಟ್ರಗಳ ಜತೆಗಿನ ದ್ವಿಪಕ್ಷೀಯ ಮಾತುಕತೆಯಲ್ಲಿ ಹಂಚಿಕೊಳ್ಳುತ್ತೇವೆ’ ಎಂದು ಅವರು ಹೇಳಿದರು.

ಕ್ಲೌಡ್‌ಸೆಕ್‌ನ ‘ಥ್ರೆಟ್ ರಿಸರ್ಚ್ ಅಂಡ್ ಇನ್‌ಫಾರ್ಮೇಷನ್ ಅನಲಿಟಿಕ್ಸ್’ ವರದಿ

ಶಿಕ್ಷಣ ಸಂಸ್ಥೆಗಳು ಸೈಬರ್ ದಾಳಿಯ ಗುರಿ

ನವದೆಹಲಿ:(ಪಿಟಿಐ) ‘ಅಮೆರಿಕ, ಬ್ರಿಟನ್, ಇಂಡೊನೇಷ್ಯಾ, ಬ್ರೆಜಿಲ್ ಬಳಿಕ ಭಾರತದ ಶೈಕ್ಷಣಿಕ ಸಂಸ್ಥೆಗಳು ಮತ್ತು ಸಾಮಾಜಿಕ ಜಾಲತಾಣಗಳು ಸೈಬರ್ ದಾಳಿಯ ದೊಡ್ಡಗುರಿಗಳಾಗಿವೆ’ ಎಂದು ವರದಿಯೊಂದು ಹೇಳಿದೆ.

‘ಕೋವಿಡ್-19 ಸಮಯದಲ್ಲಿ ದೂರಶಿಕ್ಷಣ ಕಲಿಕೆಯ ಭಾಗವಾಗಿ ಅಳವಡಿಸಿಕೊಂಡ ಶಿಕ್ಷಣದ ಡಿಜಿಟಲೀಕರಣ ಮತ್ತು ಆನ್‌ಲೈನ್ ಕಲಿಕಾ ವೇದಿಕೆಗಳು ಸೈಬರ್ ದಾಳಿಯ ವಿಸ್ತರಣೆಗೆ ಮುಖ್ಯ ಪ್ರಚೋದಕಗಳಾಗಿವೆ’ ಎಂದು ಸಿಂಗಪುರ ಮೂಲದ ಕ್ಲೌಡ್‌ಸೆಕ್‌ನ ‘ಥ್ರೆಟ್ ರಿಸರ್ಚ್ ಅಂಡ್ ಇನ್‌ಫಾರ್ಮೇಷನ್ ಅನಲಿಟಿಕ್ಸ್’ ವಿಭಾಗದ ವರದಿಯು ಹೇಳಿದೆ.

‘ಜಾಗತಿಕ ಶಿಕ್ಷಣ ಕ್ಷೇತ್ರವನ್ನು ಗುರಿಯಾಗಿಸಿಕೊಂಡ ಸೈಬರ್ ಬೆದರಿಕೆಗಳು’ ಎನ್ನುವ ಶೀರ್ಷಿಕೆಯಡಿ ಅಧ್ಯಯನ ಕೈಗೊಳ್ಳಲಾಗಿತ್ತು. ಈ ಅಧ್ಯಯನದ ವರದಿ ಅನ್ವಯ, ‘2021ಕ್ಕೆ ಹೋಲಿಸಿದರೆ, 2022ರ ಮೊದಲ ಮೂರು ತಿಂಗಳಲ್ಲಿ ಜಾಗತಿಕ ಶಿಕ್ಷಣ ಕ್ಷೇತ್ರಕ್ಕೆ ಎದುರಾಗುವ ಸೈಬರ್ ಬೆದರಿಕೆಗಳಲ್ಲಿ ಶೇ 20ರಷ್ಟು ಹೆಚ್ಚಳವಾಗಿದೆ’ ಎಂದು ಅಂಕಿ-ಅಂಶಗಳ ಮೂಲಕ ಕಂಡುಕೊಳ್ಳಲಾಗಿದೆ.

‘ಕಳೆದ ವರ್ಷ ಏಷ್ಯಾ ಮತ್ತು ಪೆಸಿಫಿಕ್‌ನಲ್ಲಿ ಪತ್ತೆಯಾದ ಸೈಬರ್ ದಾಳಿಯ ಬೆದರಿಕೆಗಳ ಪೈಕಿ ಶೇ 58 ಬೆದರಿಕೆಗಳು ಭಾರತೀಯ ಅಥವಾ ಭಾರತ ಮೂಲದ ಶಿಕ್ಷಣ ಸಂಸ್ಥೆಗಳು ಮತ್ತು ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳನ್ನು ಗುರಿಯಾಗಿರಿಸಿಕೊಂಡಿವೆ. ಹೀಗೆ ಗುರಿಯಾಗಿಸಿಕೊಂಡ ಶಿಕ್ಷಣ ಸಂಸ್ಥೆಗಳಲ್ಲಿ ಬೈಜು, ಕೋಯಿಕ್ಕೋಡ್‌ನ ಐಐಎಂ ಮತ್ತು ತಮಿಳುನಾಡಿನ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯವೂ ಸೇರಿದೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ದಿನೇದಿನೇ ಬೆಳವಣಿಗೆ ಕಾಣುತ್ತಿರುವ ಜಾಗತಿಕ ಶಿಕ್ಷಣ ಮತ್ತು ತರಬೇತಿ ಮಾರುಕಟ್ಟೆಯ ವಹಿವಾಟು 2025ರ ವೇಳೆಗೆ ₹ 554 ಲಕ್ಷ ಕೋಟಿ ತಲುಪುವ ನಿರೀಕ್ಷೆ ಇದ್ದು, ಸೈಬರ್ ಅಪರಾಧಿಗಳು ಇದರತ್ತ ಆಕರ್ಷಿತರಾಗುತ್ತಿದ್ದಾರೆ’ ಎಂದು ಕ್ಲೌಡ್‌ಸೆಕ್‌ನ ಪ್ರಧಾನ ಸಂಶೋಧಕ ದರ್ಶಿತ್ ಆಶಾರಾ ವಿಶ್ಲೇಷಿಸಿದ್ದಾರೆ.

‘ವಿದ್ಯಾರ್ಥಿಗಳು, ಪೋಷಕರು, ಅಧ್ಯಾಪಕರು ಮತ್ತು ಸಿಬ್ಬಂದಿ ಅನುಮಾನಾಸ್ಪದ ಇ- ಮೇಲ್‌ಗಳು, ಸಂದೇಶಗಳು ಮತ್ತು ಲಿಂಕ್‌ಗಳ ಮೇಲೆ ಕ್ಲಿಕ್ ಮಾಡುವುದನ್ನು ತಪ್ಪಿಸಬೇಕು. ಯಾವುದೇ ಅಪ್ಲಿಕೇಷನ್‌ಗಳನ್ನು ಪರಿಶೀಲಿಸದೇ ಡೌನ್‌ಲೋಡ್ ಅಥವಾ ಇನ್‌ಸ್ಟಾಲ್ ಮಾಡಬಾರದು. ಆನ್‌ಲೈನ್‌ನಲ್ಲಿ ತಾವು ಬಳಸುವ ಖಾತೆಗಳಿಗೆ ಇತರರು ಸುಲಭವಾಗಿ ಬಳಸಬಹುದಾದ ಅಥವಾ ಊಹೆ ಮಾಡಬಹುದಾದ ಪಾಸ್‌ವರ್ಡ್‌ಗಳನ್ನು ಅಳವಡಿಸಬಾರದು. ಯಾವುದೇ ಸಂಸ್ಥೆಗಳು ಕಾನೂನುಬಾಹಿರವಾದ ಐಪಿ ವಿಳಾಸಗಳನ್ನು ನಿರ್ಬಂಧಿಸಬೇಕು ’ ಎಂದೂ ವರದಿಯಲ್ಲಿ ಸಲಹೆ ನೀಡಲಾಗಿದೆ.







ಖೇಲೊ ಇಂಡಿಯಾ ವಾರ್ಸಿಟಿ ಕ್ರೀಡಾಕೂಟ ಅಥ್ಲೆಟಿಕ್ಸ್: ರಿಲೆಯಲ್ಲಿ ಮಂಗಳೂರು ವಿವಿ ಪಾರಮ್ಯ

ದಾಖಲೆ ಮಳೆ; ಪ್ರಿಯಾಗೆ ಚಿನ್ನದ ಕಳೆ

• ವಿಕ್ರಂ ಕಾಂತಿಕೆರೆ

ಬೆಂಗಳೂರು: ಬೆಳಿಗ್ಗೆ ಉರಿಸಿಕೆ ಲಕ್ಷಿಸದೆ ವೇಗನಡಿಗೆಯಲ್ಲಿ ಅಕ್ಷದೀಪ್ ದಾಖಲೆ ನಿರ್ಮಿಸಿದರೆ ಸಂಜೆ ಸುರಿದ ಧಾರಾಕಾರ ಮಳೆಯಿಂದಾಗಿ 'ಜಾರುವ ರನ್‌ವೇ'ಯ ಸವಾಲು ಮೀರಿದ ರಿಷಬ್ ನೆಹ್ರಾ, ಜಾವೆಲಿನ್ ಥ್ರೋದಲ್ಲಿ ಮಿಂಚಿದರು. ಐದು ದಾಖಲೆಗಳು ಮೂಡಿದ ದಿನ ಕಂಠೀರವ ಕ್ರೀಡಾಂಗಣದಲ್ಲಿ ಆತಿಥೇಯ ಜೈನ್ ವಿವಿಯ ಪ್ರಿಯಾ ಮೋಹನ್ ಚಿನ್ನ ಗೆದ್ದು ಸಂಭ್ರಮಿಸಿದರು.

ಭಾನುವಾರ ನಡೆದ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾ ಕೂಟದ ಅಥ್ಲೆಟಿಕ್ಸ್‌ನ ಜಾವೆಲಿನ್ ಥ್ರೋದಲ್ಲಿ ರಾಮಮನೋಹರ್ ಲೋಹಿಯಾ ವಿವಿಯ ರಿಷಬ್ 76.64 ಮೀಟರ್ಸ್ ದೂರದ ಸಾಧನೆಯೊಂದಿಗೆ ಚಿನ್ನ ಗಳಿಸಿದರು. ಕಳೆದ ಬಾರಿ ಹರೀಶ್ ಮಾಡಿದ್ದ ದಾಖಲೆ ಮುರಿದರು.

ಪುರುಷರ 20 ಕಿಲೋಮೀಟರ್ ವೇಗ ನಡಿಗೆಯಲ್ಲಿ ಪಂಜಾಬಿ ವಿವಿಯ ಅಕ್ಷದೀಪ್ ಸಿಂಗ್ 1 ತಾಸು 26.44 ನಿಮಿಷಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ಗಳಿಸಿದರು. ಕೂಟ ದಾಖಲೆಯನ್ನೂ ಮಾಡಿದರು.

ಕುಮಾಂವ್ ವಿವಿಯ ಅನ್ಮುಲ್ ಬೆಳ್ಳಿ ಪದಕ ಗೆದ್ದುಕೊಂಡರು. ಮಂಗಳೂರು ವಿವಿಯ ಪರಮ್‌ಜೀತ್ ಬಿಷ್ಟ್ ಕಂಚಿನ ಪದಕ ಗಳಿಸಿದರು.

ಜಾವೆಲಿನ್‌ನಲ್ಲಿ ರಿಷಬ್ ಕೊನೆಯ ಪ್ರಯತ್ನದಲ್ಲಿ ದಾಖಲೆ ಬರೆದರು. ಲವ್ಲಿ ಪ್ರೊಫೆಷನಲ್ ವಿವಿಯ ಕುನ್ವರ್ ಅಜಯ್‌ರಾಜ್ ರಾಣಾ ಅವರಿಂದ ರಿಷಬ್ ತೀವ್ರ ಪೈಪೋಟಿ ಎದುರಿಸಿದರು. ಮೊದಲ ಪ್ರಯತ್ನದಲ್ಲಿ ಇಬ್ಬರೂ 69 ಮೀಟರ್‌ಗಳನ್ನು ದಾಟಿದ್ದರು. ನಂತರವೂ ಜಿದ್ದಾಜಿದ್ದಿಯ ಹಣಾಹಣಿ ಕಂಡುಬಂತು. ರಿಷಬ್ 2 ಮತ್ತು 4ನೇ ಪ್ರಯತ್ನದಲ್ಲಿ ಫೌಲ್ ಮಾಡಿದರು.

200 ಮೀಟರ್ಸ್ ಓಟದಲ್ಲಿ ಅಖಿಲ ಭಾರತ ವಿವಿ ಕ್ರೀಡಾಕೂಟ (52.58 ಸೆ) ಮತ್ತು ಖೇಲೊ ಇಂಡಿಯಾ ಕ್ರೀಡಾಕೂಟದ (53.88) ದಾಖಲೆ ಹೊಂದಿರುವ ಪ್ರಿಯಾ ಮೋಹನ್ ಇಲ್ಲಿ 54.43 ಸೆಕೆಂಡುಗಳೊಂದಿಗೆ ಚಿನ್ನ ಗೆದ್ದರು. ಮಂಗಳೂರು ವಿವಿಯ ಲಿಖಿತಾ (55.45 ಸೆ) ಕಂಚು ಗಳಿಸಿದರು. ಪುರುಷರ 400 ಮೀಟರ್ಸ್‌ನಲ್ಲಿ ಬೆಳ್ಳಿ ಮತ್ತು ಕಂಚು ಮಂಗಳೂರು ವಿವಿ ಪಾಲಾಯಿತು.



ಪ್ರಿಯಾ ಮೋಹನ್ ಗುರಿಯತ್ತ ಮುನ್ನುಗ್ಗಿದರು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

ಎರಡು ತಾಸು ಸ್ಪರ್ಧೆ ಸ್ಥಗಿತ

ಸಂಜೆ ಸುರಿದ ಭಾರಿ ಮಳೆಯಿಂದಾಗಿ ಅಥ್ಲೆಟಿಕ್ ಸ್ಪರ್ಧೆಗಳನ್ನು ಕೆಲಕಾಲ ಸ್ಥಗಿತಗೊಳಿಸಲಾಯಿತು. ಫೀಲ್ಡ್‌ನಲ್ಲಿ ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆ ಅಂತಿಮ ಹಂತದಲ್ಲಿದ್ದಾಗ ಟ್ರ್ಯಾಕ್‌ನಲ್ಲಿ ಮಹಿಳೆಯರ 100 ಮೀಟರ್ಸ್ ಮತ್ತು ಪುರುಷರ 110 ಮೀ ಹರ್ಡಲ್ಸ್‌ಗೆ ಸಿದ್ಧತೆ ನಡೆಯುತ್ತಿತ್ತು. ಮಳೆಯ ನಡುವೆಯೇ ಸ್ವಲ್ಪ ಹೊತ್ತು ಜಾವೆಲಿನ್ ಸ್ಪರ್ಧೆ ಮುಂದುವರಿಸಲಾಯಿತು. ನಂತರ ಸ್ಥಗಿತಗೊಳಿಸಲಾಯಿತು. ಎರಡು ತಾಸುಗಳ ನಂತರ ಪುನರಾರಂಭ ಮಾಡಲಾಯಿತು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅಂಗಣದಲ್ಲಿ ಮಹಿಳಾ ಹಾಕಿಯ ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯಕ್ಕೂ ಮಳೆ ಅಡ್ಡಿಪಡಿಸಿತು. ಸಂಜೆ 5 ಗಂಟೆಗೆ ಪಂದ್ಯ ಆರಂಭವಾಗಬೇಕಾಗಿತ್ತು. ಅಂಗಣದಲ್ಲಿ ನೀರು ನಿಂತಿದ್ದರಿಂದ ನಿಗದಿತ ಸಮಯಕ್ಕೆ ಶುರುಮಾಡಲು ಆಗಲಿಲ್ಲ. ಒಂದೂಕಾಲು ತಾಸಿನ ನಂತರ ಪಂದ್ಯ ಆರಂಭಿಸಲಾಯಿತು.

ಪದಕ ಪಟ್ಟಿಯಲ್ಲಿ ಅಗ್ರ 5 ಸ್ಥಾನ

ವಿವಿ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಜೈನ್	17	6	5	28
ಲವ್ಲಿ	13	11	10	34
ಪಂಜಾಬ್	12	6	21	39
ಗುರುನಾನಕ್	11	11	12	34
ಮಹರ್ಷಿ ದಯಾನಂದ್	9	10	12	31

ಫಲಿತಾಂಶಗಳು: ಅಥ್ಲೆಟಿಕ್ಸ್: ಪುರುಷರ 400 ಮೀ ಓಟ: ನಿತಿನ್ ಕುಮಾರ್ (ಚೌಧರಿ ಚರಣ್)-1. ಕಾಲ: 47.63 ಸೆ, ನಿಹಾಲ್ ಡಬ್ಲ್ಯು (ಮಂಗಳೂರು)-2, ಮಹಾಂತೇಶ್ ಎಚ್ (ಮಂಗಳೂರು)-3; 110 ಮೀ ಹರ್ಡಲ್ಸ್: ವಿಕಾಸ್ ಖೋಡೆ (ಶಿವಾಜಿ)-1. ಕಾಲ: 14.40 ಸೆ (ಕೂಟ ದಾಖಲೆ; ಹಳೆಯದು: 14.40, ರೊನಾಲ್ಡ್ ಬಾಬು), ಯಶ್ವಂತ್ ಕುಮಾರ್ (ನಾಗಾರ್ಜುನ)-2, ಕೃಷಿಕ್ (ವಿಟಿಯು)-3. 4x100 ಮೀ ರಿಲೆ; ಮಂಗಳೂರು ವಿವಿ (ಶಿಜನ್, ಅಭಿನ್ ದೇವಾಡಿಗ, ತೀರ್ಥೇಶ್ ಶೆಟ್ಟಿ, ವಿಘ್ನೇಶ್)-1. ಕಾಲ: 40.76 ಸೆ (ಕೂಟ ದಾಖಲೆ; ಹಳೆಯ: 41.39, ಎಂ.ಜಿ ವಿವಿ), ಭಾರತಿಯಾರ್ ವಿವಿ-2, ಮದ್ರಾಸ್ ವಿವಿ-3. 20 ಕಿ ಮೀ ವೇಗ ನಡಿಗೆ: ಅಕ್ಷದೀಪ್ ಸಿಂಗ್ (ಪಂಜಾಬಿ)-1. ಕಾಲ: 1 ತಾಸು 26.44 ಸೆ (ಕೂಟ ದಾಖಲೆ; ಹಳೆಯದು: 1:29.51.80, ಜುನೇದ್); ಅನ್ಮುಲ್ ದೊಂಡಿಯಾಲ್ (ಕುಮಾಂವ್)-2, ಪರಮ್‌ಜೀತ್ ಬಿಷ್ಟ್ (ಮಂಗಳೂರು)-3; ಜಾವೆಲಿನ್ ಥ್ರೋ: ರಿಷಬ್ ನೆಹ್ರಾ (ರಾಮಮನೋಹರ್ ಲೋಹಿಯಾ)-1. ದೂರ: 76.64 ಮೀ (ಕೂಟ ದಾಖಲೆ; ಹಿಂದಿನದು: 70 ಮೀ, ಕುಮಾರ್ ಮಹಾರಾಜ), ಕುನ್ವರ್ ಅಜಯ್ ರಾಜ್ (ಲವ್ಲಿ)-2, ಇರ್ಫಾನ್ ಮಹಮದ್ (ಪ್ರೊ ರಾಜೇಂದ್ರ)-3; 3000 ಮೀ ಸ್ಟೀಪಲ್ ಚೇಸ್: ಪ್ರಿನ್ಸ್ ವಿಶ್ವ (ಲವ್ಲಿ)-1. ಕಾಲ: 8:58.39 (ಕೂಟ ದಾಖಲೆ, ಹಳೆಯದು 9:11.26, ಎ. ಪೂನಿಯಾ), ಲೋಕೇಶ್ (ಮಹರ್ಷಿ ಚೌಧರಿ)-2, ಸಿದ್ಧಾಂತ್ (ಶಿವಾಜಿ)-3.

ಮಹಿಳೆಯರ 400 ಮೀ ಓಟ: ಪ್ರಿಯಾ ಮೋಹನ್ (ಜೈನ್)-1. ಕಾಲ: 54.43 ಸೆ, ಪ್ಲಾರೆನ್ಸ್ ಬಾರ್ಲಾ (ರಾಂಚಿ)-2, ಲಿಖಿತಾ ಎ.ಎಂ (ಮಂಗಳೂರು)-3; 3000 ಮೀ ಸ್ಟೀಪಲ್ ಚೇಸ್: ಕೋಮಲ್ ಜಗದಾಳೆ (ಪುಣೆ)-1. ಕಾಲ 10:13.49 (ಕೂಟ ದಾಖಲೆ; ಹಳೆಯದು: 10:26.63, ಕೋಮಲ್ ಜಗದಾಳೆ); ರವಿ ಪಾಲ್ (ಬನಾರಸ್)-2, ಕಾಜಲ್ ಶರ್ಮಾ (ಲಖನೌ)-3; 4x100 ಮೀ ರಿಲೆ: ಎಂ.ಜಿ ವಿವಿ-1. ಕಾಲ: 47.02 (ಕೂಟ ದಾಖಲೆ; ಹಳೆಯದು: 47.37, ಎಂ.ಜಿ), ಮಂಗಳೂರು ವಿವಿ-2, ರಾಂಚಿ ವಿವಿ-3; 100 ಮೀ ಹರ್ಡಲ್ಸ್: ಅಪರ್ಣಾ ರಾಯ್ (ಕೇರಳ)-1. ಕಾಲ: 14.28 ಸೆ, ಕೆ.ನಂದಿನಿ (ಮದ್ರಾಸ್)-2, ಆನ್ ರೋಸ್ ಟಾಮಿ (ಕ್ಯಾಲಿಕಟ್)-3; ಲಾಂಗ್ ಜಂಪ್: ಆನ್ಸಿ ಸೋಜನ್ (ಕ್ಯಾಲಿಕಟ್)-1. ಅಂತರ: 5.98 ಮೀ, ಸಾಂದ್ರ ಬಾಬು (ಕ್ಯಾಲಿಕಟ್)-2, ಶ್ರುತಿಲಕ್ಷ್ಮಿ (ಮಂಗಳೂರು)-3; ಶಾಟ್‌ಪಟ್: ಅಂಬಿಕಾ (ಮೈಸೂರು)-1. ದೂರ: 14.04 ಮೀ, ಜಾಸ್ಮಿನ್ (ಲವ್ಲಿ)-2, ರೇಖಾ (ಮಂಗಳೂರು)-3; ಜಾವೆಲಿನ್ ಥ್ರೋ: ಜ್ಯೋತಿ (ದೇವಿಲಾಲ್)-1. ದೂರ: 46.32 ಮೀ; ಕರಿಷ್ಮಾ ಸನಿಲ್ (ಮಂಗಳೂರು)-2, ಪುಷ್ಪಾ (ಮಹಾರಾಜ ಗಂಗಾನಗರ)-3.

ಕುಸ್ತಿ: ಪುರುಷರ 130 ಕೆಜಿ ಗ್ರೀಕೊ ರೋಮನ್: ಸತೀಶ್ (ಮಹರ್ಷಿ ದಯಾನಂದ್)-1, ಅಶೋಕ್ ಗ್ರಿವಾಲ್ (ಚೌಧರಿ ಬನ್ಸಿಲಾಲ್)-2, ಶಿಖರ್ ದುಬೆ (ಭಾರತೀಯ ವಿದ್ಯಾಪೀಠ)-3. ಆರ್ಚರಿ (ಚಿನ್ನ ಮಾತ್ರ): ಪುರುಷರ ರಿಕರ್ವ್: ಸಚಿನ್ ಗುಪ್ತ; ಕುರುಕ್ಷೇತ್ರ; ರಿಕರ್ವ್ ತಂಡ: ಕುರುಕ್ಷೇತ್ರ; ಮಹಿಳೆಯರ ರಿಕರ್ವ್: [illegible]; ತಂಡ: ಮಹರ್ಷಿ ದಯಾನಂದ; ಮಿಶ್ರ: ಕುರುಕ್ಷೇತ್ರ. ಟೆನಿಸ್: [illegible], ಗುಜರಾತ್-3; ಫೆನ್ಸಿಂಗ್: ಪುರುಷರ ಫಾಯಿಲ್: ಗುರುನಾನಕ್-1, ಲವ್ಲಿ-2, ಪಂಜಾಬ್-3. ಯೋಗಾಸನ: ಪುರುಷರ ವಿಭಾಗ: ರಾಷ್ಟ್ರಸಂತ ತುಕಡೋಜಿ ವಿವಿ-1, ಶಿವಾಜಿ -2, ಚೌಧರಿ ಬನ್ಸಿಲಾಲ್-3; ಮಹಿಳಾ ವಿಭಾಗ: ಸಾವಿತ್ರಿಬಾಯಿ ಫುಲೆ-1, ರಾಷ್ಟ್ರಸಂತ ತುಕಡೋಜಿ-2, ಗುರು ಜಂಬೇಶ್ವರ್-3. ಶೂಟಿಂಗ್: ಮಹಿಳೆಯರ 10 ಮೀ ಏರ್ ಪಿಸ್ತೂಲ್: [illegible]-1, [illegible]; 16, ರಾಧಿಕಾ ಸಿಂಗ್ (ಚೌಧರಿ ಬನ್ಸಿಲಾಲ್)-2, ಅಲಕಾ ಸಿಂಗ್ (ಡೆಲ್ಲಿ)-3; 50 ಮೀ ರೈಫಲ್-3 ಪೊಸಿಷನ್: ಆಶಿ ಚೌಕಸೆ (ಅಮೃತಸರ)-1, ಪಾರುಲ್-17, ಸೃಷ್ಟಿ ಮಿತ್ರಾ (ಬರ್ಕತ್ ಉಲ್ಲಾ)-2, ಮಾನಿನಿ ಕೌಶಿಕ್ (ಮಣಿಪಾಲ)-3.

ಬೀಚ್ ಹ್ಯಾಂಡ್‌ಬಾಲ್: ಭಾರತಕ್ಕೆ ಬೆಳ್ಳಿ ಪದಕ

ನವದೆಹಲಿ (ಪಿಟಿಐ): ಭಾರತ ತಂಡವು ಏಷ್ಯನ್ ಯೂತ್ ಮಹಿಳೆಯರ ಬೀಚ್ ಹ್ಯಾಂಡ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಜಯಿಸಿದೆ. ರಾಷ್ಟ್ರೀಯ ಫೆಡರೇಷನ್ ಭಾನುವಾರ ಈ ವಿಷಯ ತಿಳಿಸಿದೆ.

ಥಾಯ್ಲೆಂಡ್‌ನ ಬ್ಯಾಂಕಾಕ್‌ನಲ್ಲಿ ಶನಿವಾರ ಕೊನೆಗೊಂಡ ಚಾಂಪಿಯನ್‌ಷಿಪ್‌ನಲ್ಲಿ ಭಾರತ ತಂಡವು ಹಾಂಗ್‌ಕಾಂಗ್ ತಂಡವನ್ನು ಎರಡು ಬಾರಿ ಸೋಲಿಸಿತು. ಆತಿಥೇಯ ಥಾಯ್ಲೆಂಡ್ ಎದುರು ತಲಾ ಒಂದು ಗೆಲುವು ಮತ್ತು ಸೋಲು ಅನುಭವಿಸಿ ಎರಡನೇ ಸ್ಥಾನ ಗಳಿಸಿತು.

ಭಾರತ ಸೀನಿಯರ್ ಮಹಿಳಾ ತಂಡವು ಇದೇ ಕೂಟದಲ್ಲಿ ಕಂಚು ಗೆದ್ದುಕೊಂಡಿದೆ.



ಪ್ರಶಸ್ತಿ ವಿಜೇತ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತಂಡ: ಎಡದಿಂದ (ನಿಂತವರು): ಅಕ್ಷನ್, ಜೋಷುವಾ, ರೋಹನ್, ಪ್ರೀತಂ, ವಿಷ್ಣು, ಪ್ರದ್ಯುಮ್ನ. (ಕುಳಿತವರು) ದಿನೇಶ್, ಪ್ರಣವ್, ವಾಸು ಸಿಂಗ್, ಗೌರವ್, ಚಲ್ಲಾ ಶ್ರೀನಿವಾಸ್

ಬ್ಯಾಸ್ಕೆಟ್‌ಬಾಲ್: ರಾಮಯ್ಯ ಇನ್‌ಸ್ಟಿಟ್ಯೂಟ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಆರ್‌ಐಟಿ) ಕಾಲೇಜು ತಂಡವು ಅಖಿಲ ಭಾರತ ಅಂತರಕಾಲೇಜು ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದೆ.

ಕೆಂಗೇರಿಯ ಕ್ರೈಸ್ಟ್ ವಿಶ್ವವಿದ್ಯಾಲಯದ ಆವರಣದಲ್ಲಿ ಶನಿವಾರ ಕೊನೆಗೊಂಡ 'ದೇವದನ್ ಕಪ್' ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯದಲ್ಲಿ ಆರ್‌ಐಟಿ 50- 47ರಿಂದ ನಿಟ್ಟೆಯ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎನ್‌ಎಂಐಟಿ) ವಿರುದ್ಧ ಜಯ ಸಾಧಿಸಿತು.

ವಿಜೇತ ತಂಡದ ಪರ ಜೋಷುವಾ 14, ಪ್ರದ್ಯುಮ್ನ 12 ಪಾಯಿಂಟ್ಸ್ ಕಲೆಹಾಕಿದರು. ಎನ್‌ಎಂಐಟಿ ಪರ ಸುಮಂತ್ 16 ಮತ್ತು ಭುವನ್ 15 ಪಾಯಿಂಟ್ಸ್ ಗಳಿಸಿದರು.

ಪ್ರಶಸ್ತಿ ವಿಜೇತ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತಂಡ: ಎಡದಿಂದ (ನಿಂತವರು): ಅಕ್ಷನ್, ಜೋಷುವಾ, ರೋಹನ್, ಪ್ರೀತಂ, ವಿಷ್ಣು, ಪ್ರದ್ಯುಮ್ನ. (ಕುಳಿತವರು) ದಿನೇಶ್, ಪ್ರಣವ್, ವಾಸು ಸಿಂಗ್, ಗೌರವ್, ಚಲ್ಲಾ ಶ್ರೀನಿವಾಸ್



ಚಿನ್ನ ಗೆದ್ದ ಬೆಂಗಳೂರು ನಗರ ವಿವಿ ತಂಡ. ಮುಂದಿನ ಸಾಲು (ಎಡದಿಂದ): ಸಂಜಯ್, ಮಯೂರ್ ಬೋಪಯ್ಯ, ಮೊಹಮ್ಮದ್ ಇಲಿಯಾಸ್ (ಮ್ಯಾನೇಜರ್), ಎ.ಬಿ.ಸುಬ್ಬಯ್ಯ (ಹಾಕಿ ಕರ್ನಾಟಕ ಪ್ರಧಾನ ಕಾರ್ಯದರ್ಶಿ), ಪುನೀತ್ (ನಾಯಕ), ಲಿಂಗರಾಜ್ ಗಾಂಧಿ (ಕುಲಪತಿ), ವಿಜಯಕೃಷ್ಣನ್ (ಕೋಚ್), ಗಣೇಶ್, ರವಿಕುಮಾರ್. ನಿಂತವರು: ಸುಕಲ್ಯಾಣ್, ಹರೀಶ ಮುತಗಾರ, ಅನ್ಸರ್ ಅಲಿ, ತೇಜು, ಭರತ್ ಕುರ್ತಕೋಟಿ, ಪವನ್ ಮಡಿವಾಳರ, ಆಶಿಕ್, ದೀಪಕ್, ನೀಲೇಶ್ ಹಾನಗಲ್, ಶ್ರೀಧರ್, ವಸಂತ ಕುಮಾರ್ ಗೋಕಾವಿ, ಪ್ರಣಾಮ್ –ಪ್ರಜಾವಾಣಿ ಚಿತ್ರ

ಹಾಕಿ: ಹರೀಶ್ ಮುತಗಾರ, ವಸಂತ ಕುಮಾರ್ ಮಿಂಚು

ಬೆಂಗಳೂರು ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೀಗ್ ಹಂತದಿಂದಲೇ ಅಮೋಘ ಆಟವಾಡುತ್ತ ಬಂದಿದ್ದ ಬೆಂಗಳೂರು ನಗರ ವಿಶ್ವವಿದ್ಯಾಲಯ ತಂಡ ಖೇಲೊ ಇಂಡಿಯಾ ಅಂತರ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಹಾಕಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಹಾಕಿ ಕ್ರೀಡಾಂಗಣದಲ್ಲಿ ಭಾನುವಾರ ಬೆಳಿಗ್ಗೆ ನಡೆದ ಪಂದ್ಯದಲ್ಲಿ ಬೆಂಗಳೂರು ವಿವಿ 3-0ಯಿಂದ ಪಂಜಾಬ್‌ನ ಗುರುನಾನಕ್ ದೇವ್ ವಿವಿಯನ್ನು ಮಣಿಸಿತು. ಈ ಮೂಲಕ ಸತತ ಎರಡನೇ ಬಾರಿ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿತು. ಹರೀಶ ಮುತಗಾರ ಮತ್ತು ವಸಂತ ಗೋಕಾವಿ ಜೋಡಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಜಿದ್ದಾಜಿದ್ದಿಯ ಹಣಾಹಣಿಯ ಮೊದಲ ಕ್ವಾರ್ಟರ್‌ನಿಂದಲೇ ಬೆಂಗಳೂರು ಆಧಿಪತ್ಯ ಸ್ಥಾಪಿಸಿತು. ಆರಂಭದಲ್ಲಿ ಗುರುನಾನಕ್ ವಿವಿ ಕೂಡ ಆಕ್ರಮಣಕಾರಿ ಆಟದ ಮೂಲಕ ತೀವ್ರ ಪೈಪೋಟಿ ಒಡ್ಡಿತು. ಆದರೆ ಪಂದ್ಯ ಮುಂದುವರಿದಂತೆ ಬೆಂಗಳೂರು ವಿವಿ ಹಿಡಿತ ಸಾಧಿಸಿತು. ಗೋಲುಗಳಿಲ್ಲದೇ ಮೊದಲ ಕ್ವಾರ್ಟರ್ ಮುಕ್ತಾಯಗೊಂಡಿತು.

ಎರಡನೇ ಕ್ವಾರ್ಟರ್‌ನಿಂದ ಬೆಂಗಳೂರು ವಿವಿಯ ಅಕ್ರಮಣ ಬಿಗಿಯಾಯಿತು. ಎದುರಾಳಿಗಳು ಪಟ್ಟುಬಿಡಲಿಲ್ಲ. ಬೆಂಗಳೂರು ತಂಡದ ಆವರಣಕ್ಕೆ ಪದೇ ಪದೇ ನುಗ್ಗಿದ ತಂಡಕ್ಕೆ ಸತತ ಎರಡು ಪೆನಾಲ್ಟಿ ಕಾರ್ನರ್ ಅವಕಾಶಗಳು ಲಭಿಸಿದವು. ಆದರೆ ಗೋಲ್‌ಕೀಪರ್ ಸಂಜಯ್ ಅವರನ್ನು ದಾಟಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಲು ತಂಡಕ್ಕೆ ಸಾಧ್ಯವಾಗಲಿಲ್ಲ. ಮೊದಲ ಎರಡು ಕ್ವಾರ್ಟರ್‌ಗಳಲ್ಲಿ ಒಟ್ಟು ಮೂರು ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗುರುನಾನಕ್ ವಿವಿ ಕೈಚೆಲ್ಲಿತು.

ಮುತಗಾರ-ವಸಂತ ಮ್ಯಾಜಿಕ್: ಟೂರ್ನಿಯುದ್ದಕ್ಕೂ ಅಮೋಘ ಆಟವಾಡಿ ಅತಿ ಹೆಚ್ಚು, 9 ಗೋಲುಗಳ ಸಾಧನೆ ಮಾಡಿರುವ ಹರೀಶ್ ಮುತಗಾರ 28ನೇ ನಿಮಿಷದಲ್ಲಿ ಮ್ಯಾಜಿಕ್ ಮಾಡಿದರು. ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಪ್ರಣಾಮ್ ಗೌಡ ಪುಷ್ ಮಾಡಿದ ಚೆಂಡನ್ನು ಹರೀಶ್ ಮಿಂಚಿನ ವೇಗದಲ್ಲಿ ಫ್ಲಿಕ್ ಮಾಡಿ ಗುರಿ ಮುಟ್ಟಿಸಿದರು. 51ನೇ ನಿಮಿಷದಲ್ಲಿ ಎದುರಾಳಿ ಡಿಫೆಂಡರ್‌ಗಳಿಗೆ ಚಳ್ಳೆಹಣ್ಣು ತಿನ್ನಿಸಿದ ವಸಂತ ಕುಮಾರ್ ಕೋಕಾವಿ ಮುನ್ನಡೆ ಹೆಚ್ಚಿಸಿದರು. ಎರಡು ಗೋಲುಗಳ ಬಲದಿಂದ ತಂಡ ಕೊನೆಯ ಹಂತದಲ್ಲಿ ಆಕ್ರಮಣವನ್ನು ಇನ್ನಷ್ಟು ಹೆಚ್ಚಿಸಿತು. ಅಂತಿಮ ನಿಮಿಷದಲ್ಲಿ ಮತ್ತೆ ಮಿಂಚಿದ ಹರೀಶ ಗೆಲುವಿನ ಅಂತರವನ್ನು 3-0ಗೆ ಏರಿಸುವಲ್ಲಿ ಯಶಸ್ವಿಯಾದರು. ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಪುಣೆಯ ಸಾವಿತ್ರಿಬಾಯಿ ಫುಲೆ ವಿವಿ ಪಂಜಾಬಿ ವಿವಿಯನ್ನು ಶೂಟೌಟ್‌ನಲ್ಲಿ 4-2ರಲ್ಲಿ ಮಣಿಸಿತು.

ಮಹಿಳೆಯರ ವಿಭಾಗದಲ್ಲಿ ಮೈಸೂರಿಗೆ ಬೆಳ್ಳಿ: ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಐಟಿಎಂ ವಿವಿ 2-0ಯಿಂದ ಮೈಸೂರು ವಿವಿಯನ್ನು ಮಣಿಸಿತು.

ಸಿಂಧು ಕಣ್ಣೀರು



ಪಿ.ವಿ.ಸಿಂಧು

ಮನಿಲಾ (ಪಿಟಿಐ): ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪಂದ್ಯದಲ್ಲಿ ಅಂಪೈರ್‌ಗಳ ನಿರ್ಧಾರದಿಂದಾಗಿ ತಮಗೆ ಅನ್ಯಾಯವಾಗಿದೆ. ಅದರಿಂದಾಗಿ ಸೋಲಿನತ್ತ ನಡೆದೆ ಎಂದು ಭಾರತದ ಆಟಗಾರ್ತಿ ಪಿ.ವಿ.ಸಿಂಧು ಬೇಸರ ವ್ಯಕ್ತಪಡಿಸಿದ್ದಾರೆ. ಪಂದ್ಯದ ಮೊದಲ ಗೇಮ್ ಗೆದ್ದುಕೊಂಡಿದ್ದ ಸಿಂಧು ಎರಡನೇ ಗೇಮ್‌ನಲ್ಲಿ 14–11ರಿಂದ ಮುನ್ನಡೆಯಲ್ಲಿದ್ದರು. ಈ ವೇಳೆ ಸರ್ವ್ ಮಾಡಲು ಸಿಂಧು ನಿಗದಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ ಎಂದು ಅಂಪೈರ್ ಪೆನಾಲ್ಟಿ ನೀಡಿದ್ದರು.

ಇದರಿಂದ ಎದುರಾಳಿ ಜಪಾನ್‌ನ ಅಕಾನೆ ಯಮಗುಚಿ ಅವರಿಗೆ ಒಂದು ಹೆಚ್ಚುವರಿ ಪಾಯಿಂಟ್ ಲಭಿಸಿತ್ತು. ತರುವಾಯ ಪಂದ್ಯದಲ್ಲಿ ಭಾರತದ ಆಟಗಾರ್ತಿ 21-13, 19-21, 16-21ರಿಂದ ಸೋತು ಕಂಚಿನ ಪದಕ ಪಡೆದರು.

200 ಮೀಟರ್ಸ್ ಓಟ: ನೈಟನ್ ಮಿಂಚು

ಪ್ಯಾರಿಸ್ (ಎಎಫ್‌ಪಿ): ಅಮೆರಿಕದ ಯುವ ಸ್ಪ್ರಿಂಟರ್ ಎರಿಯಾನ್ ನೈಟನ್ 200 ಮೀಟರ್ಸ್ ಓಟದಲ್ಲಿ ಭಾನುವಾರ ಮಿಂಚು ಹರಿಸಿದರು. ಬೇಟನ್ ರೇಜ್ ಕ್ರೀಡಾಕೂಟದ ಓಟದಲ್ಲಿ 19.49 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಅವರು ವಿಶ್ವದ ಅತಿವೇಗದ ಓಟಗಾರರಲ್ಲಿ ನಾಲ್ಕನೆಯವರಾದರು.

20 ವರ್ಷದೊಳಗಿನವರ ವಿಭಾಗದಲ್ಲಿ ತಮ್ಮದೇ ಹೆಸರಿನಲ್ಲಿದ್ದ 19.84 ಸೆಕೆಂಡುಗಳ ದಾಖಲೆಯನ್ನು ಮುರಿದ 18 ವರ್ಷದ ನೈಟನ್ ಅವರು ಸ್ಪ್ರಿಂಟ್ ದಂತಕತೆಗಳಾದ ಕಾರ್ಲ್ ಲೂಯಿಸ್ ಮತ್ತು ಟಾಮಿ ಸ್ಮಿತ್ ಅವರ ದಾಖಲೆ ಮುರಿದರು. ಜಮೈಕಾದ ಉಸೇನ್ ಬೋಲ್ಟ್ (19.19 ಸೆ), ಯೊಹಾನ್ ಬ್ಲೇಕ್ (19.26 ಸೆ) ಮತ್ತು ಅಮೆರಿಕದ ಮೈಕೆಲ್ ಜಾನ್ಸನ್ (19.32 ಸೆ) ಅವರು ಈಗ ನೈಟನ್ ಅವರಿಗಿಂತ ಮುಂದೆ ಇದ್ದಾರೆ.

17ರ ವಯಸ್ಸಿನಲ್ಲಿ ಕಳೆದ ವರ್ಷ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವ ಮೂಲಕ ನೈಟನ್ ಗಮನ ಸೆಳೆದಿದ್ದರು. ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದರು. ಕೆನಡಾದ ಆ್ಯಂಡ್ರೆ ಡಿ ಗ್ರಾಸಿ ಅವರು ನೈಟನ್ ಅವರನ್ನು ಹಿಂದಿಕ್ಕಿದ್ದರು. ಜುಲೈ 15ರಿಂದ 24ರ ವರೆಗೆ ಒರಿಗಾನ್‌ನ ಯೂಜಿನ್‌ನಲ್ಲಿ ನಡೆಯಲಿರುವ ವಿಶ್ವ ಹೊರಾಂಗಣ ಕ್ರೀಡಾಂಗಣದಲ್ಲಿ ಪಾಲ್ಗೊಳ್ಳುವುದರತ್ತ ಅವರು ಗಮನ ಹರಿಸಿದ್ದಾರೆ. ಇದರ ಅರ್ಹತಾ ಸುತ್ತಿನ ಸ್ಪರ್ಧೆಗಳು ಜೂನ್ 23ರಿಂದ 26ರ ವರೆಗೆ ನಡೆಯಲಿವೆ.



ಎರಿಯಾನ್ ನೈಟನ್ –ಎಎಫ್‌ಪಿ ಚಿತ್ರ

ಕೋಟ್ಯಧಿಪತಿಯಾಗಲು ಈ 6 ಗುಣ ಬೇಕು



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಕೋಟ್ಯಧಿಪತಿ ಆಗಬೇಕು ಎನ್ನುವ ಕನಸನ್ನು ಅನೇಕರು ಕಾಣುತ್ತಾರೆ. ಆದರೆ ಅದರಲ್ಲಿ ಸಫಲರಾಗುವವರು ಬೆರಳೆಣಿಕೆಯಷ್ಟು ಮಂದಿ ಮಾತ್ರ. ಕೋಟ್ಯಧಿಪತಿ ಎನ್ನುವುದು ಒಂದು ಮನಸ್ಥಿತಿ. ಅದರ ಬೆನ್ನುಹತ್ತಿ ಹಣಕಾಸು ಶಿಸ್ತಿನಿಂದ ಕಾರ್ಯಪ್ರವೃತ್ತರಾದರೆ ಮಾತ್ರ ಯಶಸ್ಸು ಸಿಗುತ್ತದೆ. ಬಹುತೇಕ ಕೋಟ್ಯಧಿಪತಿಗಳಲ್ಲಿ ಕಂಡುಬರುವ 6 ಪ್ರಮುಖ ಗುಣಗಳ ಬಗ್ಗೆ ತಿಳಿದುಕೊಳ್ಳೋಣ ಬನ್ನಿ.

ತೋರಿಕೆ ಶ್ರೀಮಂತಿಕೆಯಿಂದ ದೂರವಿರುವುದು: 'ನೀವೆಷ್ಟು ಶ್ರೀಮಂತರು ಎಂದು ತೋರಿಸಿಕೊಳ್ಳುವ ಸಲುವಾಗಿ ಮಾಡುವ ಖರ್ಚು, ನಿಮ್ಮನ್ನು ಅತ್ಯಂತ ವೇಗವಾಗಿ ಬಡವರನ್ನಾಗಿಸುತ್ತದೆ' ಎಂದು 'ದಿ ಸೈಕಾಲಜಿ ಆಫ್ ಮನಿ' ಪುಸ್ತಕದ ಲೇಖಕ ಮೋರ್ಗನ್ ಹೌಸೆಲ್ ಹೇಳುತ್ತಾರೆ. ಪಕ್ಕದ ಮನೆಯವರು ದುಬಾರಿ ಕಾರು ಖರೀದಿಸಿದರು, ಸ್ನೇಹಿತರು ಹೊಸ ಮೊಬೈಲ್ ಕೊಂಡರು ಎನ್ನುವ ಕಾರಣಕ್ಕೆ ಯಾವುದೋ ಹೊಸ ವಸ್ತುವಿನ ಖರೀದಿ ಮಾಡುತ್ತೀರಿ ಎಂದಾದಲ್ಲಿ ನೀವು ತೋರಿಕೆ ಶ್ರೀಮಂತಿಕೆಯ ಹಂಗಿನಲ್ಲಿದ್ದೀರಿ ಎನ್ನುವುದು ಖಚಿತ. ಏನನ್ನಾದರೂ ಕೊಳ್ಳುವ ಮೊದಲು ನಮ್ಮ ಅಗತ್ಯ, ಆದ್ಯತೆ ಮತ್ತು ಆರ್ಥಿಕ ಪರಿಸ್ಥಿತಿಯ ಬಗೆಗೆ ಸ್ಪಷ್ಟ ಕಲ್ಪನೆ ಇಟ್ಟುಕೊಂಡಿರಬೇಕು. ಸಾಧ್ಯವಾದಷ್ಟೂ ಕ್ರೆಡಿಟ್ ಕಾರ್ಡ್, ಇಎಂಐ ಸಾಲಗಳಿಂದ ದೂರವಿದ್ದು, ಉಳಿತಾಯದಿಂದ ಮಾತ್ರ ನಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಬೇಕು.

ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳುವುದು: ಬಹುತೇಕರು ಜೀವನ ನಿರ್ವಹಣೆಗಾಗಿ ನೌಕರಿಯಿಂದ ಬರುವ ಸಂಬಳ, ಇಲ್ಲ ಸಣ್ಣ ಬಿಸಿನೆಸ್‌ನಿಂದ ಬರುವ ಆದಾಯ ನೆಚ್ಚಿಕೊಂಡಿರುತ್ತಾರೆ. ಆದರೆ ಯಾವುದೇ ಸಂಕಷ್ಟದ ಕಾಲದಲ್ಲೂ ನಮ್ಮ ಆರ್ಥಿಕ ಸ್ಥಿತಿ ಹಳಿತಪ್ಪದಂತೆ ಎಚ್ಚರ ವಹಿಸಲು ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳುವ ಅವಶ್ಯಕತೆಯಿದೆ. ಸಂಭಾವನೆ, ಸ್ವಂತ ವ್ಯವಹಾರದ ಆದಾಯ, ಬಾಡಿಗೆ ಆದಾಯ, ಹೂಡಿಕೆ ಮೇಲಿನ ಗಳಿಕೆ, ಹಕ್ಕುಸ್ವಾಮ್ಯ ಮತ್ತು ಪುನರಾವರ್ತನೆ... ಹೀಗೆ ಯಾವುದೇ ನಿರ್ದಿಷ್ಟ ಕಾರ್ಯಕ್ಷೇತ್ರದಲ್ಲಿ ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳಲು ಏಳು ಮಾರ್ಗಗಳಿವೆ. ಅವುಗಳನ್ನು ಕಂಡುಕೊಂಡರೆ ನೀವು ಭವಿಷ್ಯದ ಆದಾಯದ ಬಗ್ಗೆ ಚಿಂತಿಸಬೇಕಿಲ್ಲ. ಡಿಜಿಟಲ್ ಯುಗದಲ್ಲಿ ಪರ್ಯಾಯ ಆದಾಯದ ಮೂಲಗಳನ್ನು ಕಂಡುಕೊಳ್ಳುವುದಕ್ಕೆ ಹಲವು ಆಯ್ಕೆಗಳಿವೆ. ಉದಾಹರಣೆಗೆ ಬ್ಲಾಗ್ ಬರವಣಿಗೆ, ಕಂಟೆಂಟ್ ರೈಟಿಂಗ್, ವಿಡಿಯೊ ಎಡಿಟಿಂಗ್, ಡಿಜಿಟಲ್ ಮಾರ್ಕೆಟಿಂಗ್, ಯುಟ್ಯೂಬ್ ಆರಂಭಿಸುವುದು, ಆನ್‌ಲೈನ್ ಟೀಚಿಂಗ್... ಹೀಗೆ ಅನೇಕ ಅವಕಾಶಗಳಿವೆ.

ಹಣಕಾಸು ಯೋಜನೆ ರೂಪಿಸುವುದು: 'ಯಾವ ವ್ಯಕ್ತಿ ಕುಟುಂಬದವರ, ಸಂಬಂಧಿಕರ ಮುಲಾಜಿಗೆ ಸಿಕ್ಕಿ ಹಣ ವ್ಯಯಿಸುವ ಬಗ್ಗೆ ತೀರ್ಮಾನಿಸುತ್ತಾನೋ ಆ ವ್ಯಕ್ತಿ ಆರ್ಥಿಕ ಹಿನ್ನಡೆ ಅನುಭವಿಸುತ್ತಾನೆ' ಎಂದು ಖ್ಯಾತ ಹೂಡಿಕೆ ತಜ್ಞ ವಾರನ್ ಬಫೆಟ್ ಹೇಳುತ್ತಾರೆ. ಕ್ರಮಬದ್ಧವಾದ ಉಳಿತಾಯ ಮತ್ತು ಹೂಡಿಕೆಗೆ ಸೂಕ್ತ ಹಣಕಾಸು ಯೋಜನೆ ರೂಪಿಸುವುದು ಬಹಳ ಮುಖ್ಯ. ಮೊದಲು ಯಾವ ಕಾರಣಕ್ಕೆ ಅಂದರೆ, ಮಕ್ಕಳ ವಿದ್ಯಾಭ್ಯಾಸ, ನಿವೃತ್ತಿ ಜೀವನ, ಕಾರು ಖರೀದಿ, ಮನೆ ಕಟ್ಟಲು, ಹೀಗೆ ಉದ್ದೇಶ ನಿರ್ಧರಿಸಿದ ಬಳಿಕ ಎಲ್ಲಿ ಹಣ ತೊಡಗಿಸಬೇಕು ಎನ್ನುವ ಬಗ್ಗೆ ತೀರ್ಮಾನಿಸಬೇಕು. ಆ ನಂತರದಲ್ಲಿ ಕ್ರಮಬದ್ಧವಾಗಿ ಹೂಡಿಕೆ ಮುನ್ನಡೆಸಿಕೊಂಡು ಹೋಗಬೇಕು. ಹೂಡಿಕೆ ಮಾಡುವಾಗ ಮ್ಯೂಚುವಲ್ ಫಂಡ್, ಷೇರು ಮಾರುಕಟ್ಟೆ, ರಿಯಲ್ ಎಸ್ಟೇಟ್ ಹೂಡಿಕೆಯನ್ನು ಕಡೆಗಣಿಸಬಾರದು. ಬೆಲೆ ಏರಿಕೆ ಅಂದರೆ ಹಣದುಬ್ಬರವನ್ನು ಮೀರಿ ಗರಿಷ್ಠ ಲಾಭಾಂಶ ನೀಡುವ ಶಕ್ತಿ ಈ ಹೂಡಿಕೆಗಳಿಗಿದೆ.

ಹೂಡಿಕೆ ಮೊದಲು, ಖರ್ಚು ಆಮೇಲೆ ಎನ್ನುವುದು: ಉಳಿತಾಯ ಒಂದು ಮನಸ್ಥಿತಿ. ಹೆಚ್ಚು ಆದಾಯ ಇರುವವರು ಮಾತ್ರ ಉಳಿತಾಯ, ಹೂಡಿಕೆ ಮಾಡಬಹುದು ಎನ್ನುವುದು ಒಪ್ಪುವ ಮಾತಲ್ಲ. ಬಹುತೇಕರ ಲೆಕ್ಕಾಚಾರದಲ್ಲಿ ಗಳಿಸಿದ ಆದಾಯದಲ್ಲಿ ಖರ್ಚು ಮಾಡಿದ ನಂತರ ಉಳಿಯುವ ಹಣವೇ ಉಳಿತಾಯ. ಆದರೆ ಉಳಿತಾಯದ ಈ ಲೆಕ್ಕಾಚಾರ ಬದಲಾಗಬೇಕು. ಗಳಿಸಿದ ಆದಾಯದಲ್ಲಿ ಉಳಿಸಿ, ಹೂಡಿಕೆ ಮಾಡಬೇಕು. ನಂತರ ಪ್ಲಾನ್ ಮಾಡಿಕೊಂಡು ಖರ್ಚು ಮಾಡಿದರೆ ಖಂಡಿತ ಹಣವಂತರಾಗಲು ಸಾಧ್ಯ. ವ್ಯಕ್ತಿಯೊಬ್ಬ ತಾನು ಗಳಿಸುವ ಆದಾಯದಲ್ಲಿ ಕನಿಷ್ಠ ಶೇಕಡ 20 ರಿಂದ 30 ರಷ್ಟು ಹಣವನ್ನಾದರೂ ಹೂಡಿಕೆ ಮಾಡಲೇಬೇಕು. ಆದಾಯ–ಹೂಡಿಕೆ = ಖರ್ಚು ಎನ್ನುವ ಲೆಕ್ಕಾಚಾರ ನಿಮ್ಮದಾಗಬೇಕು.

ಅನಿಶ್ಚಿತತೆಯ ಆಟ, ಸದ್ಯಕ್ಕೆ ಕಷ್ಟ ಗೂಳಿ ಓಟ



ಷೇರುಪೇಟೆಯಲ್ಲಿ ಅನಿಶ್ಚಿತತೆಯ ಓಟ ಶುರುವಾಗಿದೆ. ಏಪ್ರಿಲ್ 29 ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಕುಸಿತ ದಾಖಲಿಸಿವೆ. 57,060 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.24 ರಷ್ಟು ಕುಸಿತ ಕಂಡಿದೆ. 17,102 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.40 ರಷ್ಟು ತಗ್ಗಿದೆ. ಏಪ್ರಿಲ್ ತಿಂಗಳಲ್ಲಿ ಒಟ್ಟಾರೆಯಾಗಿ ಸೆನ್ಸೆಕ್ಸ್ ಮತ್ತು ನಿಫ್ಟಿ ಕ್ರಮವಾಗಿ ಶೇ 2.57 ಮತ್ತು ಶೇ 2.07 ರಷ್ಟು ಇಳಿಕೆಯಾಗಿವೆ. ಚೀನಾದಲ್ಲಿ ಕೋವಿಡ್ ಹೆಚ್ಚಳದ ಆತಂಕ, ಅಮೆರಿಕ ಫೆಡರಲ್ ಬ್ಯಾಂಕ್ ಬಡ್ಡಿ ದರವನ್ನು ಮತ್ತಷ್ಟು ಹೆಚ್ಚಳ ಮಾಡಬಹುದು ಎಂಬ ಅಂದಾಜು ಸೇರಿದಂತೆ ಹಲವು ಕಾರಣಗಳು ಸೂಚ್ಯಂಕಗಳ ಕುಸಿತಕ್ಕೆ ಕಾರಣವಾಗಿವೆ.

ಬಿಎಸ್‌ಇ ವಲಯವಾರು ಪ್ರಗತಿಯಲ್ಲಿ ಟೆಲಿಕಾಂ ಸೂಚ್ಯಂಕ ಶೇ 5 ರಷ್ಟು ಕುಸಿದಿದೆ. ತೈಲ ಮತ್ತು ಅನಿಲ ಸೂಚ್ಯಂಕ ಶೇ 3.51, ಲೋಹ ಸೂಚ್ಯಂಕ ಶೇ 2.88, ಐಟಿ ಸೂಚ್ಯಂಕ ಶೇ 2.16, ಐಟಿ ಸೂಚ್ಯಂಕ ಶೇ 2.14 ರಷ್ಟು ಇಳಿಕೆ ದಾಖಲಿಸಿವೆ. ಬಿಎಸ್‌ಇ ವಾಹನ ಮತ್ತು ಎಫ್‌ಎಂಸಿಜಿ ಸೂಚ್ಯಂಕಗಳು ಕ್ರಮವಾಗಿ ಶೇ 0.72 ಮತ್ತು ಶೇ 0.60ರಷ್ಟು ಜಿಗಿದಿವೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಹೀರೊ ಮೊಟೊಕಾರ್ಪ್ ಶೇ 9, ಎಚ್‌ಡಿಎಫ್‌ಸಿ ಲೈಫ್ ಶೇ 5, ಹಿಂದಸ್ಥಾನ್ ಯುನಿಲಿವರ್ ಶೇ 4.5 , ಕೋಟಕ್ ಬ್ಯಾಂಕ್ ಶೇ 3.5 ರಷ್ಟು ಹೆಚ್ಚಳ ಕಂಡಿವೆ. ಕೋಲ್ ಇಂಡಿಯಾ ಶೇ 10, ಬಿಪಿಸಿಎಲ್ ಶೇ 8, ಒಎನ್‌ಜಿಸಿ ಶೇ 8, ಅಪೋಲೊ ಹಾಸ್ಪಿಟಲ್ ಶೇ 7.5 ರಷ್ಟು ಕುಸಿದಿವೆ.

ಮುನ್ನೋಟ: ಮೇ 4ರಷ್ಟು ಬಹು ನಿರೀಕ್ಷಿತ ಎಲ್‌ಐಸಿ ಐಪಿಒ ಆರಂಭವಾಗುತ್ತಿದೆ. ಮಾರುಕಟ್ಟೆ ಏರಿಳಿತದ ಹಾದಿಯಲ್ಲಿರುವಾಗ ಅದಕ್ಕೆ ಯಾವ ರೀತಿಯ ಸ್ಪಂದನೆ ಸಿಗಲಿದೆ ಎನ್ನುವುದನ್ನು ಕಾದು ನೋಡಬೇಕಿದೆ. ಮೇ 3- 4ರಂದು ಅಮೆರಿಕದ ಫೆಡರಲ್ ಬ್ಯಾಂಕ್‌ನ ಮುಕ್ತ ಮಾರುಕಟ್ಟೆ ಸಮಿತಿ ನಿರ್ಣಯಗಳು ಹೊರಬೀಳಲಿದ್ದು ಬಡ್ಡಿ ದರ ಹೆಚ್ಚಳ ಎಷ್ಟರ ಮಟ್ಟಿಗೆ ಆಗಬಹುದು ಎನ್ನುವುದರ ಬಗ್ಗೆ ಸ್ಪಷ್ಟತೆ ಸಿಗಲಿದೆ. ಇನ್ನು ಜಾಗತಿಕ ಉತ್ಪಾದನಾ ಅಂಕಿ- ಅಂಶಗಳು ಕೂಡ ಹೊರಬೀಳಲಿದ್ದು, ಅರ್ಥ ವ್ಯವಸ್ಥೆ ಎಷ್ಟರ ಮಟ್ಟಿಗೆ ಆರೋಗ್ಯಕರವಾಗಿದೆ ಎಂಬ ಅಂದಾಜು ತಿಳಿಯಲಿದೆ.

ಈ ವಾರ ಬ್ರಿಟಾನಿಯಾ, ಹಿರೋ ಮೊಟೊಕಾರ್ಪ್, ಎಬಿಬಿ, ಅದಾನಿ ಗ್ರೀನ್, ಹ್ಯಾವೆಲ್ಸ್, ಟಾಟಾ ಕನ್ಸ್ಯೂಮರ್, ಟಾಟಾ ಪವರ್, ಅದಾನಿ ಪವರ್, ಡಾಬರ್, ಕ್ಯಾಮ್ಸ್, ಟಿವಿಎಸ್ ಮೋಟರ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಇನ್ಶುರೆನ್ಸ್‌ಗೆ ಆದ್ಯತೆ ಕೊಡುವುದು: ಬಹಳಷ್ಟು ಮಂದಿ 22ನೇ ವಯಸ್ಸಿಗೆ ಬರುವಷ್ಟರಲ್ಲಿ ಕೆಲಸಕ್ಕೆ ಸೇರಿರುತ್ತಾರೆ. ಆದರೆ ವರ್ಷಗಳೇ ಕಳೆದರೂ ಆರೋಗ್ಯ ವಿಮೆ ಮತ್ತು ಟರ್ಮ್ ಲೈಫ್ ಇನ್ಶುರೆನ್ಸ್ ಪಡೆಯುವ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ವೈಯಕ್ತಿಕ ಹಣಕಾಸು ಯೋಜನೆಯಲ್ಲಿ ಉಳಿತಾಯ ಮತ್ತು ಹೂಡಿಕೆಗಿಂತಲೂ ಮುಖ್ಯವಾದದ್ದು ಸುರಕ್ಷತೆ. ಹಾಗಾಗಿ ಇನ್ಶುರೆನ್ಸ್ ಬಹಳ ಮುಖ್ಯವಾದ ಅಂಶ. ಕೆಲಸಕ್ಕೆ ಸೇರಿದ ಕೂಡಲೇ ಒಂದು ಆರೋಗ್ಯ ವಿಮೆ ಮತ್ತು ಟೈರ್ಮ್ ಲೈಫ್ ಇನ್ಶುರೆನ್ಸ್ ಪಡೆದುಕೊಳ್ಳುವುದು ಉತ್ತಮ. ನಿಮ್ಮ ವಾರ್ಷಿಕ ಆದಾಯದ 15 ರಿಂದ 20 ಪಟ್ಟು ಟರ್ಮ್ ಲೈಫ್ ಇನ್ಶೂರೆನ್ಸ್ ಖರೀದಿ ಮಾಡಿದರೆ ಒಳಿತು.

ತುರ್ತುನಿಧಿ ಕಡೆಗಣಿಸದಿರುವುದು: ವೈದ್ಯಕೀಯ ತುರ್ತು, ಉದ್ಯೋಗ ನಷ್ಟ, ಉದ್ಯಮ ನಷ್ಟ ಹೀಗೆ ಅನೇಕ ಕಾರಣಗಳಿಗೆ ಪ್ರತಿಯೊಬ್ಬರೂ ಒಂದಲ್ಲ ಒಂದು ಹಂತದಲ್ಲಿ ಆರ್ಥಿಕ ಮುಗ್ಗಟ್ಟು ಎದುರಿಸುವುದು ಸರ್ವೇ ಸಾಮಾನ್ಯ. ಇಂತಹ ಅನಿರೀಕ್ಷಿತ ಸಂದರ್ಭಗಳಿಗಾಗಿ ತುರ್ತು ನಿಧಿ ಅಂದರೆ ಎಮರ್ಜೆನ್ಸಿ ಫಂಡ್ ಅಗತ್ಯ. ಕಷ್ಟಕಾಲದಲ್ಲಿ ಇದು ನಮ್ಮನ್ನು ಕಾಪಾಡುವ ಜತೆಗೆ, ಹೂಡಿಕೆಗಳಿಗೆ ಅಗತ್ಯ ಆರ್ಥಿಕ ಸಂಪನ್ಮೂಲವನ್ನು ಒದಗಿಸಿಕೊಡುತ್ತದೆ. ಕನಿಷ್ಠ 6 ತಿಂಗಳ ವೇತನವನ್ನು ತುರ್ತು ನಿಧಿಯಲ್ಲಿ ಇಟ್ಟುಕೊಳ್ಳುವುದು ಒಳಿತು. ಸ್ವಂತ ಉದ್ಯೋಗ ಹೊಂದಿರುವವರು ಕನಿಷ್ಠ 12 ತಿಂಗಳ ಆದಾಯವನ್ನು ತುರ್ತು ನಿಧಿಗೆ ಮೀಸಲಿಡಬಹುದು.

ನೆನಪಿಡಿ: ಮೇಲೆ ಕೊಟ್ಟಿರುವ 6 ಅಂಶಗಳು ಕೋಟ್ಯಧಿಪತಿ ಆಗಬೇಕು ಎನ್ನುವ ಮನಸ್ಥಿತಿಯವರು ರೂಢಿಸಿಕೊಳ್ಳಲೇಬೇಕಾದ ವಿಚಾರಗಳು. ಇನ್ನೂ ಇಂತಹ ಅನೇಕ ಶಿಸ್ತಿನ ಅಂಶಗಳನ್ನು ಹಣಕಾಸು ನಿರ್ವಹಣೆಯಲ್ಲಿ ಅಳವಡಿಸಿಕೊಂಡಾಗ ಕೋಟ್ಯಧಿಪತಿಯ ಕನಸು ಸಾಕಾರಗೊಳ್ಳುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

'ಅಕ್ಷಯ ತೃತೀಯ: ಹೆಚ್ಚು ಮಾರಾಟ'

ಮುಂಬೈ (ಪಿಟಿಐ): ಈ ಬಾರಿಯ ಅಕ್ಷಯ ತೃತೀಯದಲ್ಲಿ ಚಿನ್ನಾಭರಣಗಳ ಮಾರಾಟವು 2019ರ ಮಟ್ಟವನ್ನೂ ಮೀರಲಿದೆ ಎನ್ನುವುದು ಚಿನ್ನಾಭರಣ ವರ್ತಕರು, ಮಾರುಕಟ್ಟೆ ತಜ್ಞರ ನಿರೀಕ್ಷೆ ಆಗಿದೆ.

ದೇಶದಾದ್ಯಂತ ಮೇ 3ರಂದು (ಮಂಗಳವಾರ) ಅಕ್ಷಯ ತೃತೀಯ ಸಂಭ್ರಮ ಮನೆಮಾಡಲಿದೆ.

ಕೋವಿಡ್ ಸಂಬಂಧಿತ ಅಡಚಣೆಗಳಿಂದಾಗಿ ಕಳೆದ ಎರಡು ವರ್ಷಗಳಲ್ಲಿ ಅಕ್ಷಯ ತೃತೀಯ ಖರೀದಿಯು ನಿರೀಕ್ಷಿತ ಮಟ್ಟದಲ್ಲಿ ಇರಲಿಲ್ಲ. ಆದರೆ ಈ ವರ್ಷ ಆರ್ಥಿಕತೆಯು ಚೇತರಿಕೆ ಕಂಡಿರುವುದರಿಂದ ಮಾರಾಟ ಹೆಚ್ಚಾಗುವ ನಿರೀಕ್ಷೆ ಮಾಡಲಾಗಿದೆ. ಹೀಗಿದ್ದರೂ ಈಚಿನ ದಿನಗಳಲ್ಲಿ ಚಿನ್ನದ ದರ ಏರಿಕೆ ಆಗುತ್ತಿರುವುದು ಮಾರಾಟಗಾರರ ಆತಂಕಕ್ಕೆ ಕಾರಣವಾಗಿದೆ.



ಮಲ್ಟಿ ಕಮಾಡಿಟಿ ಎಕ್ಸ್‌ಚೇಂಜ್‌ನಲ್ಲಿ (ಎಂಸಿಎಕ್ಸ್) ಚಿನ್ನದ ದರವು 10 ಗ್ರಾಂಗೆ ₹ 52 ಸಾವಿರ ಇದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಔನ್ಸ್‌ಗೆ 1,897 ಡಾಲರ್‌ನಂತೆ ಮಾರಾಟ ಆಗುತ್ತಿದೆ.

'ಚಿನ್ನದ ದರ ಹೆಚ್ಚಾಗಿರುವುದರಿಂದ ಚಿನ್ನಾಭರಣಗಳ ಮುಂಗಡ ಬುಕಿಂಗ್ ಮೇಲೆ ಪರಿಣಾಮ ಉಂಟಾಗಿದೆ. ಹೀಗಿದ್ದರೂ ಕಳೆದ ಕೆಲವು ದಿನಗಳಿಂದ ಬೆಲೆಯು ಇಳಿಕೆ ಆಗುತ್ತಿರುವುದರಿಂದ ಬೇಡಿಕೆಯು ಹೆಚ್ಚಾಗುವ ನಿರೀಕ್ಷೆ ಇದೆ' ಎಂದು ಅಖಿಲ ಭಾರತ ಹರಳು ಮತ್ತು ಚಿನ್ನಾಭರಣ ದೇಶಿ ಸಮಿತಿ (ಜಿಜೆಸಿ) ಅಧ್ಯಕ್ಷ ಆಶಿಶ್ ಪೆಠೆ ಹೇಳಿದ್ದಾರೆ.

'ಸದ್ಯ ಇರುವ ಚಿನ್ನದ ದರ ಮತ್ತು ಗ್ರಾಹಕರ ಸಕಾರಾತ್ಮಕ ಮನಸ್ಥಿತಿ ಗಮನಿಸಿದಲ್ಲಿ ಈ ಭಾರಿ ಅಕ್ಷಯ ತೃತೀಯದಲ್ಲಿ ಚಿನ್ನಾಭರಣ ಮಾರಾಟವು 2019ರ ಮಟ್ಟಕ್ಕಿಂತಲೂ ಶೇ 5ರಷ್ಟು ಹೆಚ್ಚಿಗೆ ಇರುವ ನಿರೀಕ್ಷೆ ಇದೆ' ಎಂದು ತಿಳಿಸಿದ್ದಾರೆ.

'ಈ ಬಾರಿ ಚಿನ್ನಾಭರಣ ಮಾರಾಟ ಪ್ರಮಾಣವು ಶೇ 20 ರಿಂದ ಶೇ 25ರವರೆಗೆ ಇಳಿಕೆ ಆಗಲಿದೆ' ಎಂದು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಅಧ್ಯಕ್ಷ ಅಹ್ಮದ್ ಎಂ.ಪಿ. ಹೇಳಿದ್ದಾರೆ.

'ಮದುವೆ ಸಮಾರಂಭ ಮತ್ತು ಬೇಡಿಕೆಯನ್ನು ಗಮನಿಸಿದರೆ ಈ ಅಕ್ಷಯ ತೃತೀಯದಲ್ಲಿ 20 ಟನ್ ಮಾರಾಟ ಆಗುವ ಅಂದಾಜು ಇದೆ. 2019ರಲ್ಲಿ 15 ರಿಂದ 18 ಟನ್‌ಗಳಷ್ಟು ಮಾರಾಟ ಆಗಿತ್ತು' ಎಂದು ಪಿಎನ್‌ಜಿ ಜುವೆಲರ್ಸ್‌ನ ಅಧ್ಯಕ್ಷ ಸೌರಭ್ ಗಾಡ್ಗಿಳ್ ತಿಳಿಸಿದ್ದಾರೆ.

ವಿಮಾನ ಇಂಧನ ದರ ಶೇ 3.22ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ವಿಮಾನ ಇಂಧನ (ಜೆಟ್ ಇಂಧನ) ದರವನ್ನು ಭಾನುವಾರ ಶೇ 3.22ರಷ್ಟು ಹೆಚ್ಚಿಸಿವೆ.

ದೆಹಲಿಯಲ್ಲಿ ವಿಮಾನ ಇಂಧನ ದರ ಪ್ರತಿ ಕಿಲೋ ಲೀಟರಿಗೆ ₹ 3,649.13ರಷ್ಟು ಹೆಚ್ಚಾಗಿದ್ದು, ₹ 1.16 ಲಕ್ಷಕ್ಕೆ ತಲುಪಿದೆ. (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್).

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಂಧನ ದರ ಏರಿಕೆಗೆ ಅನುಗುಣವಾಗಿ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಈ ಪರಿಷ್ಕರಣೆ ಮಾಡಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹390
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹394

ಪರಿಷ್ಕೃತ ಐಟಿಆರ್‌ಗೆ ಹೊಸ ಅರ್ಜಿ ನಮೂನೆ

ನವದೆಹಲಿ (ಪಿಟಿಐ): ಆದಾಯ ತೆರಿಗೆಯ ಪರಿಷ್ಕೃತ ವಿವರ ಸಲ್ಲಿಸುವ ಹೊಸ ಅರ್ಜಿ ನಮೂನೆ 'ಐಟಿಆರ್–ಯು' ಕುರಿತು ಆದಾಯ ತೆರಿಗೆ ಇಲಾಖೆಯು ಭಾನುವಾರ ಅಧಿಸೂಚನೆ ಹೊರಡಿಸಿದೆ.

2019–20 ಮತ್ತು 2020–21ನೇ ಹಣಕಾಸು ವರ್ಷಕ್ಕೆ ಪರಿಷ್ಕೃತ ರಿಟರ್ನ್ಸ್ ಸಲ್ಲಿಸಲು ಐಟಿಆರ್–ಯು ಬಳಸಬಹುದು. ಪರಿಷ್ಕೃತ ಐಟಿಆರ್ ಸಲ್ಲಿಕೆಗೆ ನಿಖರವಾದ ಕಾರಣ ಏನು ಎನ್ನುವುದರ ಜೊತೆಗೆ ಎಷ್ಟು ಮೊತ್ತವನ್ನು ತೆರಿಗೆಗೆ ಒಳಪಡಿಸಬಹುದು ಎನ್ನುವುದನ್ನು ತೆರಿಗೆದಾರರು ಈ ಅರ್ಜಿ ನಮೂನೆಯಲ್ಲಿ ತಿಳಿಸಬೇಕು.

ತೆರಿಗೆ ಪಾವತಿದಾರರು, ಆದಾಯ ತೆರಿಗೆ ವಿವರವನ್ನು ಸಲ್ಲಿಸಿದ ಎರಡು ವರ್ಷಗಳ ಒಳಗೆ ಪರಿಷ್ಕರಿಸಲು ಅವಕಾಶ ಕಲ್ಪಿಸಲಾಗುತ್ತದೆ ಎಂದು ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಅದರಂತೆ ಈ ಅರ್ಜಿ ನಮೂನೆ ನೀಡಲಾಗಿದೆ.

'ಅಡುಗೆ ಎಣ್ಣೆ ದಾಸ್ತಾನು ಸಾಕಷ್ಟಿದೆ'

ನವದೆಹಲಿ (ಪಿಟಿಐ): ದೇಶದಲ್ಲಿ ಅಡುಗೆ ಎಣ್ಣೆಗಳ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿ ಇದೆ. ಬೆಲೆ ಮತ್ತು ಪೂರೈಕೆಯ ಮೇಲೆ ನಿಗಾ ವಹಿಸಲಾಗಿದೆ ಎಂದು ಕೇಂದ್ರ ಸರ್ಕಾರ ಭಾನುವಾರ ಹೇಳಿದೆ.

ಉದ್ಯಮದ ಮೂಲಗಳ ಪ್ರಕಾರ, ದೇಶದಲ್ಲಿ ಸದ್ಯ 21 ಲಕ್ಷ ಟನ್‌ಗಳಷ್ಟು ಅಡುಗೆ ಎಣ್ಣೆಗಳ ದಾಸ್ತಾನು ಇದೆ. 12 ಲಕ್ಷ ಟನ್‌ಗಳಷ್ಟು ಪ್ರಮಾಣದ ಎಣ್ಣೆಯು ಮೇನಲ್ಲಿ ಭಾರತಕ್ಕೆ ಬರಲಿದೆ. ಹೀಗಾಗಿ ಇಂಡೊನೇಷ್ಯಾವು ರಫ್ತು ನಿಷೇಧ ಹೇರಿರುವುದರಿಂದ ಆಗುವ ಕೊರತೆ ಸರಿದೂಗಿಸುವಷ್ಟು ಪ್ರಮಾಣದ ದಾಸ್ತಾನು ದೇಶದಲ್ಲಿ ಲಭ್ಯವಿದೆ ಎಂದು ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಅಡುಗೆ ಎಣ್ಣೆಗಳ ಅಕ್ರಮ ದಾಸ್ತಾನು ಮತ್ತು ಕಳ್ಳಸಾಗಣೆ ತಡೆಯುವ ನಿಟ್ಟಿನಲ್ಲಿ ಸರ್ಕಾರ ಹಲವು ಕ್ರಮಗಳನ್ನು ತೆಗೆದುಕೊಂಡಿದೆ ಎಂದೂ ಹೇಳಿದೆ.



ಕೆ.ಎಲ್. ರಾಹುಲ್, ದೀಪಕ್ ಹೂಡಾ ಜೊತೆಯಾಟದ ರಂಗು; ಡೆಲ್ಲಿಗೆ ನಿರಾಶೆ

ಖಾನ್ ಮಿಂಚು: ಲಖನೌಗೆ ಜಯ

ಮುಂಬೈ(ಪಿಟಿಐ): ನಾಯಕ ರಾಹುಲ್ ಮತ್ತು ದೀಪಕ್ ಹೂಡಾ ಹಾಕಿದ ಭದ್ರ ಬುನಾದಿಯ ಮೇಲೆ ಮಧ್ಯಮವೇಗಿ ಮೊಹಸಿನ್ ಖಾನ್ ಗೆಲುವಿನ ಸೌಧ ಕಟ್ಟಿದರು.

ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ರಾಹುಲ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡವು 6 ರನ್‌ನಿಂದ ಡೆಲ್ಲಿ ಕ್ಯಾಪಿಟಲ್ಸ್ ಎದುರು ಜಯಿಸಿತು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಲಖನೌ ತಂಡಕ್ಕೆ ಉತ್ತಮ ಆರಂಭ ಲಭಿಸಿತು. ರಾಹುಲ್ (77; 51ಎ, 4X4, 6X5) ಮತ್ತು ಹೂಡಾ (52; 34ಎ, 4X6, 6X1) 2ನೇ ವಿಕೆಟ್ ಜೊತೆಯಾಟದಲ್ಲಿ 95 ರನ್ ಸೇರಿಸಿದರು. ಇದರಿಂದ ತಂಡವು 3 ವಿಕೆಟ್‌ಗಳಿಗೆ 195 ರನ್ ಗಳಿಸಿತು.ಗುರಿ ಬೆನ್ನಟ್ಟಿದ ಡೆಲ್ಲಿ ತಂಡದ ಮಧ್ಯಮಕ್ರಮಾಂಕದ ಬ್ಯಾಟರ್‌ಗಳು ಮಾಡಿದ ಹೋರಾಟಕ್ಕೆ ಜಯ ಲಭಿಸಲಿಲ್ಲ. ಮೊಹಸಿನ್ (16ಕ್ಕೆ4) ಬೌಲಿಂಗ್ ಮುಂದೆ ಡೆಲ್ಲಿ ಬ್ಯಾಟರ್‌ಗಳು ಪರದಾಡಿದರು. ತಂಡವು 20 ಓವರ್‌ಗಳಲ್ಲಿ 7ಕ್ಕೆ 189 ರನ್ ಗಳಿಸಲಷ್ಟೇ ಶಕ್ತವಾಯಿತು.



ಮೊಹಸಿನ್ ಖಾನ್

ಪಂದ್ಯದ ಕೊನೆ ಓವರ್‌ನಲ್ಲಿ ಡೆಲ್ಲಿ ಜಯಕ್ಕೆ 21 ರನ್‌ಗಳ ಅವಶ್ಯಕತೆ ಇತ್ತು. ಸ್ಟೋಯಿನಿಸ್ ಹಾಕಿದ ಓವರ್‌ನ ಮೊದಲ ಎಸೆತವನ್ನು ಕುಲದೀಪ್ ಯಾದವ್ ಸಿಕ್ಸರ್‌ಗೆತ್ತಿದರು. ನಂತರದ ಎಸೆತ ವೈಡ್ ಆಯಿತು. ಅದರ ನಂತರ ಕುಲದೀಪ್ 1 ರನ್ ಗಳಿಸಿದರು. ಅಕ್ಷರ್ ಪಟೇಲ್‌ಗೆ ಹಾಕಿದ ಮೂರು ಎಸೆತಗಳಲ್ಲಿ ಸ್ಟೋಯಿನಿಸ್ ಒಂದೂ ರನ್ ಕೊಡದೇ ಲಖನೌ ಬಳಗದಲ್ಲಿ ಸಂತಸ ಅರಳಲು ಕಾರಣರಾದರು. ಕೊನೆ ಎಸೆತದಲ್ಲಿ ಅಕ್ಷರ್ ಸಿಕ್ಸರ್ ಹೊಡೆದರು!

ಮೊಹಸೀನ್ ಮ್ಯಾಜಿಕ್: ಡೆಲ್ಲಿ ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್, ರಿಷಭ್ ಪಂತ್, ರೋವ್ಮನ್ ಪೊವೆಲ್ ಮತ್ತು ಶಾರ್ದೂಲ್ ಠಾಕೂರ್ ವಿಕೆಟ್‌ಗಳನ್ನು ಮೊಹಸಿನ್ ಗಳಿಸಿದ್ದು ಡೆಲ್ಲಿ ಹಿನ್ನಡೆಗೆ ಕಾರಣವಾಯಿತು.

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್ 3ಕ್ಕೆ 195 (20 ಓವರ್)

ಡಿಕಾಕ್ ಸಿ ಲಲಿತ್ ಬಿ ಶಾರ್ದೂಲ್ 23 (13 ಎ, 4x3, 6x1), ರಾಹುಲ್ ಸಿ ಲಲಿತ್ ಬಿ ಶಾರ್ದೂಲ್ 77 (51 ಎ, 4x4, 6x5) ದೀಪಕ್ ಸಿ ಮತ್ತು ಬಿ ಶಾರ್ದೂಲ್ 52 (34 ಎ 4x6, 6x1), ಸ್ಟೋಯಿನಿಸ್ ಔಟಾಗದೆ 17 (16 ಎ, 4x1, 6x1), ಕೃಣಾಲ್ ಔಟಾಗದೆ 9 (6 ಎ)

ಇತರೆ (ಲೆಗ್‌ಬೈ 4, ವೈಡ್ 13) 17

ವಿಕೆಟ್ ಪತನ: 1-42 (ಕ್ವಿಂಟನ್ ಡಿಕಾಕ್, 4.2), 2-137 (ದೀಪಕ್ ಹೂಡಾ, 14.3), 3-176 (ಕೆ.ಎಲ್. ರಾಹುಲ್, 18.4)

ಬೌಲಿಂಗ್: ಮುಸ್ತಫಿಜುರ್ ರಹಮಾನ್ 4-0-37-0, ಚೇತನ್ ಸಕಾರಿಯ 4-0-44-0, ಅಕ್ಷರ್ ಪಟೇಲ್ 4-0-25-0, ಲಲಿತ್ ಯಾದವ್ 1-0-16-0, ಶಾರ್ದೂಲ್ ಠಾಕೂರ್ 4-0-40-3, ಕುಲದೀಪ್ ಯಾದವ್ 3-0-29-0

ಡೆಲ್ಲಿ ಕ್ಯಾಪಿಟಲ್ಸ್ 7ಕ್ಕೆ 189 (20 ಓವರ್)

ಪೃಥ್ವಿ ಸಿ ಗೌತಮ್ ಬಿ ಚಮೀರ 5 (7 ಎ, 6x1), ವಾರ್ನರ್ ಸಿ ಬದೋನಿ ಬಿ ಮೊಹಸಿನ್ 3 (4 ಎ) ಮಿಚೆಲ್ ಸಿ ಡಿಕಾಕ್ ಬಿ ಗೌತಮ್ 37 (20 ಎ, 4x3, 6x3), ರಿಷಭ್ ಬಿ ಮೊಹಸಿನ್ 44 (30 ಎ, 4x7, 6x1), ಲಲಿತ್ ಬಿ ರವಿ ಬಿಷ್ಣೋಯಿ 3 (4 ಎ), ರೋವ್ಮನ್ ಪೊವೆಲ್ ಸಿ ಪಾಂಡ್ಯ ಬಿ ಮೊಹಸಿನ್ 35 (21 ಎ, 4x3, 4x2), ಅಕ್ಷರ್ ಔಟಾಗದೆ 42 (24 ಎ, 4x1, 6x3) ಶಾರ್ದೂಲ್ ಸಿ ಕೃಣಾಲ್ ಬಿ ಮೊಹಸಿನ್ 1 (2 ಎ), ಕುಲದೀಪ್ ಔಟಾಗದೆ 16 (8 ಎ, 4x1, 6x1)

ಇತರೆ (ವೈಡ್ 3) 3

ವಿಕೆಟ್ ಪತನ: 1-5 (ಪೃಥ್ವಿ ಶಾ, 1.2), 2-13 (ಡೇವಿಡ್ ವಾರ್ನರ್, 2.6), 3-73 (ಮಿಚೆಲ್ ಮಾರ್ಷ್, 7.1), 4-86 (ಲಲಿತ್ ಯಾದವ್, 8.5), 5-120 (ರಿಷಭ್ ಪಂತ್, 12.6), 6-146 (ರೋವ್ಮನ್ ಪೊವೆಲ್, 16.1), 7-148 (ಶಾರ್ದೂಲ್ ಠಾಕೂರ್, 16.4)

ಬೌಲಿಂಗ್: ಮೊಹಸಿನ್ ಖಾನ್ 4-0-16-4, ದುಷ್ಮಂತ ಚಮೀರ 4-0-44-1, ಕೃಣಾಲ್ ಪಾಂಡ್ಯ 1-0-19-0, ಜೇಸನ್ ಹೋಲ್ಡರ್ 4-0-45-0, ರವಿ ಬಿಷ್ಣೋಯಿ 4-0-28-1, ಕೃಷ್ಣಪ್ಪ ಗೌತಮ್ 2-0-23-1, ಮಾರ್ಕಸ್ ಸ್ಟೋಯಿನಿಸ್ 1-0-14-0

ಫಲಿತಾಂಶ: ಲಖನೌ ಸೂಪರ್ ಜೈಂಟ್ಸ್‌ಗೆ 6 ರನ್‌ಗಳ ಜಯ

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	19
ಕುಲದೀಪ್	ಡೆಲ್ಲಿ	17
ನಟರಾಜನ್	ಹೈದರಾಬಾದ್	17

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	566
ರಾಹುಲ್	ಲಖನೌ	451
ಅಭಿಷೇಕ್	ಹೈದರಾಬಾದ್	328

ಇಂದಿನ ಪಂದ್ಯ: ಕೋಲ್ಕತ್ತ ನೈಟ್ ರೈಡರ್ಸ್– ರಾಜಸ್ಥಾನ ರಾಯಲ್ಸ್
ಆರಂಭ: ರಾತ್ರಿ 7.30
ಸ್ಥಳ: ಮುಂಬೈ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ರಾಷ್ಟ್ರೀಯ ಚೆಸ್: ಚಾರ್ವಿ ಚಾಂಪಿಯನ್

ಬೆಂಗಳೂರು: ಕರ್ನಾಟಕದ ಚಾರ್ವಿ ಅನಿಲ್‌ಕುಮಾರ್ 10 ವರ್ಷದೊಳಗಿನವರ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದ್ದಾಳೆ.

ಜಮ್ಮುವಿನಲ್ಲಿ ಭಾನುವಾರ ಕೊನೆಗೊಂಡ ಚಾಂಪಿಯನ್‌ಷಿಪ್‌ನ ಬಾಲಕಿಯರ ವಿಭಾಗದಲ್ಲಿ ಚಾರ್ವಿ (ಇಎಲ್‌ಒ 1267) ಅಜೇಯವಾಗುಳಿದಳು. 10 ಸುತ್ತುಗಳಲ್ಲಿ 9.5 ಪಾಯಿಂಟ್ಸ್ ಗಳಿಸಿ ಪ್ರಶಸ್ತಿ ಗೆದ್ದುಕೊಂಡಿದ್ದಾಳೆ. ಕರ್ನಾಟಕದ ಆದ್ಯಾ ರಂಗ ನಾಥ್ (8.5 ಪಾಯಿಂಟ್ಸ್)2ನೇ ಸ್ಥಾನ ಗಳಿಸಿದ್ದಾಳೆ.



ಚಾರ್ವಿ

ಚೆನ್ನೈ ಸೂಪರ್ ಕಿಂಗ್ಸ್ ಜಯಭೇರಿ

ಪುಣೆ: ಆರಂಭಿಕ ಬ್ಯಾಟರ್ ಋತುರಾಜ್ ಗಾಯಕವಾಡ್ ಕೇವಲ ಒಂದು ರನ್ ಅಂತರದಲ್ಲಿ ಶತಕ ಕೈತಪ್ಪಿಸಿಕೊಂಡರು. ಆದರೆ, ಅವರು ಡೆವೊನ್ ಕಾನ್ವೆಯೊಂದಿಗೆ ಶತಕದ ಜೊತೆಯಾಟವಾಡಿ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಜಯದ ಹಾದಿ ತೋರಿದರು.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಹೇಂದ್ರಸಿಂಗ್ ಧೋನಿ ಅವರು ನಾಯಕನ ಪಟ್ಟಕ್ಕೆ ಮರಳಿದ ಮೊದಲ ಪಂದ್ಯದಲ್ಲಿ ತಂಡವು 13 ರನ್‌ಗಳಿಂದ ಗೆದ್ದಿತು. ಋತುರಾಜ್ (99; 57ಎ, 6X6, 6X6) ಮತ್ತು ಕಾನ್ವೆ (ಔಟಾಗದೆ 85; 55ಎ, 4X8, 6X4) ಮೊದಲ ವಿಕೆಟ್ ಜೊತೆಯಾಟದಲ್ಲಿ 182 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 202 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಸನ್‌ರೈಸರ್ಸ್ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 189 ರನ್ ಗಳಿಸಿತು. ಚೆನ್ನೈ ತಂಡದ ಎಡಗೈ ಮಧ್ಯಮ ವೇಗಿ ಮುಖೇಶ್ ಚೌಧರಿ (46ಕ್ಕೆ4) ಸನ್‌ರೈಸರ್ಸ್‌ನ ಪ್ರಮುಖ ಬ್ಯಾಟರ್‌ಗಳ ಆಟಕ್ಕೆ ತಡೆಯೊಡ್ಡಿದರು. ಸನ್‌ರೈಸರ್ಸ್‌ನ ನಿಕೊಲಸ್ ಪೂರನ್ (ಔಟಾಗದೆ 64) ಅರ್ಧಶತಕ ವ್ಯರ್ಥವಾಯಿತು.



ಋತುರಾಜ್

ಋತುರಾಜ್ 99 ರನ್: ಸನ್‌ರೈಸರ್ಸ್ ತಂಡದ ಪ್ರಭಾವಿ ಬೌಲರ್‌ಗಳಾದ ಭುವನೇಶ್ವರ್ ಕುಮಾರ್, ಮಾರ್ಕೊ ಜೆನ್ಸೆನ್ ಮತ್ತು ಉಮ್ರನ್ ಮಲಿಕ್ ಅವರ ದಾಳಿಯನ್ನು ಋತುರಾಜ್ ಮತ್ತು ಕಾನ್ವೆ ಮೆಟ್ಟಿ ನಿಂತರು. 17.5 ಓವರ್‌ಗಳನ್ನು ಆಡಿದ ಈ ಜೋಡಿಯನ್ನು ಬೇರ್ಪಡಿಸಲು ಬೌಲರ್‌ಗಳು ಮಾಡಿದ ಪ್ರಯತ್ನಗಳಿಗೆ ಫಲ ಸಿಗಲಿಲ್ಲ. ಇನಿಂಗ್ಸ್‌ನಲ್ಲಿ 13 ಎಸೆತ ಬಾಕಿಯಿರುವಾಗ ನಟರಾಜನ್ ಎಸೆತದಲ್ಲಿ ಋತುರಾಜ್ ಔಟಾದರು. ನಿರಾಶೆಯಿಂದ ಡಗ್‌ಔಟ್‌ನತ್ತ ಹೆಜ್ಜೆ ಹಾಕಿದರು.

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 202 (ಋತುರಾಜ್ ಗಾಯಕವಾಡ್ 99, ಡೆವೊನ್ ಕಾನ್ವೆ ಔಟಾಗದೆ 85, ಮಹೇಂದ್ರಸಿಂಗ್ ಧೋನಿ 8, ಟಿ. ನಟರಾಜನ್ 42ಕ್ಕೆ2), ಸನ್‌ರೈಸರ್ಸ್ ಹೈದರಾಬಾದ್: 20 ಓವರ್‌ಗಳಲ್ಲಿ 6ಕ್ಕೆ189 (ಅಭಿಷೇಕ್ ಶರ್ಮಾ 39, ಕೇನ್ ವಿಲಿಯಮ್ಸನ್ 47, ನಿಕೊಲಸ್ ಪೂರನ್ ಔಟಾಗದೆ 64, ವಾಷಿಂಗ್ಟನ್ ಸುಂದರ್ 15, ಮುಖೇಶ್ ಚೌಧರಿ 46ಕ್ಕೆ4,ಮಿಚೆಲ್ ಸ್ಯಾಂಟನರ್ 36ಕ್ಕೆ1, ಡ್ವೇನ್ ಪ್ರಿಟೋರಿಯಸ್ 40ಕ್ಕೆ1) ಫಲಿತಾಂಶ: ಚೆನ್ನೈಗೆ 13 ರನ್ ಜಯ.

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	9	8	1	0	0	16	0.377
ಲಖನೌ	10	7	3	0	0	14	0.397
ರಾಜಸ್ಥಾನ	9	6	3	0	0	12	0.450
ಹೈದರಾಬಾದ್	9	5	4	0	0	10	0.471
ಬೆಂಗಳೂರು	10	5	5	0	0	10	-0.558
ಡೆಲ್ಲಿ	9	4	5	0	0	8	0.587
ಪಂಜಾಬ್	9	4	5	0	0	8	-0.470
ಕೋಲ್ಕತ್ತ	9	3	6	0	0	6	-0.006
ಚೆನ್ನೈ	9	3	6	0	0	6	-0.407
ಮುಂಬೈ	9	1	8	0	0	2	-0.836

*ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket